# ಅಧ್ಯಾಯ ೫

## ಕೈಗಾರಿಕೆಗಳು

ಕರ್ನಾಟಕವು ಸೇರಿದಂತೆ ಇಡೀ ದೇಶವು ಪ್ರಾಚೀನ ಕಾಲದಿಂದಲೂ ಕೃಷಿ ಮತ್ತೀತರ ಉಪಕಸುಬುಗಳನ್ನು ಪ್ರಧಾನವಾಗಿ ಅವಲಂಬಿಸಿದೆ. ಆದರೆ ಅವು ಗುಡಿಗಾರಿಕೆಯ ಮಟ್ಟದಲ್ಲಿಯೇ ಇದ್ದವು. ಮಾನಸೋಲ್ಲಾಸದ, ಸಮರಾಂಗಣ ಸೂತ್ರಧಾರ ಇತ್ಯಾದಿಗಳಲ್ಲಿ ಉಪಕಸುಬುಗಳ ಬಗ್ಗೆ ವಿವರಗಳಿವೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೇ ಬಡಗಿ, ಕುಂಬಾರ, ನೇಯ್ಗೆಗಾರ, ಅಕ್ಕಸಾಲಿಗರ ಬಗ್ಗೆ ಅವರ ಕಾರ್ಯ ವಿಧಾನ, ಆದಾಯ, ತೆರಿಗೆ ನೀಡುವಿಕೆ ಇತ್ಯಾದಿಗಳ ಬಗ್ಗೆ ಅನೇಕ ಸಂಗತಿಗಳು ದೊರೆಯುತ್ತವೆ.

ಕರ್ನಾಟಕದಲ್ಲಿ ವೈಯಕ್ತಿಕವಾಗಿ ಮನೆಗಳಲ್ಲಿ ಕೌಟುಂಬಿಕ ಜನರು ಸ್ಥಳೀಯವಾಗಿ ಲಭ್ಯವಿರುವ ಸೀಮಿತ ಸಂಪನ್ಮೂಲ ಬಳಸಿ ಗೃಹಕೃತ್ಯದ ಉಪಕರಣಗಳನ್ನು ತಯಾರಿಸುತ್ತಿದ್ದ ಬಗ್ಗೆ ಶಾಸನಗಳಲ್ಲಿ ವಿಪುಲವಾದ ಮಾಹಿತಿಗಳಿವೆ. ಎಣ್ಣೆಗಾಣ, ಮಗ್ಗ (ನೇಯ್ಗೆ), ಬಡಗಿ, ಕುಂಬಾರ, ಕಮ್ಮಾರ ಇತ್ಯಾದಿಗಳು ಈ ರೀತಿ ಪ್ರತ್ಯೇಕವಾಗಿದ್ದರೂ, ಶಿಲ್ಪ ಆಯುಧ ತಯಾರಿಕೆ ಹಾಗೂ ಉಪಕರಣ ನಿರ್ಮಾಣ ಕೈಗಾರಿಕೆಗಳು ಶ್ರೇಣಿ ಅಥವಾ ಸಮೂಹ ಕಾರ್ಯಾಗಾರಗಳಾಗಿದ್ದವು. ಇವುಗಳೂ ಸೇರಿದಂತೆ ಯುದ್ಧದ ಸಂದರ್ಭದಲ್ಲಿ ಯುದ್ಧೋಪಕರಣಗಳ ತಯಾರಿಕೆ ಒಂದು ಚಿಕ್ಕ ಕಾರ್ಖಾನೆಯಂತೆಯೇ ರೂಪುಗೊಳ್ಳುತ್ತಿತ್ತು. ಅರಮನೆಗಳಲ್ಲಿ ಕರಕುಶಲ ವಸ್ತುಗಳ ತಯಾರಿಕೆಗೆ ಪ್ರತ್ಯೇಕ ಕಾರ್ಯಾಗಾರವಿದ್ದು, ಹಲವಾರು ಕುಶಲಕರ್ಮಿಗಳು ಒಂದೆಡೆಯೇ ದುಡಿಯುತ್ತಿದ್ದರು.

ಕೋಲಾರ ಜಿಲ್ಲೆಯೂ ಇದರಿಂದ ಹೊರತಾಗಿರಲಿಲ್ಲ. ಇಪ್ಪತ್ತನೇ ಶತಮಾನದ ಆದಿಯಲ್ಲಿ ಜಿಲ್ಲೆಯಲ್ಲಿ ಹತ್ತಿಯ ಕೈಮಗ್ಗ, ಉಣ್ಣೆಯ ಕಂಬಳಿಗಳ ತಯಾರಿಕೆ ಮುಂತಾದ ಕೈಗಾರಿಕೆಗಳು ಕೋಲಾರ ಜಿಲ್ಲೆಯಲ್ಲಿದ್ದವು. ಬೀಡು ಕಬ್ಬಿಣದಿಂದ ಸುಂದರ ಕಲಾತ್ಮಕವಾದ ಬಾಗಿಲು, ತೋಟಗಳಲ್ಲಿ ವಿರಾಮಾಸನ, ತಡೆಗೋಡೆ, ರೈಲ್ವೆಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸುತ್ತಿದ್ದ ಕಾರ್ಯಾಗಾರಗಳಿದ್ದು, ಚಿಕ್ಕಬಳ್ಳಾಪುರದಲ್ಲಿ ಮಾತ್ರ ಅದರ ದುರಸ್ತಿ ಕಾರ್ಯ ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ಅಂತೆಯೇ ಚಿಂತಾಮಣಿಯಲ್ಲಿ ಚರ್ಮ ಹದಮಾಡುವ ಹಾಗೂ ಕೋಲಾರದಲ್ಲಿ ಹೆಂಚು ಮತ್ತು ಎಣ್ಣೆ ಗಾಣಗಳ ಚಿಕ್ಕ ಪ್ರಮಾಣದ ಕಾರ್ಖಾನೆಗಳಿದ್ದವು.

ಸಿಗರೇಟು ಹಾಗೂ ವಿದ್ಯುತ್ ಚಾಲಿತ ಮರಗೆಲಸದ ಕಾರ್ಖಾನೆಗಳು ಜಿಲ್ಲೆಯ ಇನ್ನೆರಡು ವಿಶೇಷ ಕಾರ್ಯಾಗಾರಗಳು. ಬೌರಿಂಗ್‌ಪೇಟೆಯಲ್ಲಿ ೧೯೦೫ರಲ್ಲಿ ೭೫,೦೦೦ ರೂ.ಗಳ ಬಂಡವಾಳದೊಂದಿಗೆ ಆರಂಭವಾದ ಸ್ಟಾರ್ ಟೊಬ್ಯಾಕೋ ಮಾನ್ಯೂಫ್ಯಾಕ್ಚರಿಂಗ್ ಕಂಪನಿ ಹಾಗೂ ೧೯೧೧ರಲ್ಲಿ ಅಲ್ಲಿಯೇ ೫೦,೦೦೦ ರೂ. ಬಂಡವಾಳದಿಂದ ಆರಂಭವಾದ ಸೌತ್ ಇಂಡಿಯನ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಗಳು ತೈಲ ಹಾಗೂ ಜಲಶಕ್ತಿಯಿಂದ ಚಲಿಸುವ ಯಂತ್ರೋಪಕರಣಗಳ ನೆರವಿನಿಂದ ೨೫,೦೦೦ ಮಣ ತಂಬಾಕು ಎಲೆಗಳನ್ನು ಬಳಸಿ ವರ್ಷಾವಧಿ ಒಂದು ಲಕ್ಷ ರೂಪಾಯಿಗಳಷ್ಟು ಸಿಗರೇಟ್ ತಯಾರಿಸುತ್ತಿದ್ದವು. ಇಲ್ಲಿಂದ ಹೊರ ಊರುಗಳಿಗೂ

ಸಿಗರೇಟ್ ರವಾನೆಯಾಗುತ್ತಿದ್ದವು. ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಪ್ರಪ್ರಥಮವಾಗಿ ವಿದ್ಯುತ್ ಸೌಲಭ್ಯ ಬಂದುದು ಗಣಿಗಾರಿಕೆಗಾದರೂ, ಇದರಿಂದ ಇನ್ನಿತರ ವಿದ್ಯುತ್‌ಚಾಲಿತ ಸೌಕರ್ಯಗಳೂ ತಲೆ ಎತ್ತಲು ಸಾಧ್ಯವಾಯಿತು. ಅವುಗಳಲ್ಲಿ ಸಣ್ಣಪ್ರಮಾಣದ ಮರಗೆಲಸದ ಕಾರ್ಖಾನೆಯೂ ಒಂದು. ಕೋಲಾರ ಇಲೆಕ್ಟ್ರಿಕಲ್ ಸಾ ಮಿಲ್‌ನಲ್ಲಿ ಮರದ ದಿಮ್ಮಿಗಳನ್ನು ಸಿದ್ಧ ಅಳತೆಗೆ ವಿದ್ಯುತ್‌ಚಾಲಿತ ಯಂತ್ರಗಳಿಂದ ಕತ್ತರಿಸುವಂತಾಗಿದ್ದು, ಮರಗೆಲಸ ಸುಲಭವಾಗಿ ಹೆಚ್ಚಿನ ಪರಿಶ್ರಮದಿಂದ ನಿರ್ವಹಿಸುವಂತಾಯಿತು. ಪ್ರಥಮ ಬಾರಿಗೆಂಬಂತೆ ನೇರವಾದ ಹಾಗೂ ವೃತ್ತಾಕಾರದ ಗರಗಸಗಳ ಬಳಕೆಯಾದವು. ಮರಮಟ್ಟುಗಳ ಉಪಕರಣ ಚಿನ್ನದ ಗಣಿಯ ಕಟ್ಟಡಗಳಿಗೆ ಬಳಕೆಯಾಗಿದ್ದು, ಉಳಿದಂತೆ ಜನಸಾಮಾನ್ಯರೂ ಬಳಸಿಕೊಳ್ಳುವಂತಾಯಿತು. ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಈ ಕಸುಬು ಕಲಿಸಲು ವೃತ್ತಿಶಿಕ್ಷಣ ನೀಡಲು ನೆರವಾಯಿತು.

ಆರು ಏಳನೇ ಶತಮಾನಗಳಿಂದಲೇ ಬಾಣ, ಪಲ್ಲವ, ಗಂಗ, ರಾಜರುಗಳು ಕಟ್ಟಿಸಿದ ಅನೇಕ ದೇವಾಲಯಗಳಿದ್ದು, ಅವುಗಳ ಕಲ್ಲಿನ ಶಿಲ್ಪಗಳು, ಕಂಬ ಇತ್ಯಾದಿ ಕೆತ್ತನೆಗಳು ಹಾಗೂ ಇಡೀ ದೇವಾಲಯಗಳ ರಚನೆಯೇ ಹಲವಾರು ಕುಶಲಕರ್ಮಿಗಳು ಒಟ್ಟಿಗೆ ಸೇರಿ ನಿರ್ಮಾಣ ಮಾಡುವಂತಹದು. ಇಲ್ಲಿಯೂ ಶಿಲ್ಪಿಗಳ ಸಮೂಹ ಅಥವಾ ಶ್ರೇಣಿಗಳು ಒಟ್ಟಿಗೆ ಒಂದು ಕಾರ್ಯಾಗಾರದಂತೆ ಶ್ರಮದಾನ ಮಾಡಿರುವುದು ಕಾಣಬಹುದು.

ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಗೃಹ ಕೈಗಾರಿಕೆಗಳು ಪ್ರಸಿದ್ಧಿಗೆ ಬಂದಿದ್ದವೆಂದು ನಿರ್ಧರಿಸುವುದಕ್ಕೆ ಕೆಲವೊಂದು ಆಧಾರ ದೊರೆಯುತ್ತವೆ. ಕೈಮಗ್ಗದ ದಪ್ಪ ಹಾಗೂ ಉತ್ತಮ ದರ್ಜೆಯ ಕಂಬಳಿ ತಯಾರಾಗುತ್ತಿದ್ದು, ಈ ವಸ್ತುಗಳಿಗೆ ಹೇರಳವಾದ ಬೇಡಿಕೆಯೂ ಇತ್ತು. ಹಿಂದಿನ ಕಾಲದಲ್ಲಿ ಕೋಲಾರದ ಕಂಬಳಿಗಳು ಪ್ರಖ್ಯಾತವಾಗಿದ್ದವು. ೧೯ನೇ ಶತಮಾನದ ಪೂರ್ವದಲ್ಲಿ ಮಾಲೂರು ಮತ್ತು ಅದರ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಕುರಿಗಳ ತುಪ್ಪಟದಿಂದ ಕಂಬಳಿಗಳನ್ನು ತಯಾರಿಸುತ್ತಿದ್ದುದಕ್ಕೆ ದಾಖಲೆಗಳಿವೆ. ಆರು ಮೊಳ ಉದ್ದ, ಮೂರು ಮೊಳ ಅಗಲದ ಕಂಬಳಿಯನ್ನು ನೇಯುವುದಕ್ಕೆ ೧೨ ಕುರಿಗಳ ತುಪ್ಪಟಬೇಕಾಗುತ್ತಿತ್ತು ಎಂದು ಹೇಳಲಾಗಿದೆ. ಅಲ್ಲದೆ ಕಂಬಳಿ ತಯಾರಿಕೆಗೇ ಅಂದಿನ ಸರ್ಕಾರಗಳೂ ಕೂಡ ಪ್ರೋತ್ಸಾಹವನ್ನು ಕೊಡುತ್ತಿದ್ದವು. ಇದರಿಂದಾಗಿ ಈ ಗೃಹಕೈಗಾರಿಕೆಯು ಭದ್ರವಾದ ಬುನಾದಿಯ ಮೇಲೆ ಸ್ಥಾಪಿತವಾಗಿತ್ತು.

ಮತ್ತೊಂದು ಹೆಸರುವಾಸಿಯಾಗಿದ್ದ ಕೈಗಾರಿಕೆಯೆಂದರೆ ಗಾಜಿನ ಬಳೆಗಳ ತಯಾರಿಕೆ. ಗಾಜಿನ ಬಳೆಗಳನ್ನು ಬಾಗೆಪಲ್ಲಿ, ಶಿಡ್ಲಘಟ್ಟ ತಾಲ್ಲೂಕುಗಳ ಹಳ್ಳಿಗಳಲ್ಲಿ ಪರಂಪರಾನುಗತವಾಗಿ ತಯಾರಿಸಲಾಗುತ್ತಿತ್ತು. ಹಿಂದಿನ ಕಾಲದಲ್ಲಿ ಬಾಗೇಪಲ್ಲಿಯ ಜುಲುಪಾಳ್ಯ, ಶಿಡ್ಲಘಟ್ಟ ತಾಲ್ಲೂಕಿನ ಕೆಲವು ಹಳ್ಳಿಗಳಾದ ತಿಮ್ಮಸಂದ್ರ ಮತ್ತು ಹೊಸಹಳ್ಳಿಗಳು ಅತ್ಯಾಕರ್ಷಕವಾದ ಗಾಜಿನ ಬಳೆಗಳ ತಯಾರಿಕೆಗೆ ಹೆಸರುವಾಸಿಯಾಗಿದ್ದವು. ಈ ಹಳ್ಳಿಗಳಲ್ಲಿ ಆಕರ್ಷಣೀಯವಾದ ಬಳೆಗಳನ್ನು ನುರಿತ ಕಸುಬುದಾರರು ತಯಾರಿಸುತ್ತಿದ್ದರು. ಒಂದು ಕಾಲದಲ್ಲಿ, ಮನೆಮಾತಾಗಿದ್ದ ಈ ಕೈಗಾರಿಕೆ ಇಂದು ನಶಿಸಿರುವುದು ಶೋಚನೀಯವಾದ ಸಂಗತಿ. ಇದಕ್ಕೆ ಕಾರಣವೆಂದರೆ, ಸುಲಭ ಬೆಲೆಯ ಬಳೆಗಳು ನೆರೆರಾಜ್ಯದಿಂದ ಈ ಜಿಲ್ಲೆಗೆ ಬರುತ್ತಿದ್ದುದು.

ಮಾಲೂರು ತಾಲೂಕಿನ ಟೇಕಲ್‌ನಲ್ಲಿ ಭೂಮಿಯಿಂದ ತೆಗೆದ ಉಪ್ಪು ಮಾರಾಟವಾಗುತ್ತಿತ್ತೆಂದು ಫ್ರಾನ್ಸಿಸ್ ಬುಕಾನನ್ ಹೇಳುತ್ತಾನೆ. ಶುಷ್ಕವಾದ ವಾತಾವರಣವಿರುವಾಗ ಭೂಮಿಯ ಮೇಲ್ಭಾಗವನ್ನು ಅಗೆದು ಗುಡ್ಡೆ ಮಾಡುತ್ತಿದ್ದರು. ಈ ಗುಡ್ಡೆಗಳ ಸುತ್ತಲೂ ಮೂರು ಅಡಿ ವ್ಯಾಸದ ಮತ್ತು ಒಂದು ಅಡಿ ಎತ್ತರದ ಅರ್ಧ ವೃತ್ತಾಕಾರದ ತೊಟ್ಟಿಗಳನ್ನು ಮಣ್ಣಿನಿಂದ ಮಾಡಿ ಇಡುತ್ತಿದ್ದರು. ಈ ತೊಟ್ಟಿಗಳ ತಳವನ್ನು ಹುಲ್ಲಿನಿಂದ ಮುಚ್ಚಿ, ನಂತರ ಕ್ಷಾರದ ಮಣ್ಣನ್ನು ತೊಟ್ಟಿಯ ಮೇಲ್ಭಾಗದವರೆಗೂ ತುಂಬುತ್ತಿದ್ದರು. ನಂತರ ತೊಟ್ಟಿಯೊಳಕ್ಕೆ ನೀರನ್ನು ಸುರಿಯುತ್ತಿದ್ದರು. ಈ ನೀರಿನಲ್ಲಿ ಮಣ್ಣಿನ ಉಪ್ಪಿನ ಅಂಶವು ಕರಗಿ ತಳದಲ್ಲಿ ನಿಲ್ಲುತ್ತಿತ್ತು. ಅನಂತರ ದ್ರಾವಣವನ್ನು ಬಿಸಿಲಿನಲ್ಲಿ ಒಣಗಿಸಿ, ಒಂದು ಸುಲ್ತಾನಿ ಪನಾಂಗೆ ಇಪ್ಪತ್ತು ಸೇರಿನಂತೆ ಮಾರಾಟ ಮಾಡುತ್ತಿದ್ದರು.

ಚಿಕ್ಕಬಳ್ಳಾಪುರವು ಕಲ್ಲು ಸಕ್ಕರೆಯ ತಯಾರಿಕೆಗೆ ಹೆಸರುವಾಸಿಯಾಗಿತ್ತು. ಇದರ ತಯಾರಿಕೆಯನ್ನು ಟಿಪ್ಪುಸುಲ್ತಾನನು ಅಭಿವೃದ್ಧಿಗೆ ತಂದನೆಂದು ಹೇಳಲಾಗಿದೆ. ಆದರೆ ಇದರ ತಯಾರಿಕಾ ವಿಧಾನವನ್ನು ಗುಪ್ತವಾಗಿ ಇಡಲಾಗಿತ್ತು. ಉತ್ತಮ ದರ್ಜೆಯ

ಕಲ್ಲು ಸಕ್ಕರೆಯನ್ನು ೧೦ ರೂಪಾಯಿಗೆ ೨೪ ಪೌಂಡುಗಳ ಒಂದು ಮಣದಂತೆ ಮಾರಾಟ ಮಾಡಲಾಗುತ್ತಿತ್ತು. ಉತ್ತಮ ದರ್ಜೆಯ ಮೃದುವಾದ ಕಲ್ಲು ಸಕ್ಕರೆ ಒಂದು ಸುಲ್ತಾನಿ ಪನಾಮ್‌ಗೆ ಒಂದು ಮಾಂಡ್ ಸಿಗುತ್ತಿದ್ದು, ಉತ್ತಮ ಹಾಗೂ ಸಾಮಾನ್ಯ ದರ್ಜೆಯ ಕಲ್ಲು ಸಕ್ಕರೆಗಳ ಬೆಲೆಗಳ ನಡುವಿನ ವ್ಯತ್ಯಾಸ ಮೂರು ರೂಪಾಯಿಯಿಂದ ಐದು ರೂಪಾಯಿಗಳಾಗಿತ್ತು. ಕಲ್ಲು ಸಕ್ಕರೆಯನ್ನು ತಯಾರಿಸುತ್ತಿದ್ದವರು ಕಬ್ಬಿನ ರಸವನ್ನು ರೈತರಿಂದ ಖರೀದಿಸುತ್ತಿದ್ದು, ಕಲ್ಲು ಸಕ್ಕರೆಯನ್ನು ತಯಾರಿಸುವುದಕ್ಕೆ ಚಿಕ್ಕಬಳ್ಳಾಪುರ ತಾಲೂಕಿನ ಕೆಲವು ಕಸುಬುದಾರರು ಮಾತ್ರ ಪರಿಣತಿಯನ್ನು ಹೊಂದಿದ್ದರು. ಆದರೆ ಗುಡಿಬಂಡೆ, ಹಾಗೂ ಶಿಡ್ಲಘಟ್ಟಗಳು ಸಹ ಕಲ್ಲು ಸಕ್ಕರೆ ಮತ್ತು ಬೆಲ್ಲದ ತಯಾರಿಕೆಗೆ ಹೆಸರುವಾಸಿಯಾಗಿದ್ದವು.

ಒಂದು ಕಾಲದಲ್ಲಿ ಶ್ರೀನಿವಾಸಪುರ ತಾಲೂಕು ಕೊಟ್ಟಣದ ಅಕ್ಕಿ ತಯಾರಿಕೆ, ಚರ್ಮ ಹದ ಮಾಡುವುದು ಹಾಗೂ ಕೈಮಗ್ಗದ ಬಟ್ಟೆ ತಯಾರಿಕೆಗೆ ಪ್ರಖ್ಯಾತವಾಗಿತ್ತು. ಕಾಲಕ್ರಮೇಣ ಆಧುನಿಕ ಅಕ್ಕಿ ಗಿರಣಿಗಳ ಸ್ಥಾಪನೆಯಿಂದಾಗಿ ಕೊಟ್ಟಣ ಅಕ್ಕಿ ತಯಾರಿಕೆಗೆ ಧಕ್ಕೆಯುಂಟಾಯಿತು. ಹಾಗೆಯೇ ಚರ್ಮವನ್ನು ಬೃಹತ್ ಪ್ರಮಾಣದಲ್ಲಿ ಬೇರೆ ಬೇರೆ ಕಡೆಗಳಿಗೆ ರಫ್ತು ಮಾಡುತ್ತಿದ್ದುದರಿಂದ ಚರ್ಮೋದ್ಯಮ ಕುಸಿಯಿತು. ಕೈಮಗ್ಗದ ಉತ್ಪನ್ನಗಳಿಗೆ ಬೇಡಿಕೆ ಹಾಗೂ ಮಾರುಕಟ್ಟೆಯ ಕೊರತೆಯಿಂದಾಗಿ ಕೈಮಗ್ಗಗಳು ನಶಿಸಿದವು. ಕ್ರಮೇಣ ಕೊಟ್ಟಣದ ಅಕ್ಕಿ, ಎಣ್ಣೆಗಾಣ, ಲೋಹದ ಕೆಲಸ, ಶಿಲ್ಪ ಕಲಾಕೃತಿ ತಯಾರಿಕೆ ಮುಂತಾದ ಉದ್ಯಮಗಳು ಚಿಂತಾಮಣಿ ತಾಲೂಕಿನಲ್ಲೂ ಸ್ಥಾಪನೆಗೊಂಡವು. ಆದರೆ ಹಣಕಾಸು, ತಾಂತ್ರಿಕ ಸೌಲಭ್ಯ ಹಾಗೂ ಕಚ್ಚಾವಸ್ತುಗಳ ಕೊರತೆಯಿಂದಾಗಿ ಇವು ಮುಚ್ಚಲ್ಪಟ್ಟವು. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲೂಕುಗಳು ರೇಷ್ಮೆ ನೇಯ್ಗೆ, ಕೊಟ್ಟಣದ ಅಕ್ಕಿ, ಶಿಲ್ಪ ಕಲಾಕೃತಿಗಳ ತಯಾರಿಕೆಗೆ ಪ್ರಸಿದ್ಧವಾಗಿದ್ದವು. ಮಾಲೂರು ತಾಲೂಕಿನ ಶಿವಾರ ಪಟ್ಟಣದಲ್ಲಿ ಶಿಲ್ಪ ಕಲಾಕೃತಿಗಳ ಕೆತ್ತನೆ ಇಂದಿಗೂ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. (ಅಧ್ಯಾಯ ೧೪ ನೋಡಿ)

## ಆಧುನಿಕ ಕೈಗಾರಿಕೆಗಳು

ಆಧುನಿಕ ಕೈಗಾರಿಕೋದ್ಯಮಗಳಾದ ಸಕ್ಕರೆ, ರೇಷ್ಮೆ, ಗಾಜು ಮುಂತಾದವುಗಳ ಬೆಳವಣಿಗೆಗೆ ಟಿಪ್ಪು ಸುಲ್ತಾನ್ ವಿಶೇಷ ಪ್ರಯತ್ನಪಟ್ಟಿದ್ದನೆಂದೂ, ಸಕ್ಕರೆ ತಯಾರಿಸುವ ತಂತ್ರಜ್ಞಾನವನ್ನು ಚೀನಾದಿಂದಲೂ, ರೇಷ್ಮೆ ತಯಾರಿಕೆಯನ್ನು ಬಂಗಾಳದಿಂದಲೂ ಪಡೆದಿದ್ದನೆಂದೂ ಫ್ರಾನ್ಸಿಸ್ ಬುಕಾನನ್ ತನ್ನ ಪ್ರವಾಸ ಕಥನದಲ್ಲಿ ತಿಳಿಸಿರುವನು. ಜಿಲ್ಲೆಯಲ್ಲಿ ೧೮೮೦ರಲ್ಲಿ ಚಿನ್ನದ ಗಣಿ ಆರಂಭವಾಗಿದ್ದರೂ, ಕೋಲಾರದ ಚಿನ್ನದ ಗಣಿಗಾಗಿಯೇ ಶಿವನಸಮುದ್ರದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿಸಿ ವಿದ್ಯುತ್ ಉತ್ಪಾದಿಸಿ ಪಡೆದುಕೊಂಡಿದ್ದು ೧೯೦೨ರಲ್ಲಿ. ಇದು ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ನಾಂದಿಯಾಯಿತು. ಮೈಸೂರು ಸಂಸ್ಥಾನವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದಾಗ ಜಿಲ್ಲೆಯಲ್ಲೂ ರೈಲು ಸಂಚಾರ ೧೮೬೪ರಲ್ಲಿ ಆರಂಭಗೊಂಡಿತು. ಕೋಲಾರದಿಂದ–ಚೆನ್ನೈವರೆಗೂ ರಸ್ತೆ ಜಾಲ ನಿರ್ಮಾಣಗೊಂಡಿತು. ಇವು ಆಧುನಿಕ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿದ್ದವು. ಜಿಲ್ಲೆಯಲ್ಲಿ ೧೮೮೦ರಲ್ಲಿ ಆರಂಭವಾದ ಚಿನ್ನದ ಗಣಿ ಕೆಲಸದಿಂದಾಗಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಆರಂಭಗೊಂಡವು. ೧೯೬೪ರಲ್ಲಿ ಬಂಗಾರಪೇಟೆ ತಾಲೂಕಿನಲ್ಲಿ ಭಾರತ್ ಅರ್ಥ್ ಮೂವರ್ಸ್ ಕಾರ್ಖಾನೆ ಪ್ರಾರಂಭಗೊಂಡಿತು. ೧೯೬೭ರಲ್ಲಿ ಗೌರಿಬಿದನೂರಿನಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ ತನ್ನ ಕಾರ್ಯ ಪ್ರಾರಂಭಿಸಿತು. ಇದರಿಂದ ಬರುವ ಕಾಕಂಬಿಯನ್ನು ಬಳಸಿಕೊಂಡು ಮಾದಕ ಪಾನೀಯಗಳನ್ನು ತಯಾರಿಸಲು ಗೌರಿ ಡಿಸ್ಟಿಲರಿಯನ್ನು ತೆರೆಯಲಾಯಿತು. ಕೋಲಾರ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತವು ದಿನಾಂಕ ೦೧.೦೪.೧೯೮೭ರಿಂದ ಕಾರ್ಯಾರಂಭ ಮಾಡಿತು. ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆರ್ಕೋ ಸ್ಪಿನ್ನಿಂಗ್ ಮಿಲ್ (ಲಿ), ಸ್ಪಾನ್ ಸಿಲ್ಕ್ ಇಂಡಿಯಾ (ಲಿ) ಚಿಕ್ಕಬಳ್ಳಾಪುರ, ಸ್ಪಾನ್ ಸಿಲ್ಕ್ ಎಕ್ಸ್‌ಪೋರ್ಟರ್ಸ್ (ಲಿ) ಚಿಕ್ಕಬಳ್ಳಾಪುರ, ಉಷಾ ಟೆಲಿಹೊಯಿಸ್ಟ್ (ಲಿ) ಕುಂಬಾರಹಳ್ಳಿ, ಕೋಲಾರ ತಾ॥, ಶ್ಯಾಂ ಅಹುಜಾ (ಲಿ) ಮಾಲೂರು, ಫ್ರೀಕಾರ್ಟ್ ಮಿಲ್ಸ್, ಗೌರಿಬಿದನೂರು ತಾ॥ ಹಾಗೂ ಭುವಾಲ್ಕ ಸ್ಟೀಲ್ ಇಂಡಸ್ಟ್ರೀಸ್ (ಲಿ) ಕೋಲಾರ ಮೊದಲಾದವು ಖಾಸಗಿ ವಲಯದ ಕಾರ್ಖಾನೆಗಳಾಗಿವೆ.

## ಪ್ರಸ್ತುತ ಕೈಗಾರಿಕೆಗಳು

ಜಿಲ್ಲೆಯಲ್ಲಿ ೨೦೦೪ರ ಮಾರ್ಚ್ ಅಂತ್ಯಕ್ಕೆ ಬೃಹತ್ ಮತ್ತು ಮಧ್ಯಮ ಪ್ರಮಾಣದ ೨೦ (ಇಪ್ಪತ್ತು) ಕೈಗಾರಿಕೆಗಳಿದ್ದು, ಅವುಗಳಲ್ಲಿ ಎರಡು ಸಾರ್ವಜನಿಕ ವಲಯಕ್ಕೂ, ಎರಡು ಸಹಕಾರಿ ವಲಯಕ್ಕೂ ಹಾಗೂ ಉಳಿದವು ಖಾಸಗಿ ವಲಯಕ್ಕೂ ಸೇರಿದ್ದು, ಅವುಗಳಲ್ಲಿ ತೊಡಗಿಸಿದ್ದ ಒಟ್ಟು ಬಂಡವಾಳ ೧೬,೫೫೩.೪೯ ಕೋಟಿ ರೂ.ಗಳಾಗಿದ್ದು, ೨೬,೭೮೫ ಜನರಿಗೆ ಉದ್ಯೋಗ ಒದಗಿಸಿದ್ದವು. ಪ್ರಸ್ತುತ ಭಾರತ್ ಗೋಲ್ಡ್ ಮೈನ್ಸ್ ಸೇರಿದಂತೆ ಹಲವು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ. ಇದೇ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿ ನೋಂದಣಿಗೊಂಡ ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕೆಗಳ ಸಂಖ್ಯೆ ೧೧,೬೮೩ ಆಗಿದ್ದು, ಇವುಗಳಲ್ಲಿ ತೊಡಗಿಸಿದ್ದ ಒಟ್ಟು ಬಂಡವಾಳ ೩೩,೫೪೫ ಲಕ್ಷ ರೂ.ಗಳಾಗಿದ್ದು, ೭೫,೩೯೯ ಮಂದಿಗೆ ಉದ್ಯೋಗ ದೊರಕಿಸಿವೆ. ಜಿಲ್ಲೆಯ ಆಹಾರ ಮತ್ತು ಪಾನೀಯ ಕ್ಷೇತ್ರದ ಘಟಕಗಳ ಸಂಖ್ಯೆ ೩೬ ಆಗಿದ್ದು, ಇವುಗಳಲ್ಲಿ ೨೨೮.೨೪ ಲಕ್ಷ ರೂ. ಬಂಡವಾಳ ತೊಡಗಿಸಲ್ಪಟ್ಟಿದ್ದು, ೧೮೦ ಜನರಿಗೆ ಉದ್ಯೋಗ ದೊರಕಿದೆ. ಟೆಕ್ಸ್‌ಟೈಲ್ಸ್ ಮಿಲ್ಲುಗಳ ಸಂಖ್ಯೆ ೧೩೪ ಆಗಿದ್ದು. ಇವುಗಳಲ್ಲಿ ೮೪೯.೫೬ ಲಕ್ಷ ಬಂಡವಾಳ ತೊಡಗಿಸಲಾಗಿದ್ದು, ೬೭೦ ಜನರಿಗೆ ಉದ್ಯೋಗವನ್ನೊದಗಿಸಲಾಗಿದೆ. ಇವಲ್ಲದೆ ಜಿಲ್ಲೆಯಲ್ಲಿದ್ದ ಇತರೆ ಕೈಗಾರಿಕೆಗಳು ಜನರಿಗೆ ಉದ್ಯೋಗ ಒದಗಿಸಿವೆ. ಜಿಲ್ಲೆಯಲ್ಲಿ ರೇಷ್ಮೆ ಉದ್ಯಮಕ್ಕೆ ಪೂರಕವಾದ ವಾತಾವರಣವಿದ್ದು, ಕೃಷಿಗೆ ಪೂರಕ ಉದ್ಯಮವಾಗಿ ಅದು ಹೊರಹೊಮ್ಮಿದೆ. ೨೦೦೨–೦೩ರ ಅಂತ್ಯಕ್ಕೆ ೨೪,೬೫೪.೮೭ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯಲಾಗುತ್ತಿದ್ದು, ೧೮,೨೫೨.೮೮ ಮೆಟ್ರಿಕ್ ಟನ್ ರೇಷ್ಮೆ ಗೂಡು ಉತ್ಪಾದಿಸಲ್ಪಟ್ಟಿತ್ತು.

## ೨೦೦೧ರ ಕೈಗಾರಿಕಾ ನೀತಿ

ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ತ್ವರಿತವಾದ ಕೈಗಾರಿಕಾಭಿವೃದ್ಧಿಯಾಗುವಂತೆ ಉತ್ತೇಜನ ಪೂರ್ವಕವಾದ ಕೈಗಾರಿಕಾ ನೀತಿಯನ್ನು ಪ್ರಕಟಿಸುತ್ತಾ ಬಂದಿದೆ. ರಾಜ್ಯ ಸರ್ಕಾರವು ೨೦೦೧ ರಲ್ಲಿ ಅನೇಕ ರಿಯಾಯಿತಿಗಳ ಮತ್ತು ಪ್ರೋತ್ಸಾಹಗಳಿಂದ ಕೂಡಿದ ಹೊಸ ಕೈಗಾರಿಕಾ ನೀತಿಯನ್ನು ಪ್ರಕಟಿಸಿತು. ಈ ನೀತಿಯು ೨೦೦೬ರ ವರೆಗೆ ಚಾಲ್ತಿಯಲ್ಲಿ ಇರುತ್ತದೆ.

ರಾಜ್ಯದಲ್ಲಿ ಮುಂದಿನ ದಶಕದಲ್ಲಿ ಮಾರುಕಟ್ಟೆ ಆಧಾರಿತ, ಜ್ಞಾನಾಧಾರಿತ, ಸಮರ್ಥ ಹಾಗೂ ಸ್ಪರ್ಧಾತ್ಮಕ ಕೈಗಾರಿಕಾ ಕ್ಷೇತ್ರದ ಕ್ಷಿಪ್ರ ಬೆಳವಣಿಗೆಯನ್ನು ಪ್ರವರ್ತಿಸುವ ಮೂಲಕ ಶೇ. ಎಂಟು ರಿಂದ ಒಂಭತ್ತು ರ ದರದಲ್ಲಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದು ಕರ್ನಾಟಕದ ಧ್ಯೇಯವಾಗಿದೆ. ಈ ಧ್ಯೇಯವನ್ನು ಸಾಧಿಸಲು ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ತಂತ್ರಜ್ಞಾನದ ಉನ್ನತೀಕರಣಕ್ಕೆ ಸಾಂಸ್ಥಿಕ ಬೆಂಬಲವನ್ನು ನೀಡುವುದು, ಉದ್ಯಮಗಳು ಅನುಸರಿಸಬೇಕಾದ ನೀತಿ–ನಿಯಮಾವಳಿಗಳನ್ನು ಸರಳಗೊಳಿಸುವುದು ಮತ್ತು ಮಾನವ ಸಂಪನ್ಮೂಲದ ಕ್ರಿಯಾಶೀಲ ಸಾಮರ್ಥ್ಯವನ್ನು ಹಾಗೂ ಉದ್ಯಮಶೀಲತೆಯನ್ನು ಅಧಿಕಗೊಳಿಸುವುದರ ಮೂಲಕ ಸಾಧಿಸಲಾಗುವುದು.

ಆದುದರಿಂದ ಪ್ರಸ್ತಾಪಿತ ಕೈಗಾರಿಕಾ ನೀತಿಯು ವಾರ್ಷಿಕ ಶೇ.೧೦ ರಿಂದ ೧೨ರ ದರದಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸುವುದು ಮತ್ತು ವರ್ಷಕ್ಕೆ ಕನಿಷ್ಠ ೨೦,೦೦೦ ಕೋಟಿ ರೂ.ಗಳ ಬಂಡವಾಳವನ್ನು ಆಕರ್ಷಿಸುವುದು ಹಾಗೂ ವಾರ್ಷಿಕವಾಗಿ ಸರಾಸರಿ ಕನಿಷ್ಟ ೧.೫೦ ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಗುರಿಯನ್ನು ಹೊಂದಿರುತ್ತದೆ.

## ಉತ್ತೇಜನ ಮತ್ತು ರಿಯಾಯಿತಿಗಳು

ಕೈಗಾರಿಕಾ ನೀತಿ ೨೦೦೧–೦೬ರ ಅನುಗುಣವಾಗಿ ಕೋಲಾರ ಜಿಲ್ಲೆಯ ಬಾಗೇಪಲ್ಲಿ ಹಾಗೂ ಶ್ರೀನಿವಾಸಪುರ ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ ತಾಲೂಕುಗಳಾದ ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು, ಚಿಂತಾಮಣಿ, ಚಿಕ್ಕಾಬಳ್ಳಾಪುರ, ಶಿಡ್ಲಘಟ್ಟ, ಗೌರಿಬಿದನೂರು ಮತ್ತು ಗುಡಿಬಂಡೆ ತಾಲ್ಲೂಕುಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಿ, 'ಸಿ'ವಲಯಕ್ಕೆ ಸೇರಿಸಲಾಗಿದ್ದು, ಐದು ವರ್ಷ ಕಾಲ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳೂ ಸೇರಿದಂತೆ ಎಲ್ಲಾ ಹೊಸ ಕೈಗಾರಿಕೆಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿಯನ್ನು ನೀಡಲಾಗಿದೆ. ಅತಿಸಣ್ಣ/ಸಣ್ಣ ಕೈಗಾರಿಕೆಗಳು ಸ್ಥಿರಾಸ್ತಿ ಮೌಲ್ಯದ ಶೇ. ೨೦ರಷ್ಟು ಅಥವಾ ಗರಿಷ್ಠ ಮೊತ್ತ ರೂ. ೧೦ ಲಕ್ಷಗಳವರೆಗೆ ಬಂಡವಾಳ ಸಹಾಯಧನವನ್ನು ಪಡೆಯುತ್ತವೆ. ಮಾಲೂರು ಮತ್ತು

ಚಿಕ್ಕಬಳ್ಳಾಪುರ ಕೈಗಾರಿಕಾ ಕ್ಷೇತ್ರಗಳನ್ನು ಕಿರು ವಿಕಾಸ ಕೇಂದ್ರಗಳೆಂದೂ, ಬಾಗೇಪಲ್ಲಿ ಮತ್ತು ಶ್ರೀನಿವಾಸಪುರ ತಾಲ್ಲೂಕುಗಳನ್ನು ಕೈಗಾರಿಕೆಗಳಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳೆಂದೂ ಪರಿಗಣಿಸಿ, ಇವುಗಳನ್ನು 'ಡಿ'ವಲಯಕ್ಕೆ ಸೇರಿಸಲಾಗಿದ್ದು, ಎಂಟು ವರ್ಷಗಳ ಕಾಲ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲಾಗಿದೆ. ಅತಿಸಣ್ಣ /ಸಣ್ಣ ಕೈಗಾರಿಕೆಗಳು, ಸ್ಥಿರಾಸ್ತಿ ಮೌಲ್ಯದ ಶೇ. ೨೫ರಷ್ಟು ಅಥವಾ ಗರಿಷ್ಠ ಮೊತ್ತ ರೂ. ೧೨.೫೦ ಲಕ್ಷಗಳವರೆಗೆ ಬಂಡವಾಳ ಸಹಾಯಧನವನ್ನು ಪಡೆಯುತ್ತವೆ.

## ವಿದ್ಯುತ್ ಪೂರೈಕೆ

ಯಾವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಯು ವಿಪುಲವಾದ ಶಕ್ತಿ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ. ಜಿಲ್ಲೆಯಲ್ಲಿ ಯಾವುದೇ ವಿಧವಾದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಲ್ಲದಿದ್ದರೂ, ಮಂಡ್ಯ ಜಿಲ್ಲೆಯ ಶಿವನಸಮುದ್ರದಿಂದ ಕೋಲಾರದ ಚಿನ್ನದ ಗಣಿಗಾರಿಕೆಗಾಗಿ ೧೯೦೨ರಲ್ಲಿ ವಿದ್ಯುತ್ ಉತ್ಪಾದನೆ ಪ್ರಾರಂಭಿಸಿ ಪೂರೈಸಲಾಗುತ್ತಿತ್ತು. ಆದರೆ ಈಗ ಜಿಲ್ಲೆಯು ಶಿವನಸಮುದ್ರದಿಂದ ವಿದ್ಯುತ್ ಸೌಲಭ್ಯ ಪಡೆಯುತ್ತಿಲ್ಲದಿದ್ದರೂ ಶರಾವತಿಯ ರಾಮಗೊಂಡಮ್ ಹಾಗೂ ಒರಿಸ್ಸಾದ ತಲಚೇರ್‌ಗಳಿಂದ (ಕೇಂದ್ರ ಪವರ್ ಗ್ರಿಡ್‌ನಿಂದ) ವಿದ್ಯುತ್ ಪಡೆದುಕೊಳ್ಳುತ್ತಿದೆ. ತಲಚೇರ್‌ನಲ್ಲಿ ಕಲ್ಲಿದ್ದಲನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳ ವಿದ್ಯುತ್ ಪರಿಸ್ಥಿತಿಯನ್ನು ಸುಧಾರಿಸಲು ಕೇಂದ್ರ ಪವರ್ ಗ್ರಿಡ್ (ಪಿ.ಜಿ.ಸಿ.ಐ.ಎಲ್) ಒರಿಸ್ಸಾದ ತಲಚೇರ್‌ನಿಂದ ಕರ್ನಾಟಕದ ಕೋಲಾರದವರೆಗೆ ೨೦೦೦ ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಮಾರ್ಗವನ್ನು ತಂದಿದೆ. ಇದಕ್ಕಾಗಿ ರೂ. ೩,೧೦೦ ಕೋಟಿ ವೆಚ್ಚ ಮಾಡಲಾಗಿದೆ. ಇಲ್ಲಿಂದ ಸರಬರಾಜು ಮಾಡಲಾಗುತ್ತಿರುವ ವಿದ್ಯುತ್‌ನಲ್ಲಿ ತಮಿಳುನಾಡು ಶೇ. ೩೧.೮ರಷ್ಟು, ಆಂದ್ರಪ್ರದೇಶ ಶೇ. ೨೪.೯ರಷ್ಟು, ಕರ್ನಾಟಕ ಶೇ. ೨೩.೩ರಷ್ಟು, ಕೇರಳ ಶೇ. ೧೬.೫ರಷ್ಟು ಹಾಗೂ ಪಾಂಡಿಚೇರಿ ಶೇ. ೩.೫ರಷ್ಟು ವಿದ್ಯುತ್ ಪಡೆದುಕೊಳ್ಳುತ್ತಿವೆ. ಇದು ಪ್ರಪಂಚದಲ್ಲಿಯೇ ಅತ್ಯಂತ ಉದ್ದವಾದ ಡಿಸಿ ಟ್ರಾನ್ಸ್‌ಮಿಷನ್ ಲೈನ್ ಆಗಿದೆ. ಇದರ ಉದ್ದ ೧,೩೬೭ ಕಿ.ಮೀ.ಆಗಿದೆ. ಇದು ನೇರ ಹೈವೋಲ್ಟೇಜ್ (ಹೆಚ್.ವಿ.ಡಿ.ಸಿ) ವಿದ್ಯುತ್ ಮಾರ್ಗವಾಗಿದ್ದು, ನಿರಂತರವಾಗಿ ೨೦೦೦ ಮೆಗಾವ್ಯಾಟ್ +/- ೫೦೦ ಕೆ.ವಿ.ಡಿ.ಸಿ, ಪ್ರತಿ ಎರಡು ಗಂಟೆಗಳಿಗೊಮ್ಮೆ ೨,೩೦೦ ಮೆಗಾವ್ಯಾಟ್ ಹಾಗೂ ಪ್ರತಿ ಅರ್ಧ ಗಂಟೆಗೊಮ್ಮೆ ೨,೬೦೦ ಮೆಗಾವ್ಯಾಟ್ ವಿದ್ಯುತ್ ಪೂರೈಕೆ ಮಾಡುತ್ತಿದೆ. ಜಿಲ್ಲೆಯಲ್ಲಿ ೧೦೫ ಟ್ರಾನ್ಸ್‌ಫಾರ್ಮರುಗಳನ್ನು ಅಳವಡಿಸಿ ೧೬೧೭.೩೦ ಎಂ.ವಿ.ಎ. ಸಾಮರ್ಥ್ಯವನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ೨೦೦೩ರ ಮಾರ್ಚ್ ಅಂತ್ಯದಲ್ಲಿದ್ದಂತೆ ವಿದ್ಯುತ್ ಪೂರೈಕೆಯ ವಿವರಗಳನ್ನು ಈ ಕೆಳಗಿನ ಕೋಷ್ಟಕ ೫.೧ರಲ್ಲಿ ಕೊಡಲಾಗಿದೆ.

**ಕೋಷ್ಟಕ ೫.೧: ಜಿಲ್ಲೆಯಲ್ಲಿ ೩೧.೩.೨೦೦೩ ರಲ್ಲಿದ್ದಂತೆ ಮಾಸ್ಟರ್ ಯೂನಿಟ್ ಉಪ ಕೇಂದ್ರಗಳ ವಿವರ**
**(೩೩ ಕೆ.ವಿ. ಮತ್ತು ಮೇಲ್ಪಟ್ಟು)**

| ಕ್ರಮ ಸಂಖ್ಯೆ | ಉಪಕೇಂದ್ರದ ಹೆಸರು | ವೋಲ್ಟೇಜು ಅನುಪಾತ ಕೆ.ವಿ.ಗಳಲ್ಲಿ | ಟ್ರಾನ್ಸ್‌ಫಾರ್ಮರುಗಳ ಸಂಖ್ಯೆ | ಸಾಮರ್ಥ್ಯ ಎಂ.ವಿ.ಎ.ಗಳಲ್ಲಿ | ಒಟ್ಟು ಸಾಮರ್ಥ್ಯ ಎಂ.ವಿ.ಎ.ಗಳಲ್ಲಿ |
|---|---|---|---|---|---|
| ೧ | **ಗೌರಿಬಿದನೂರು** | ೨೨೦/೬೬ | ೨೨ | ೧೦೦.೦೦ | ೨೨೦೦.೦೦ |
| | | ೬೬/೧೧ | ೨ | ೨೦.೦೦ | ೪೦.೦೦ |
| ೨ | **ಬಾಗೇಪಲ್ಲಿ** | ೬೬/೧೧ | ೨ | ೧೨.೫೦ | ೨೫.೦೦ |
| ೩ | **ಚಿಕ್ಕಬಳ್ಳಾಪುರ** | ೬೬/೧೧ | ೧ | ೮.೦೦ | ೮.೦೦ |
| | | ೬೬/೧೧ | ೧ | ೧೨.೫೦ | ೧೨.೫೦ |
| ೪ | **ಶಿಡ್ಲಘಟ್ಟ** | ೬೬/೧೧ | ೨ | ೮.೦೦ | ೧೬.೦೦ |
| | | ೩೩/೧೧ | ೧ | ೫.೦೦ | ೫.೦೦ |
| ೫ | **ಸೋಮನಾಥಪುರ** | ೬೬/೧೧ | ೨ | ೬.೩೦ | ೧೨.೬೦ |

ಮುಂದುವರಿದಿದೆ.............

| ಕ್ರಮ ಸಂಖ್ಯೆ | ಉಪಕೇಂದ್ರದ ಹೆಸರು | ವೋಲ್ಟೇಜು ಅನುಪಾತ ಕೆ.ವಿ.ಗಳಲ್ಲಿ | ಟ್ರಾನ್ಸ್‌ಫಾರ್ಮರುಗಳ ಸಂಖ್ಯೆ | ಸಾಮರ್ಥ್ಯ ಎಂ.ವಿ.ಎ.ಗಳಲ್ಲಿ | ಒಟ್ಟು ಸಾಮರ್ಥ್ಯ ಎಂ.ವಿ.ಎ.ಗಳಲ್ಲಿ |
|---|---|---|---|---|---|
| ೬ | ಪೆರೆಸಂದ್ರ | ೬೬/೧೧ | ೧ | ೬.೩೦ | ೬.೩೦ |
| | | ೬೬/೧೧ | ೧ | ೮.೦೦ | ೮.೦೦ |
| ೭ | ತೊಂಡೇಬಾವಿ | ೬೬/೧೧ | ೨ | ೧೨.೫೦ | ೨೫.೦೦ |
| ೮ | ದಿಬ್ಬೂರಹಳ್ಳಿ | ೬೬/೧೧ | ೨ | ೬.೩೦ | ೧೨.೬೦ |
| ೯ | ವಾಟದಹೊಸಹಳ್ಳಿ | ೬೬/೧೧ | ೨ | ೮.೦೦+೬.೩ | ೧೪.೩ |
| ೧೦ | ಚಿಕ್ಕಬಳ್ಳಾಪುರ ಕೈಗಾರಿಕೆ | ೬೬/೧೧ | ೨ | ೧೨.೫೦ | ೨೫.೦೦ |
| ೧೧ | ಗುಡಿಬಂಡೆ | ೬೬/೧೧ | ೧ | ೬.೩೦ | ೬.೩೦ |
| ೧೨ | ವೈ. ಹುಣಸೇನಹಳ್ಳಿ | ೬೬/೧೧ | ೨ | ೬.೩೦+೮.೦೦ | ೧೪.೩೦ |
| ೧೩ | ಸಾದಲಿ | ೬೬/೧೧ | ೧ | ೬.೩೦ | ೬.೩೦ |
| ೧೪ | ತಿಮ್ಮಪಲ್ಲಿ | ೬೬/೧೧ | ೧ | ೬.೩೦ | ೬.೩೦ |
| ೧೫ | ಮೇಲೂರು | ೩೩/೧೧ | ೧ | ೫.೦೦ | ೫.೦೦ |
| ೧೬ | ಕೆ.ಜಿ.ಎಫ್. | ೭೮/೨.೩ | ೬ | ೧.೭೫ | ೧೦.೫ |
| ೧೭ | ಬಿ.ಇ.ಎಂ.ಎಲ್. | ೬೬/೧೧ | ೧ | ೮.೦೦ | ೮.೦೦ |
| | (ಬೆಮಲ್)ನಗರ | ೬೬/೧೧ | ೨ | ೧೨.೫ | ೨೫.೦೦ |
| ೧೮ | ಮಾಲೂರು | ೬೬/೧೧ | ೨ | ೧೨.೫ | ೨೫.೦೦ |
| ೧೯ | ಮುಳಬಾಗಿಲು | ೬೬/೧೧ | ೨ | ೧೨.೫ | ೨೫.೦೦ |
| ೨೦ | ಮಾಸ್ತಿ | ೬೬/೧೧ | ೧ | ೮.೦೦ | ೮.೦೦ |
| | | ೬೬/೧೧ | ೧ | ೬.೩ | ೬.೩ |
| ೨೧ | ಬಂಗಾರಪೇಟೆ | ೬೬/೧೧ | ೨+೧ | ೧೨.೫+೧೨.೫ | ೩೭.೫೦ |
| ೨೨ | ಕ್ಯಾಸಂಬಳ್ಳಿ | ೬೬/೧೧ | ೨ | ೬.೩ | ೧೨.೬೦ |
| ೨೩ | ಲಕ್ಕೂರು | ೬೬/೧೧ | ೧ | ೮.೦೦ | ೮.೦೦ |
| ೨೪ | ನಂಗಲಿ | ೬೬/೧೧ | ೨ | ೮+೬.೩ | ೧೪.೩ |
| ೨೫ | ತಾಯಲೂರು | ೬೬/೧೧ | ೧ | ೬.೩ | ೬.೩ |
| ೨೬ | ಮಾಲೂರು | ೨೨೦/೬೬ | ೨ | ೧೦೦.೦ | ೨೦೦.೦೦ |
| ೨೭ | ಟೇಕಲ್ | ೬೬/೧೧ | ೧ | ೬.೩ | ೬.೩ |
| ೨೮ | ಅಂಡರ್ಸನ್ ಪೇಟೆ | ೬೬/೧೧ | ೨ | ೮.೦೦ | ೧೭.೦೦ |
| ೨೯ | ಕೋಲಾರ | ೨೨೦/೬೬/೧೧ | ೨ | ೧೦೦.೦೦ | ೨೦೦.೦೦ |
| | | ೬೬೧೨.೧ | ೨ | ೧೨.೨೦ | ೩೨.೫೦ |
| | | ೬೬/೩೩ | ೩ | ೮ | ೨೪.೦೦ |

ಮುಂದುವರಿದಿದೆ.............

| ಕ್ರಮ ಸಂಖ್ಯೆ | ಉಪಕೇಂದ್ರದ ಹೆಸರು | ವೋಲ್ಟೇಜು ಅನುಪಾತ ಕೆ.ವಿ.ಗಳಲ್ಲಿ | ಟ್ರಾನ್ಸ್‌ಫಾರ್ಮರುಗಳ ಸಂಖ್ಯೆ | ಸಾಮರ್ಥ್ಯ ಎಂ.ವಿ.ಎ.ಗಳಲ್ಲಿ | ಒಟ್ಟು ಸಾಮರ್ಥ್ಯ ಎಂ.ವಿ.ಎ.ಗಳಲ್ಲಿ |
|---|---|---|---|---|---|
| ೩೦ | ವಕ್ಕಲೇರಿ | ೬೬/೧೧ | ೨ | ೮ | ೧೬.೦೦ |
| ೩೧ | ಎಸ್.ಎಂ. ಮಂಗಲ | ೩೩/೧೧ | ೧ | ೫.೦೦ | ೫.೦೦ |
| | | ೩೩/೧೧ | ೧ | ೫.೦೦ | ೫.೦೦ |
| ೩೨ | ದಲಸನೂರು | ೩೩/೧೧ | ೨ | ೫.೦೦ | ೧೦.೦೦ |
| ೩೩ | ಮಲ್ಲಸಂದ್ರ | ೩೩/೧೧ | ೧ | ೫.೦೦ | ೫.೦೦ |
| | | ೩೩/೧೧ | ೧ | ೫.೦೦ | ೫.೦೦ |
| ೩೪ | ಶ್ರೀನಿವಾಸಪುರ | ೬೬/೧೧ | ೨ | ೧೨.೫ | ೨೫.೦೦ |
| ೩೫ | ಹುತ್ತೂರು | ೩೩/೧೧ | ೨ | ೫.೦೦ | ೧೦.೦೦ |
| ೩೬ | ಇರಗಂಪಲ್ಲಿ | ೬೬/೧೧ | ೧ | ೮.೦೦ | ೮.೦೦ |
| | | ೬೬/೧೧ | ೧ | ೧೨.೫ | ೧೨.೫ |
| ೩೭ | ವೇಮಗಲ್ | ೬೬/೧೧ | ೨ | ೧೨.೫ | ೨೫.೦೦ |
| ೩೮ | ಚಿಂತಾಮಣಿ | ೬೬/೧೨.೧ | ೧ | ೧೨.೫ | ೧೨.೫ |
| | | ೬೬/೧೧ | ೧ | ೧೨.೫೦ | ೧೨.೫೦ |
| ೩೯ | ತಲಗವಾರ | ೬೬/೧೧ | ೨ | ೧೨.೫೦ | ೨೫.೦೦ |
| ೪೦ | ಮೂಡಲಗೊಲ್ಲಹಳ್ಳಿ | ೬೬/೧೧ | ೨ | ೧೨.೫೦ | ೨೫.೦೦ |
| ೪೧ | ಲಕ್ಷ್ಮೀಪುರ | ೬೬/೧೧ | ೨ | ೬.೩ | ೧೨.೬೦ |
| ೪೨ | ತಮಕ | ೬೬/೧೧ | ೨ | ೮.೦೦ | ೧೬.೦೦ |
| ೪೩ | ಯೆನಗದಾಲೆ | ೬೬/೧೧ | ೨ | ೬.೩೦ | ೧೨.೬೦ |
| ೪೪ | ಅಡ್ಡಗಲ್ | ೬೬/೧೧ | ೧ | ೬.೩ | ೬.೩ |
| ೪೫ | ಯಲ್ದೂರು | ೬೬/೧೧ | ೧ | ೬.೩೦ | ೬.೩೦ |
| ೪೬ | ಚಿಂತಾಮಣಿ | ೨೨೦/೬೬ | ೨ | ೧೦೦.೦೦ | ೨೦೦.೦೦ |
| ೪೭ | ಮಂಚೇನಹಳ್ಳಿ | ೬೬/೧೧ | ೨ | ೮.೦೦ | ೧೬.೦೦ |
| ೪೮ | ಹೊಸೂರು | ೬೬/೧೧ | ೨ | ೮.೦೦ | ೧೬.೦೦ |
| ೪೯ | ಚೀಮಂಗಲ | ೬೬/೧೧ | ೨ | ೬.೩೦ | ೧೨.೬೦ |
| ೫೦ | ಸೋಮಯಾಜಿಪಲ್ಲಿ | ೬೬/೧೧ | ೨ | ೮.೦೦ | ೧೬.೦೦ |
| | ಒಟ್ಟು | | ೧೦೫ | | ೧೬೧೭೩೦ |

ಕೋಲಾರ ಜಿಲ್ಲೆಯಲ್ಲಿ ೨೮೩೫ ಹಳ್ಳಿಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿದ್ದು, ಮುಂದಿನ ಕೋಷ್ಟಕದಲ್ಲಿ ವಿದ್ಯುತ್ ಸೌಲಭ್ಯ ಪಡೆದಿರುವ ಹಳ್ಳಿಗಳ ವಿವರಗಳನ್ನು ಕೋಷ್ಟಕ ೫.೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨: ಜಿಲ್ಲೆಯಲ್ಲಿ ೨೦೦೨-೦೩ರ ಮಾರ್ಚ್ ಅಂತ್ಯಕ್ಕೆ ವಿದ್ಯುತ್ ಸೌಲಭ್ಯ ಪಡೆದ ತಾಲ್ಲೂಕುವಾರು ಗ್ರಾಮಗಳು ವಿವರ.**

| ಕ್ರಸಂ | ತಾಲೂಕು | ವಿದ್ಯುತ್ ಸೌಲಭ್ಯ ಪಡೆದ ಹಳ್ಳಿಗಳ ಸಂಖ್ಯೆ |
|---|---|---|
| ೧ | ಬಾಗೇಪಲ್ಲಿ | ೨೯೯ |
| ೨ | ಬಂಗಾರಪೇಟೆ | ೩೫೦ |
| ೩ | ಚಿಕ್ಕಬಳ್ಳಾಪುರ | ೨೧೩ |
| ೪ | ಚಿಂತಾಮಣಿ | ೩೩೦ |
| ೫ | ಗೌರಿಬಿದನೂರು | ೨೦೮ |
| ೬ | ಗುಡಿಬಂಡೆ | ೯೧ |
| ೭ | ಕೋಲಾರ | ೩೨೨ |
| ೮ | ಮಾಲೂರು | ೨೯೪ |
| ೯ | ಮುಳಬಾಗಿಲು | ೩೦೪ |
| ೧೦ | ಶಿಡ್ಲಘಟ್ಟ | ೩೩೭ |
| ೧೧ | ಶ್ರೀನಿವಾಸಪುರ | ೨೮೭ |
| | **ಒಟ್ಟು** | **೨೩೫** |

ವಿದ್ಯುತ್‌ಅನ್ನು ನೀರಾವರಿ ಪಂಪ್‌ಸೆಟ್‌ಗಳಿಗೆ, ಕೈಗಾರಿಕೆಗಳಿಗೆ ಮತ್ತು ಗೃಹಬಳಕೆಗೆ ಅಗತ್ಯಕ್ಕನುಗುಣವಾಗಿ ಆದ್ಯತೆ ನೀಡಿ ಪೂರೈಸಲಾಗುತ್ತಿದೆ. ೨೦೦೦-೦೧ರಲ್ಲಿ ೧೨,೭೫೬ ಕೈಗಾರಿಕಾ ಘಟಕಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಿದ್ದರೆ, ೨೦೦೧-೦೨ ರಲ್ಲಿ ೧೩,೩೯೯ ಘಟಕಗಳಿಗೆ ವಿದ್ಯುತ್ತನ್ನು ಒದಗಿಸಲಾಗಿತ್ತು. ಅಲ್ಲದೆ ೧,೨೭,೯೧೦ ನೀರಾವರಿ ಪಂಪುಸೆಟ್‌ಗಳಿಗೆ ವಿದ್ಯುತ್ ಒದಗಿಸಲಾಗಿತ್ತು.

## ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು

### ಭಾರತ್ ಗೋಲ್ಡ್ ಮೈನ್ಸ್ ಲಿ., (ಬಿ.ಜಿ.ಎಂ.ಎಲ್)

ಜಿಲ್ಲೆಯಲ್ಲಿ ಆಧುನಿಕ ರೀತಿಯ ಗಣಿಗಾರಿಕೆ ಪ್ರಾರಂಭವಾಗುವುದಕ್ಕಿಂತ ಮೊದಲು, ಭಾರತದಲ್ಲಿ ಚಿನ್ನದ ಅನ್ವೇಷಣೆ ಮತ್ತು ಉತ್ಪಾದನೆ ಹಳೆಯ ಕಂದಾಚಾರ ಪದ್ಧತಿಯಿಂದ ನಡೆಯುತ್ತಿತ್ತೆಂದು ಪ್ರಾಚೀನ ಭಾರತದ ಇತಿಹಾಸ ತಿಳಿಸುತ್ತದೆ.

ಭಾರತದಲ್ಲಿ ಅನಾದಿಕಾಲದಿಂದಲೂ ಆಭರಣಕ್ಕಾಗಿ ಚಿನ್ನದ ಬಳಕೆ ಇತ್ತೆಂದು ಪುರಾಣೇತಿಹಾಸಗಳಿಂದ ತಿಳಿದುಬರುತ್ತದೆ. ಆದರೆ ಗಣಿಕಾರಿಕೆ ಯಾವ ರೀತಿಯಲ್ಲಿ ನಡೆಯುತ್ತಿತ್ತೆಂದು ತಿಳಿದು ಬರುವುದಿಲ್ಲ. ಭಾರತದಲ್ಲಿ ಚಿನ್ನದ ಕೈಗಾರಿಕೆಯು ವ್ಯವಸ್ಥಿತವಾಗಿತ್ತೆಂದೂ, ಅದರ ಪ್ರಭಾವ ರೋಂ ಚಕ್ರಾಧಿಪತ್ಯವೂ ಸೇರಿದಂತೆ ಇತರ ದೇಶಗಳಿಗೆ ವ್ಯಾಪಿಸಿತ್ತೆಂದು ಅಭಿಪ್ರಾಯವಿದೆ. ಕ್ಷೀಣಿಸಿದ ಚಿನ್ನದ ಅದಿರು ಹಾಗೂ ಕ್ಷಾಮಗಳಿಂದಾಗಿ ಮಧ್ಯಯುಗದ ನಂತರ ಚಿನ್ನದ ಗಣಿಗಾರಿಕೆ ಕೆಲ ಶತಮಾನ ಸ್ಥಗಿತವಾದಂತೆ ತೋರುತ್ತದೆ.

### ಕೋಲಾರ ಜಿಲ್ಲೆಯಲ್ಲಿ ಚಿನ್ನದ ಗಣಿಗಾರಿಕೆ

ಪುರಾತನ ಕಾಲದಲ್ಲಿ ಗಣಿಗಾರಿಕೆಯು ದಖನ್ ಪ್ರದೇಶದಲ್ಲಿ, ಅದರಲ್ಲೂ ಮೈಸೂರು ಹಾಗೂ ಮದ್ರಾಸ್ ರಾಜ್ಯಗಳಲ್ಲಿ ವ್ಯಾಪಿಸಿತ್ತು. ಮೈಸೂರು ರಾಜ್ಯದ ಕೋಲಾರದ ಚಿನ್ನದ ಗಣಿ (೮೦೦ ಅಡಿ ಆಳ) ಹಾಗೂ ರಾಯಚೂರಿನ ಹಟ್ಟಿ ಚಿನ್ನದ ಗಣಿ (೬೦೦ ಅಡಿ ಆಳ)ಗಳು ಮುಖ್ಯವಾದವುಗಳು. ಹಿಂದೆ ಚಿನ್ನದ ಅದಿರು ತೆಗೆಯುವ ಕಾರ್ಯ ಪ್ರಾಚೀನ ಪದ್ಧತಿಯಲ್ಲೇ

ನಡೆಯುತ್ತಿತ್ತು. ಸುಮಾರು ೩೦೦ ಅಡಿಗಳ ಆಳದವರೆಗೆ ಬೃಹತ್ತಾದ ಗುಂಡಿಗಳನ್ನು ತೋಡಿ, ಬಂಡೆಗಳ ಮೇಲೆ ಕಟ್ಟಿಗೆಯನ್ನು ಹರಡಿ, ಬೆಂಕಿ ಹಾಕಿ ಕಾಯಿಸುತ್ತಿದ್ದರು. ನಂತರ ನೀರು ಸುರಿದು ಶಾಖವನ್ನು ಆರಿಸುತ್ತಿದ್ದರು. ಅನಂತರ ಸುತ್ತಿಗೆಗಳಿಂದ ಹೊಡೆದು ಕಲ್ಲನ್ನು ಚೂರು ಮಾಡಿ, ನಂತರ ಪುಡಿಮಾಡಿ, ನೀರಿನಲ್ಲಿ ಬೆರಸಿ, ಶೋಧಿಸಿ, ಚಿನ್ನವನ್ನು ತೆಗೆಯುತ್ತಿದ್ದರೆಂದು ಹೇಳಲಾಗಿದೆ. ನಂತರದಲ್ಲಿ ನಂದಿದುರ್ಗ ಗಣಿಯ ಒಂದು ಭಾಗವಾದ ಕೋರಮಂಡಲ ಗಣಿಯು ಸುಮಾರು ೨೦೦ ಅಡಿ ಆಳದವರೆಗೂ ಹೋಗಿದ್ದು, ಕೆಲಸಗಾರರು ಗಣಿಯೊಳಕ್ಕೆ ಮುಂದೆ ಸಾಗಿ ಹೋಗಲು ಮಾಡಿಕೊಂಡಿದ್ದ ಗೂಡು ಮತ್ತು ನೀರನ್ನು ಶೇಖರಿಸಲು ಬಳಸುತ್ತಿದ್ದ ತೊಟ್ಟಿಗಳ ಅವಶೇಷಗಳು ಕಂಡುಬಂದಿದ್ದು, ಇದರಿಂದ ಗಣಿಗಾರಿಕೆ ಹಿಂದಿನ ಕಾಲದಲ್ಲಿ ಹೇಗೆ ನಡೆಯುತ್ತಿತ್ತೆಂದು ತಿಳಿಯಬಹುದಾಗಿದೆ. ಟಿಪ್ಪು ಸುಲ್ತಾನನೂ ಚಿನ್ನದ ಗಣಿಗಾರಿಕೆಯ ವಿಷಯದಲ್ಲಿ ಆಸಕ್ತನಾಗಿದ್ದನು. ಆದರೆ ಅವನ ಪ್ರಯತ್ನ ವಿಫಲವಾಯಿತೆಂದು ಕೆಲವು ದಾಖಲೆಗಳಿಂದ ತಿಳಿದು ಬರುತ್ತದೆ. ಆದಾಗ್ಯೂ ಕೋಲಾರ ಸುತ್ತ ಮುತ್ತಲಿನ ಗಣಿ ಕೆಲಸದ ಪರಿಣಿತರು ಹಳೆಯ ಗಣಿಗಳಿಂದ ಚಿನ್ನವನ್ನು ತೆಗೆಯುತ್ತಿದ್ದರು. ಆದರೆ ಚಿನ್ನದ ಪ್ರಮಾಣ ಅತ್ಯಲ್ಪವಾಗಿತ್ತು. ಆಗಾಗ್ಗೆ ಈ ಗಣಿಗಳಲ್ಲಿ ಅನಾಹುತಗಳೂ ಸಂಭವಿಸುತ್ತಿದ್ದುದರಿಂದ ಭೂಗರ್ಭದಲ್ಲಿ ಗಣಿಗಾರಿಕೆಯನ್ನು ನಿಷೇಧಿಸಲು ೧೮೫೯ರ ನಿರ್ಬಂಧನಾ ಕಾಯಿದೆಯನ್ನು ಜಾರಿಗೆ ತರಲಾಯಿತು. ಆದ್ದರಿಂದ ಹಳೆಯ ವಿಧಾನದಲ್ಲಿ ಚಿನ್ನ ತೆಗೆಯುವ ಕಾರ್ಯ ಸಂಪೂರ್ಣವಾಗಿ ನಿಂತು ಹೋಯಿತು.

**ನಂತರದ ಬೆಳವಣಿಗೆ**

ಏಷ್ಯಾಟಿಕ್ ಜರ್ನಲ್(೧೮೦೪) ಪತ್ರಿಕೆಯಲ್ಲಿ ಬ್ರಿಟಿಷ್ ಸೈನ್ಯದ ೩೩ನೇ ತುಕಡಿಯ ದಂಡನಾಯಕ ಜಾನ್‌ವಾರೆನ್ ಎಂಬುವನು ಕೋಲಾರದ ಹತ್ತಿರ ಚಿನ್ನವು ಸಿಕ್ಕುವುದೆಂದು ವರದಿ ಮಾಡಿದ್ದಾನೆ. ಮೈಸೂರು ರಾಜ್ಯದ ಎಲ್ಲೆಯನ್ನು ಮಾರಿಕೊಪ್ಪದಿಂದ ಪ್ರತ್ಯೇಕಿಸಲು, ೧೮೦೨ ರಲ್ಲಿ ಇವನು ಕೈಗೊಂಡಿದ್ದ ಸರ್ವೇಕ್ಷಣಾ ಸಂದರ್ಭದಲ್ಲಿ ಉರಗಾಂವ್ ಮತ್ತು ಮಾರಿಕೊಪ್ಪಂಗಳಲ್ಲಿ ಚಿನ್ನವು ಸಿಗುವುದೆಂಬ ಸುದ್ದಿಯನ್ನು ಕೇಳಿದ್ದನು. ತತ್ಪರಿಣಾಮವಾಗಿ ಮುಂದಿನ ೬೦ ವರ್ಷಗಳಲ್ಲಿ ಅಲ್ಲಲ್ಲಿ ಗಣಿ ಕಾರ್ಯಾಚರಣೆಯನ್ನು ಮಾಡಲಾಯಿತು. ಬೆಂಗಳೂರಿನ ಕೆಲವು ಬ್ರಿಟಿಷ್ ಸೈನ್ಯಾಧಿಕಾರಿಗಳು ಅಲ್ಪ ಸ್ವಲ್ಪ ಬಂಡವಾಳದಿಂದ ಒಂದು ಸಂಸ್ಥೆಯನ್ನು ಸ್ಥಾಪಿಸಿ ಗಣಿಗಾರಿಕೆ ಪ್ರಾರಂಭಿಸಿದರು. ಆದರೆ ಕೆಲವೇ ತಿಂಗಳುಗಳಲ್ಲಿ ಹೂಡಲಾಗಿದ್ದ ಬಂಡವಾಳವೆಲ್ಲವೂ ಖರ್ಚಾದ್ದರಿಂದ, ಹಣದ ಅಭಾವ ತಲೆದೋರಿ ಅವರ ಪ್ರಯತ್ನ ನಿಂತುಹೋಯಿತು.

೧೮೭೦ರಲ್ಲಿ ಅದೇ ಸೇನಾ ತುಕಡಿಯ ಮತ್ತೊಬ್ಬ ಅಧಿಕಾರಿ ಮೈಕೇಲ್.ಎಫ್.ಲೆವಲೆ ಎಂಬುವನು ಮಾಡಿದ ಪ್ರಯತ್ನ ಗಮನಾರ್ಹವಾಗಿದೆ. ಈ ಐರಿಷ್ ಸಿಪಾಯಿಯು ನ್ಯೂಜಿಲೆಂಡಿನಲ್ಲಿದ್ದಾಗ ಚಿನ್ನದ ಗಣಿಗಾರಿಕೆಯ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಿದ್ದನು. ಕೋಲಾರದಲ್ಲಿ ಚಿನ್ನದ ಗಣಿಗಾರಿಕೆ ನಡೆಯುತ್ತಿದೆಯೆಂಬ ವಿಷಯವನ್ನು ತಿಳಿದು, ಕೋಲಾರದ ಚಿನ್ನದ ಗಣಿ ಪ್ರದೇಶಕ್ಕೆ ಬಂದು, ಪರಿಶೀಲನೆ ನಡೆಸಿ, ದೃಢಪಡಿಸಿಕೊಂಡು ಗಣಿ ಕಾರ್ಯವನ್ನು ನಡೆಸಲು ಒಪ್ಪಿಗೆಯನ್ನು ಬೇಡಿ, ೧೮೭೩ರಲ್ಲಿ ಮೈಸೂರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದನು. ತತ್ಪರಿಣಾಮವಾಗಿ ಇಲ್ಲಿ ಇವನಿಗೆ ೧೮೭೫ರಲ್ಲಿ ಎರಡು ಚದರ ಮೈಲಿ ವಿಸ್ತೀರ್ಣಕ್ಕೆ ಮೀರದಂತೆ, ಹತ್ತು ನೆಲೆಗಳಲ್ಲಿ ಗಣಿ ಕಾರ್ಯ ಮಾಡುವ ಇಪ್ಪತ್ತು ವರ್ಷಗಳ ಅವಧಿಯ ಗುತ್ತಿಗೆ ಸರ್ಕಾರದಿಂದ ದೊರೆಯಿತು. ಉರಗಾಂವ್ ಪ್ರದೇಶದಲ್ಲಿ ಒಂದು ಸುರಂಗ ಮಾರ್ಗವನ್ನು ತೆಗೆಯಲು ಪ್ರಾರಂಭಿಸಿದ ಲೆವೆಲೆಯು ಆ ಕಾರ್ಯಕ್ಕೆ ಅಪಾರ ಬಂಡವಾಳದ ಅಗತ್ಯವಿರುವುದನ್ನು ಮನಗಂಡು, ಅದಕ್ಕಾಗಿ ಪ್ರಭಾವಶಾಲಿ ವ್ಯಕ್ತಿಗಳ ಸಹಾಯಕ್ಕೆ ಪ್ರಯತ್ನಿಸಿದನು. ವಿಫಲನಾದಾಗ ೧೮೭೭ರಲ್ಲಿ ಗಣಿಗಾರಿಕೆಯ ಹಕ್ಕನ್ನು ಮದ್ರಾಸ್ ಸ್ಟಾಫ್ ಕೋರ್‌ನ ಮೇಜರ್ ಜನರಲ್ ಡೇಲಾಯಪಿಯರ್, ಬೇರಸ್ ಫೋರ್ಡ್ ಆಫ್ ದಿ ಮದ್ರಸ್ ಸ್ಟಾಫ್ ಮತ್ತು ಇತರರಿಗೆ ವರ್ಗಾಯಿಸುವಲ್ಲಿ ಯಶಸ್ವಿಯಾದನು. ಇವರೆಲ್ಲರೂ ಸೇರಿ ಕೋಲಾರ್ ಕನ್‌ಸೆಶನರೀಸ್ ಕಂಪನಿ ಲಿಮಿಟೆಡ್ ರಚಿಸಿ ಅಲ್ಪ ಪ್ರಮಾಣದಲ್ಲಿ ಕಾರ್ಯ ಪ್ರಾರಂಭಿಸಿದರು. ಆದರೆ ಕಂಪನಿಯಲ್ಲಿದ್ದ ಬಂಡವಾಳವು ಬಲುಬೇಗ ಬರಿದಾದಾಗ ನೂತನವಾಗಿ ಬಂಡವಾಳದ ಸಂಗ್ರಹಣೆಗೆ ಮುಂದಾದರು. ೧೮೭೯ರಲ್ಲಿ ಸ್ವರ್ಣಮಿಶ್ರಿತವಾದ ಶಿಲೆಯು ದೊರಕಿದಾಗ ಇನ್ನೂ ಹೆಚ್ಚಿನ ೧೦,೦೦೦ ಪೌಂಡು ಬಂಡವಾಳದೊಂದಿಗೆ ಹಿಂದೆ ಇದ್ದ ಉರಗಾಂವ್‌ನ ಮದ್ರಾಸ್ ಲಿಮಿಟೆಡ್ ಕಂಪನಿಯನ್ನು ಸ್ಥಾಪಿಸಿ ಗಣಿ ಕಾರ್ಯವನ್ನು ವಿಸ್ತರಿಸಿದರು. ತತ್ಪರಿಣಾಮವಾಗಿ ೧೮೮೧ರಲ್ಲಿ ಹನ್ನೊಂದು ಕಂಪನಿಗಳು ಒಟ್ಟು ೧೩,೦೦,೦೦೦ ಪೌಂಡು ಬಂಡವಾಳ ಹೂಡಿದವು. ಆದರೆ ಅವುಗಳಲ್ಲಿ ಕಾಲಕ್ರಮದಲ್ಲಿ ಮುಚ್ಚಲ್ಪಟ್ಟವು. ಆದರೆ ಆ ವೇಳೆಗಾಗಲೇ ಕೋಲಾರದಲ್ಲಿ ಚಿನ್ನವು ಲಭ್ಯವಿರುವುದೆಂಬ ಸುದ್ದಿ ವ್ಯಾಪಕವಾಗಿ ಹಬ್ಬಿತು.

## ಜಾನ್ ಟೈಲರ್ ಕಂಪನಿ

ಕಂಪನಿಯ ಮಾಲಿಕರು ಚಿನ್ನದ ಗಣಿ ಕಾರ್ಯದಲ್ಲಿ ತಜ್ಞರಾಗಿದ್ದ ಲಂಡನ್ನಿನ ಜಾನ್ ಟೈಲರ ಅಂಡ್ ಸನ್ಸ್ ಕಂಪನಿಯ ಅಧಿಕಾರಿಗಳನ್ನು ೧೮೮೦ ರಲ್ಲಿ ಸಂಪರ್ಕಿಸಿದರು. ಆದರೆ ಆದಾಗಲೇ ಹಲವಾರು ಕಂಪನಿಗಳು ಚಿನ್ನ ತೆಗೆಯುವ ಪ್ರಯತ್ನದಲ್ಲಿ ವಿಫಲವಾಗಿದ್ದವು. ಈ ನಡುವೆ ಜಾನ್ ಟೈಲರ್ ಮತ್ತು ಕ್ಯಾಪ್ಟನ್ ಪ್ಲಮ್ಮರ್ ಛಾಂಪಿಯನ್ ಲೋದೇ ಗಣಿಯನ್ನು ಪತ್ತೆ ಹಚ್ಚಿದ್ದರು. ಹೊಸದಾಗಿ ಸ್ಥಾಪಿಸಿದ್ದ ಕಂಪನಿಗಳೆಲ್ಲವೂ ಮುಚ್ಚಲ್ಪಟ್ಟಿದ್ದರೂ, ಬೆಲ್ ಡೇವಿಸ್ ಎಂಬುವನು ಮಾತ್ರ ಪ್ರಯತ್ನವನ್ನು ಮುಂದುವರಿಸಿದನು. ಮೈಸೂರು ಗಣಿಯಲ್ಲಿ ಚಿನ್ನ ತೆಗೆಯುವ ಕಾರ್ಯದಲ್ಲಿ ಯಶಸ್ಸು ದೊರೆತ ಮೇಲೆ, ಶೋಧನ ಕಾರ್ಯ ಮುಂದುವರಿಸುವುದಕ್ಕೆ ಕಂಪನಿಯ ಷೇರುದಾರರು ಒಪ್ಪಿಗೆಕೊಟ್ಟು ಹೆಚ್ಚಿನ ಬಂಡವಾಳವನ್ನು ಒದಗಿಸಿದರು. ಜಾನ್ ಟೈಲರ್ ಪ್ರಯತ್ನದಿಂದಾಗಿ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಚಿನ್ನದ ನಿಕ್ಷೇಪ ಇರುವುದು ಖಚಿತವಾಯಿತು. ಜಾನ್ ಟೈಲರನು ಚಿನ್ನದ ಶೋಧನ ಕಾರ್ಯವನ್ನು ಮಾಡದೇ ಇದ್ದಿದ್ದರೆ, ಕೋಲಾರ ಚಿನ್ನದ ಗಣಿಯ ಇತಿಹಾಸವೇ ಬದಲಾಗುತ್ತಿತ್ತು.

ಹೊತ್ತಿಗೆ ಕೋಲಾರದ ಚಿನ್ನದ ಗಣಿಯ ಯಶಸ್ಸು ೧೮೮೫ರ ಖಚಿತವಾಯಿತು. ಚಿನ್ನದ ಉತ್ಪಾದನೆ ಪ್ರಾರಂಭವಾದ ಮೊದಲನೆಯ ವರ್ಷದ ಅಂತ್ಯದಲ್ಲಿ ಅಂದರೆ ೧೮೮೬ರ ಆಖೈರಿಗೆ ಮೈಸೂರು ಗಣಿಕಂಪನಿಯು ಮೈಸೂರು ಸರ್ಕಾರಕ್ಕೆ ೩೩,೩೬೮ ರೂ.ಗಳ ರಾಜಧನವನ್ನು ಕೊಟ್ಟಿತು. ಉತ್ಪಾದನೆ ಹೆಚ್ಚಿದಂತೆ ಸರ್ಕಾರಕ್ಕೆ ಕೊಡುವ ರಾಜಧನವೂ ಹೆಚ್ಚುತ್ತಾ ಬಂದಿತ್ತು. ೧೮೯೫ರಲ್ಲಿ ೭.೩೩ ಲಕ್ಷ ರೂ.ಗಳಷ್ಟಿದ್ದ ರಾಜಧನ ೧೯೩೫ರ ಹೊತ್ತಿಗೆ ೯.೫೦ ಲಕ್ಷ ರೂ.ಗಳಿಗೆ ಹೆಚ್ಚಿತು. ತತ್ಪರಿಣಾಮವಾಗಿ ೧೮೯೪–೯೫ರಲ್ಲಿ ಒಂದು ಲಕ್ಷ ಪೌಂಡುಗಳ ಬಂಡವಾಳದೊಂದಿಗೆ ೧೩ ಕಂಪನಿಗಳು ಗಣಿಕಾರಿಕೆಯಲ್ಲಿ ತೊಡಗಿದ್ದವು. ೧೮೮೬–೮೭ರಲ್ಲಿ ಉತ್ಪಾದನೆಯಾದ ಚಿನ್ನ ೧೬,೩೨೫ ಔನ್ಸ್. ಅಂದಿನ ದಿನದ ಹಣದ ಮೌಲ್ಯದಲ್ಲಿ ಉತ್ಪಾದನೆಯಾದ ಚಿನ್ನದ ಮೌಲ್ಯ ೮.೫೮ ಲಕ್ಷ ರೂ.ಗಳಾಗಿತ್ತು. ಚಿನ್ನದ ಗಣಿ ಕಾರ್ಯಕ್ಕೆ ಸಮಸ್ತ ಬಂಡವಾಳವನ್ನೆಲ್ಲಾ ಇಂಗ್ಲೆಂಡಿನಲ್ಲೆ ಶೇಖರಿಸಿ, ಪೂರೈಕೆ ಮಾಡಲಾಗಿತ್ತು. ಅಲ್ಲದೆ ಕೋಲಾರದ ಗಣಿಗಳಲ್ಲಿ ಉತ್ಪಾದನೆಯಾದ ಚಿನ್ನವೆಲ್ಲಾ ಇಂಗ್ಲೆಂಡಿನಲ್ಲೇ ಮಾರಾಟವಾಗುತ್ತಿತ್ತು.

ಚಿನ್ನದ ಗಣಿಗಾರಿಕೆಯ ಇತಿಹಾಸದಲ್ಲಿ ಜಾನ್ ಟೈಲರ್ ಕಂಪನಿಯ ಇಂಜಿನಿಯರುಗಳು ಮಾಡಿದ ಕಾರ್ಯ ಸ್ತುತ್ಯಾರ್ಹವಾದುದು. ೧೭೭೮ ರಲ್ಲಿ ಸ್ಥಾಪಿತವಾದ ಜಾನ್ ಟೈಲರ್ ಕಂಪನಿಯು ವಿಶ್ವದಾದ್ಯಂತ ಗಣಿ ಕಾರ್ಯಾಚರಣೆಯಲ್ಲಿ ದಕ್ಷ ಸಲಹೆಗಾರರೆಂದು ಹೆಸರು ಗಳಿಸಿತ್ತು. ಮುಂದೆ ಕೋಲಾರದ ಚಿನ್ನದ ಗಣಿಗಳ ನಿರ್ವಹಣೆ ಮತ್ತು ಅಭಿವೃದ್ಧಿಯ ಹೊಣೆ ಜಾನ್ ಟೈಲರ್‌ನ ಮೊಮ್ಮಗನ ಪಾಲಿಗೆ ಬಂದಿತು. ಇವನು ದಕ್ಷತೆಯಿಂದ ಕಾರ್ಯಾಚರಣೆ ಮಾಡಿದ ಪರಿಣಾಮವಾಗಿ ಚಿನ್ನದ ಗಣಿಗಾರಿಕೆಯು ಖ್ಯಾತಿ ಗಳಿಸಿತು. ಕಳೆದ ಶತಮಾನದ ೭೫ ವರ್ಷಗಳಲ್ಲಿ ವ್ಯವಸ್ಥಿತವಾಗಿ ಚಿನ್ನದ ಗಣಗಾರಿಕೆಯು ನಡೆದು ಹಲವಾರು ಕಂಪನಿಗಳು ಸ್ಥಾಪಿತವಾದವು. ಅವುಗಳಲ್ಲಿ ಬಹುತೇಕ ಕಂಪನಿಗಳು ನಂತರದಲ್ಲಿ ದಿವಾಳಿಯಾದವು ಇಲ್ಲವೇ ದೊಡ್ಡ ಕಂಪನಿಗಳೊಂದಿಗೆ ಸೇರ್ಪಡೆಯಾದವು. ಅಂತಿಮವಾಗಿ ೧೯೫೪ರ ಹೊತ್ತಿಗೆ ಕೋಲಾರದ ಗಣಿಗಳ ಕಾರ್ಯಾಚರಣೆಯಲ್ಲಿ ಮೂರು ಕಂಪನಿಗಳು ತೊಡಗಿದ್ದವು.

## ಚಿನ್ನದ ಗಣಿಗಳ ರಾಷ್ಟ್ರೀಕರಣ

ಮೈಸೂರು ಸರ್ಕಾರದ ಕೋರಿಕೆಯಂತೆ ಹೊಸ ಕಂಪನಿಗಳನ್ನು ಭಾರತದಲ್ಲೇ ೧೯೫೦ರಲ್ಲಿ ನೋಂದಣಿಮಾಡಿಸಬೇಕಾಯಿತು. ಆದರೆ ಷೇರು ಬಂಡವಾಳವನ್ನೆಲ್ಲಾ ಬ್ರಿಟಿಷ್ ಕಂಪನಿಗಳೇ ಹೂಡಿದ್ದವು. ಜಾನ್ ಟೈಲರ್ ಅಂಡ್ ಸನ್ಸ್ ಕಂಪನಿಯು ಭಾರತೀಯ ಅಂಗ ಸಂಸ್ಥೆಯನ್ನು ಸ್ಥಾಪಿಸಿ ವ್ಯವಹಾರವನ್ನು ನಡೆಸುತ್ತಿತ್ತು.

ಮೈಸೂರು ಸರ್ಕಾರವು ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡುವ ಉದ್ದೇಶವನ್ನು ೧೯೫೬ರಲ್ಲಿ ವ್ಯಕ್ತಪಡಿಸಿತು. ಆ ಸಂದರ್ಭದಲ್ಲಿ ಮೈಸೂರು ಸರ್ಕಾರಕ್ಕೂ ಜಾನ್ ಟೈಲರ್ ಕಂಪನಿಯ ಅಧಿಕಾರಿಗಳಿಗೂ ಒಪ್ಪಂದವಾಗಿ ಒಂದು ಕೋಟಿ ಅರವತ್ನಾಲ್ಕು ಲಕ್ಷ ರೂ.ಗಳ ಪರಿಹಾರದೊಂದಿಗೆ ಕಂಪನಿಗಳ ಆಸ್ತಿ ಮತ್ತು ಹೊಣೆಗಾರಿಕೆಯನ್ನು ಮೈಸೂರು ಸರ್ಕಾರ ವಹಿಸಿಕೊಂಡಿತು. ನವೆಂಬರ್ ೨೯,೧೯೫೬ ರಂದು ಸರ್ಕಾರಕ್ಕೆ ಗಣಿಗಳ ಸಮಸ್ತ ಅಧಿಕಾರವು ಹಸ್ತಾಂತರವಾಯಿತು. ಅಂದಿನ

ಮುಖ್ಯಮಂತ್ರಿಯಾಗಿದ್ದ ಎಸ್. ನಿಜಲಿಂಗಪ್ಪನವರು ಸರ್ಕಾರದ ಪರವಾಗಿ ಕೋಲಾರದ ಚಿನ್ನದ ಗಣಿಗಾರಿಕೆಯನ್ನು ವಹಿಸಿಕೊಂಡಾಗ, ಈ ಮಹತ್ವದ ಕಾರ್ಯವನ್ನು ಸ್ವರ್ಣಾಕ್ಷರಗಳಿಂದ ಬಣ್ಣಿಸಲಾಯಿತು. ಚಿನ್ನದ ಗಣಿಯ ನಿರ್ವಾಹಕರಾಗಿ ಜಾನ್ ಟೈಲರ್ ಕಂಪನಿಯನ್ನೇ ಸರ್ಕಾರ ನೇಮಿಸಿತು. ರಾಷ್ಟ್ರೀಕರಣ ಕಾಯಿದೆಯ ಪ್ರಕಾರ ಛಾಂಪಿಯನ್ ರೀಫ್, ನಂದೀದುರ್ಗ ಗಣಿಗಳು, ಕೋಲಾರದ ಗಣಿಗಳ ವಿದ್ಯುತ್ ಕಂಪನಿ ಹಾಗೂ ಕೋಲಾರದ ಚಿನ್ನದ ಗಣಿಗಳ ಆಸ್ಪತ್ರೆಗಳನ್ನು ಸರ್ಕಾರವೇ ವಹಿಸಿಕೊಂಡಿತು. ರಾಷ್ಟ್ರೀಕರಣವಾದಾಗ ಕೋಲಾರದ ಚಿನ್ನದ ಗಣಿಗಳಲ್ಲಿ ೧೩,೦೦೦ ಕಾರ್ಮಿಕರು ಗಣಿಗಾರಿಕೆಯಲ್ಲಿ ತೊಡಗಿದ್ದರು. ಸರ್ಕಾರವು ಕೋಲಾರದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವ ಕಾಲಕ್ಕೆ ಹಾಗೂ ನಂತರದಲ್ಲಿ ಉತ್ಪಾದನೆಯಾದ ಚಿನ್ನದ ಪ್ರಮಾಣವನ್ನು ಕೋಷ್ಟಕ ೫.೩ರಲ್ಲಿ ನೀಡಿದೆ.

**ಕೋಷ್ಟಕ ೫.೩: ರಾಷ್ಟ್ರೀಕರಣ ಪೂರ್ವ ಹಾಗೂ ರಾಷ್ಟ್ರೀಕರಣೋತ್ತರ ಅವಧಿಯಲ್ಲಿ ಕೋಲಾರದ ಚಿನ್ನದ ಗಣಿಗಳಲ್ಲಾಗಿರುವ ಚಿನ್ನದ ಉತ್ಪಾದನಾ ವಿವರ**

| ವರ್ಷ | ಅದಿರು ಪುಡಿ ಮಾಡಿದ್ದು ಟನ್ನುಗಳಲ್ಲಿ (೨೦೦೦ ಪೌಂಡಿಗೆ) | ಅದಿರಿನಲ್ಲಿ ಸರಾಸರಿ ಚಿನ್ನದ ಅಂಶ ಟನ್‌ಗೆ (ಗ್ರಾಂ ಗಳಲ್ಲಿ) | ಚಿನ್ನದ ಉತ್ಪಾದನೆ | |
|---|---|---|---|---|
| | | | ಔನ್ಸುಗಳಲ್ಲಿ | ಗ್ರಾಂ. ಗಳಲ್ಲಿ |
| ರಾಷ್ಟ್ರೀಕರಣ ಪೂರ್ವ ೧೮೮೨ ರಿಂದ ೨೮–೧೧–೧೯೫೬ | ೩,೯೭,೮೫,೭೪೯ | – | ೨,೨೮,೬೦,೭೩೭ | ೭೧,೧೦,೪೮,೪೭೭ |
| | | (ಗಣಿಗಾರಿಕೆಯ ಆರಂಭದಲ್ಲಿ ಇತರೆ ಗಣಿಗಳಿಂದ ಪಡೆದ ಚಿನ್ನ ೨೦,೦೦,೦೦೦ ಔನ್ಸು ಅಥವಾ ೬೨,೨೦,೬೯೬ ಗ್ರಾಂ.ಗಳನ್ನು ಹೊರತುಪಡಿಸಿ) | | |
| ರಾಷ್ಟ್ರೀಕರಣದ ನಂತರ ೨೯–೧೧–೧೯೫೬ರಿಂದ ೩೧–೩–೧೯೫೮ರವರೆಗೆ | ೮,೭೬,೯೧೨ | ೪.೯೭ | ೨,೧೭,೯೩೮ | ೬೭,೭೮,೬೩೦ |
| ೧೯೫೮–೫೯ | ೬,೩೬,೧೮೧ | ೪.೭೪ | ೧,೫೦,೭೮೧ | ೪೬,೮೯,೮೧೪ |
| ೧೯೫೯–೬೦ | ೬,೪೭,೩೬೯ | ೪.೭೪ | ೧,೫೩,೪೪೨ | ೪೭,೭೨,೫೮೯ |
| ೧೯೬೦–೬೧ | ೫,೮೧,೮೦೧ | ೪.೧೮ | ೧,೩೯,೮೫೪ | ೪೩,೪೯,೯೫೫ |
| ೧೯೬೧–೬೨ | ೬,೧೨,೫೩೪ | ೪.೪೬ | ೧,೩೬,೪೯೮ | ೪೨,೪೫,೫೬೭ |
| ೧೯೬೨–೬೩ | ೬,೪೩,೦೬೫ | ೩.೯೭ | ೧,೨೭,೫೩೦ | ೩೯,೬೭,೮೬೫ |
| ೧೯೬೩–೬೪ | ೫,೬೨,೦೭೬ | ೩.೯೩ | ೧,೧೦,೫೩೬ | ೩೪,೩೮,೦೭೪ |
| ೧೯೬೪–೬೫ | ೫,೩೮,೧೫೫ | ೪.೬೦ | ೧,೨೩,೬೫೫ | ೩೮,೪೬,೧೦೪ |
| ೧೯೬೫–೬೬ | ೪,೩೫,೧೦೮ | ೪.೪೭ | ೯೭,೨೨೯ | ೩೦,೨೪,೧೬೨ |
| ೧೯೬೬–೬೭ | ೪,೧೨,೩೯೬ | ೪.೦೮ | ೮೪,೧೬೪ | ೨೬,೧೭,೭೮೫ |

ಆಧಾರ: ಕೋಲಾರ ಜಿಲ್ಲಾ ಗ್ಯಾಸೆಟಿಯರ್ ೧೯೬೮.

ಚಿನ್ನದ ಉತ್ಪಾದನೆಯ ಜೊತೆಗೆ ಬೆಳ್ಳಿಯನ್ನು ಸಣ್ಣ ಪ್ರಮಾಣದಲ್ಲಿ ಕೋಲಾರದ ಚಿನ್ನದ ಗಣಿಯಲ್ಲಿ ತೆಗೆಯಲಾಗುತ್ತಿತ್ತು. ಬೆಳ್ಳಿಯ ಉತ್ಪಾದನೆಯನ್ನು ಕೋಷ್ಟಕ ೫.೪ರಲ್ಲಿ ನೀಡಿದೆ.

**ಕೋಷ್ಟಕ ೫.೪: ೧೯೪೭ ರಿಂದ ೧೯೬೬–೬೭ರವರೆಗೆ ಉತ್ಪಾದಿಸಿದ ಬೆಳ್ಳಿಯ ವಿವರ.**

| ವರ್ಷ | ಔನ್ಸುಗಳಲ್ಲಿ | ಗ್ರಾಂಗಳಲ್ಲಿ |
|---|---|---|
| ೧೯೪೭ ರಿಂದ ೨೮–೧೧–೧೯೫೬ | ೧,೪೦,೬೮೫ | ೪೩,೭೫,೭೯೪ |
| ೨೯–೧೧–೧೯೫೬ ರಿಂದ ೩೧–೩–೧೯೫೮ | ೧೬,೧೭೮ | ೫,೦೩,೧೯೨ |
| ೧೯೫೮–೫೯ | ೧೦,೯೨೨ | ೩,೩೯,೭೧೨ |
| ೧೯೫೯–೬೦ | ೧೦,೮೪೬ | ೩,೩೭,೩೬೦ |
| ೧೯೬೦–೬೧ | ೧೦,೧೨೯ | ೩,೧೫,೦೪೬ |
| ೧೯೬೧–೬೨ | ೧೦,೦೬೭ | ೩,೧೩,೧೩೪ |
| ೧೯೬೨–೬೩ | ೯,೧೩೪ | ೨,೮೪,೧೧೦ |
| ೧೯೬೩–೬೪ | ೭,೬೩೪ | ೨,೩೭,೪೫೬ |
| ೧೯೬೪–೬೫ | ೯,೪೩೧ | ೨,೯೩,೩೩೧ |
| ೧೯೬೫–೬೬ | ೭,೩೬೬ | ೨,೨೯,೧೨೧ |
| ೧೯೬೬–೬೭ | ೬,೭೫೭ | ೨,೧೦,೧೫೬ |

ವೈಜ್ಞಾನಿಕವಾಗಿ ಚಿನ್ನವನ್ನು ಉತ್ಪಾದನೆ ಮಾಡುವುದಕ್ಕೆ ಪೂರ್ವದಲ್ಲಿ ಗಣಿಗಳಿಂದ ತೆಗೆದ ಚಿನ್ನ ೬,೨೨೦ ಕೆ.ಜಿ.ಗಳು ಅಥವಾ ೬.೨ ಮೆಟ್ರಿಕ್ ಟನ್ನುಗಳೆಂದು ಹೇಳಲಾಗಿದೆ.

ಕೋಲಾರದ ಚಿನ್ನದ ಗಣಿಗಾರಿಕೆಯಿಂದ ಮೈಸೂರು ಸರ್ಕಾರಕ್ಕೆ ನಿರ್ದಿಷ್ಟ ಪ್ರಮಾಣದಲ್ಲಿ ವರಮಾನ ಬರುತ್ತಿತ್ತು. ಗಣಿಗಾರಿಕೆಯ ಆರಂಭದಿಂದ ರಾಷ್ಟ್ರೀಕರಣವಾಗುವವರೆಗೆ ೨೫ ಕೋಟಿ ರೂ.ಗಳ ರಾಜಧನ (ರಾಯಲ್ಟಿ) ಮತ್ತು ತೆರಿಗೆ ವರಮಾನ ಬಂದಿದ್ದು, ಚಿನ್ನದ ಗಣಿಗಳಿಗೆ ವಿದ್ಯುತ್ ಪೂರೈಕೆ ಮಾಡಿದ್ದಕ್ಕೆ ೩೦ ಲಕ್ಷ ರೂ.ಗಳು ಸಂದಾಯವಾಗಿತ್ತು. ಇವು ಸರ್ಕಾರಕ್ಕೆ ಬಂದ ನೇರ ಪಾವತಿಗಳಾದರೆ, ಪರೋಕ್ಷವಾಗಿ ಅನೇಕ ರೀತಿಯಲ್ಲಿ ಅನುಕೂಲವಾಗಿತ್ತು. ಸಾವಿರಾರು ನೌಕರರಿಗೆ ಸಂಬಳ–ಸಾರಿಗೆ, ವ್ಯಾಪಾರ–ವಹಿವಾಟು ಹಾಗೂ ವೃತ್ತಿ–ಉಪವೃತ್ತಿಗಳ ಅಭಿವೃದ್ಧಿ ಉಂಟಾಗಿ, ರಾಷ್ಟ್ರೀಯ ಸಂಪತ್ತು ಹೆಚ್ಚಿ, ರಾಜ್ಯದ ಆರ್ಥಿಕ ಅಭ್ಯುದಯಕ್ಕೆ ಸಹಕಾರಿಯಾಯಿತು.

ಅಂದಿನ ಮೈಸೂರು ಸರ್ಕಾರವು ಆರು ವರ್ಷಗಳ ಕಾಲ ಗಣಿಯ ಆಡಳಿತವನ್ನು ನಡೆಸಿ, ಮುಂದೆ ೧೯೬೨ ರಲ್ಲಿ ಕೇಂದ್ರ ಸರ್ಕಾರಕ್ಕೆ ಗಣಿಯ ಆಡಳಿತವನ್ನು ವರ್ಗಾಯಿಸಿತು. ತತ್ಪರಿಣಾಮವಾಗಿ ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯ ಆರ್ಥಿಕ ವ್ಯವಹಾರಗಳ ವಿಭಾಗದ ಆಡಳಿತಕ್ಕೆ ಈ ಚಿನ್ನದ ಗಣಿಯ ವ್ಯವಹಾರವನ್ನು ಸೇರಿಸಲಾಯಿತು. ಆಗ ಈ ವಿಭಾಗವು ಹಣಕಾಸು ಇಲಾಖೆಯ ಸಂಯುಕ್ತ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ಒಂದು ಆಡಳಿತ ಮಂಡಲಿಯನ್ನು ರಚಿಸಿತು.

### ಚಿನ್ನದ ಗಣಿಗೆ ನೂರು ವರ್ಷ (೧೮೮೦–೧೯೮೦)

ಕೋಲಾರದ ಚಿನ್ನದ ಗಣಿಯು ತನ್ನ ಶತಮಾನೋತ್ಸವವನ್ನು ೧೯೮೦ರಲ್ಲಿ ಆಚರಿಸಿತು, ಅತಿ ಆಳವಾದ ಗಣಿ ಎಂಬ ವಿಶ್ವ ಖ್ಯಾತಿ ಪಡೆದ ಇದು ಅಗಾಧ ತೊಂದರೆಗಳ ಮಧ್ಯೆಯೂ ಅದ್ಭುತ ಪ್ರಗತಿಯನ್ನು ಗಳಿಸಿತು. ಅಲ್ಲದೆ ಕಾರ್ಮಿಕರ ಪರಿಶ್ರಮ ಅವರ ತ್ಯಾಗ, ಧೈರ್ಯ, ವಿಚಾರದೃಷ್ಟಿ ಹಾಗೂ ಆಡಳಿತಾತ್ಮಕ ನೀತಿ ಈ ಕೈಗಾರಿಕೆಯ ಅಭಿವೃದ್ಧಿ ಹಾಗೂ ಬೆಳವಣಿಗೆ ಪೂರಕವಾಯಿತು. ಕಳೆದ ಒಂದು ಶತಮಾನದದಲ್ಲಿ ಸಾಧಿಸಿದ ಪ್ರಗತಿಯನ್ನು ಹತ್ತು ದಶಕಗಳಾಗಿ ವಿಂಗಡಿಸಿ, ಸಂಕ್ಷಿಪ್ತ ವಿವರ ನೀಡಲಾಗಿದೆ.

೧೮೮೦ರ ಪೂರ್ವದ ಅವಧಿ:– ೧೮೮೦ರ ಪೂರ್ವದಲ್ಲಿ ಇಂಗ್ಲೆಂಡಿನ ಮೆ॥ ಜಾನ್ ಟೇಲರ್ ಅಂಡ್ ಸನ್ಸ್ ಇವರು ಕೋಲಾರದ ಚಿನ್ನದ ಗಣಿಗೆ ಬಂದು ಚಿನ್ನದ ಉತ್ಪಾದನೆ ಪ್ರಾರಂಭಿಸಿದರು. ೩.೩೭ಲಕ್ಷ ಟನ್ ಚಿನ್ನದ ಅದಿರನ್ನು ತೆಗೆದು ಪ್ರತಿ ಟನ್ನಿಗೆ ೧೮.೫ ಗ್ರಾಂ ಚಿನ್ನವನ್ನು ಹೊರತೆಗೆಯಲಾಯಿತು. ಒಟ್ಟು ೬೨೦ ಕಿಲೋ ಗ್ರಾಂ ಚಿನ್ನ ಉತ್ಪತ್ತಿ ಮಾಡಲಾಗಿತ್ತು.

### ೧೮೮೧–೧೯೦೦ರ ಅವಧಿ

ಈ ಅವಧಿಯು ಚಿನ್ನದ ಗಣಿಯ ಇತಿಹಾಸದಲ್ಲಿ ನಿರ್ಣಾಯಕ ಅವಧಿಯಾಗಿತ್ತು. ಅತ್ಯಂತ ಆಳವಾದ ಗಣಿಯಲ್ಲಿ ಕೆಲಸ ಮಾಡುವುದು ಜಾನ್ ಟೆಲರ್ ಕಂಪನಿಗೆ ಕಷ್ಟಸಾಧ್ಯವಾಯಿತು. ಈ ಅವಧಿಯಲ್ಲಿ ೧.೫೦ಲಕ್ಷ ಟನ್ನು ಚಿನ್ನದ ಅದಿರು ತೆಗೆದು ಪ್ರತಿ ಟನ್ನಗೆ ೪೭.೫ಗ್ರಾಂ ಚಿನ್ನ ತೆಗೆಯಲಾಯಿತು. ೭,೪೯೬ ಕೆ.ಜಿ. ಚಿನ್ನ ಉತ್ಪಾದಿಸಲಾಯಿತು. ೨೨,೫೦೦ ಮಂದಿಗೆ ಉದ್ಯೋಗ ದೊರಕಿತ್ತು.

### ೧೯೦೧–೧೯೧೦ರ ಅವಧಿ

ಈ ಅವಧಿಯಲ್ಲಿ ಚಿನ್ನದ ಗಣಿಗಾಗಿಯೇ ಮಂಡ್ಯ ಜಿಲ್ಲೆಯ ಶಿವನಸಮುದ್ರದಲ್ಲಿ ಜಲವಿದ್ಯುತ್ ಕೇಂದ್ರವನ್ನು ೧೯೦೨ರಲ್ಲಿ ಸ್ಥಾಪಿಸಿ, ಉತ್ಪಾದಿಸಿದ ಜಲವಿದ್ಯುತ್ತನ್ನು ಪೂರೈಸಲಾಯಿತು. ಈ ಅವಧಿಯಲ್ಲಿ ೬೧ಲಕ್ಷ ಟನ್ನು ಚಿನ್ನದ ಅದಿರು ಉತ್ಪಾದಿಸಿ, ಪ್ರತಿ ಟನ್ನಗೆ ೨೮.೦೫ ಗ್ರಾಂ ಚಿನ್ನ ತೆಗೆದು, ೧,೭೦,೮೦೦ ಕಿಲೋಗ್ರಾಂ ಚಿನ್ನ ಉತ್ಪಾದಿಸಲಾಯಿತು. ಈ ಅವಧಿಯಲ್ಲಿ ೨೯,೦೦೦ ಮಂದಿ ಕಾರ್ಮಿಕರನ್ನು ಹೊಂದಿದ್ದ ಕಾರ್ಖಾನೆಯು ೧೦೦ ವರ್ಷಗಳ ಇತಿಹಾಸದಲ್ಲಿಯೇ ಕಾರ್ಮಿಕರ ಸಂಖ್ಯೆ ಅತಿ ಹೆಚ್ಚಾಗಿತ್ತು.

### ೧೯೧೧–೧೯೨೦ರ ಅವಧಿ

ಈ ಅವಧಿಯಲ್ಲಿ ೬೯ ಲಕ್ಷ ಟನ್ ಚಿನ್ನದ ಅದಿರು ಉತ್ಪಾದಿಸಿ, ಪ್ರತಿ ಟನ್‌ಗೆ ೧೮.೯ಗ್ರಾಂ ಚಿನ್ನ ತೆಗೆದು, ೧,೨೫,೪೮೦ ಕಿಲೋ ಗ್ರಾಂ ಚಿನ್ನ ಉತ್ಪಾದಿಸಲಾಯಿತು. ಗಣಿಗಳ ಆಳ ಮತ್ತಷ್ಟು ಹೆಚ್ಚಳ, ಬೆಂಕಿಯಿಂದ ಬಂಡೆಗಳನ್ನು ಸಿಡಿಸುವುದು ಹಾಗೂ ಗಾಳಿ ಬೆಳಕಿನ ತೊಂದರೆ ಮುಂತಾದ ಸಮಸ್ಯೆಗಳು ಉಂಟಾದವು. ಅಲ್ಲದೆ ಮೊದಲ ಮಹಾಯುದ್ಧವು ಚಿನ್ನದ ಉತ್ಪಾದನಾ ವೆಚ್ಚ ಹೆಚ್ಚಾಗಲು ತನ್ನದೇ ಆದ ಪಾತ್ರ ವಹಿಸಿತು.

### ೧೯೨೧–೧೯೩೦ರ ಅವಧಿ

ಈ ಅವಧಿಯಲ್ಲಿ ೫೯.೫೦ ಲಕ್ಷ ಟನ್ ಚಿನ್ನದ ಅದಿರು ಉತ್ಪಾದಿಸಿ ಪ್ರತಿ ಟನ್ನಿಗೆ ೧೯.೬೦ಗ್ರಾಂ ನಂತೆ, ಒಟ್ಟು ೧,೬೦,೯೮೦ ಕಿಲೋ ಗ್ರಾಂ ಚಿನ್ನ ಉತ್ಪಾದಿಸಲಾಯಿತು. ೧೯೨೧ರಲ್ಲಿ ೨೩,೦೦೦ ಕಾರ್ಮಿಕರಿದ್ದು, ಇವರ ಸಂಖ್ಯೆ ೧೯೩೦ರ ವೇಳೆಗೆ ೧೭,೦೦೦ಕ್ಕೆ ಕಡಿಮೆಯಾಗಿರುವುದು ಕಂಡುಬರುತ್ತದೆ. ಭಾಲಗತ್ ಗೋಲ್ಡ್ ಮೈನ್‌ಗೆ ಸೇರಿದ ಐದು ಗಣಿಗಳನ್ನು ಮುಚ್ಚಲಾಯಿತು. ಈ ಅವಧಿಯಲ್ಲಿ ಚಿನ್ನದ ಗಣಿಯು ತನ್ನ ಐವತ್ತು ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತು. ಈ ಐವತ್ತು ವರ್ಷಗಳ ಅವಧಿಯಲ್ಲಿ ಗಣಿ ಕೆಲಸಕ್ಕೆ ಯಾವುದೇ ಭಂಗ ಬರಲಿಲ್ಲ.

### ೧೯೩೧–೧೯೪೦ರ ಅವಧಿ

ಕಳೆದ ಆರು ದಶಕಗಳ ಹಿಂದೆ ಚಿನ್ನದ ಬೆಲೆ ಒಂದು ತೊಲಕ್ಕೆ ರೂ. ೨೧.೨ ಆಗಿತ್ತು. ಇದು ಈ ಅವಧಿಯಲ್ಲಿ ರೂ. ೪೨ಕ್ಕೆ ಹೆಚ್ಚಳಗೊಂಡಿತು. ಇದು ೩೫ ಅಮೇರಿಕನ್ ಡಾಲರ್‌ಗಳಿಗೆ ಸಮವಾಗಿತ್ತು. ಈ ಅವಧಿಯಲ್ಲಿ ೬೪.೪ ಲಕ್ಷ ಟನ್ನು ಚಿನ್ನದ ಅದಿರು ತೆಗೆದು, ಪ್ರತಿ ಟನ್ನಿಗೆ ೧೫.೪೪ ಗ್ರಾಂ ಚಿನ್ನ ಉತ್ಪಾದಿಸಲಾಯಿತು. ಒಟ್ಟು ೧,೧೬,೯೮೦ ಕಿ.ಲೋ ಗ್ರಾಂ ಚಿನ್ನ ಉತ್ಪತ್ತಿ ಮಾಡಲಾಯಿತು. ಆಗಾಗಿ ಕಾರ್ಮಿಕರ ಸಂಖ್ಯೆ ೧೯೪೦ ರಲ್ಲಿ ೧೮,೦೦೦ ರಿಂದ ೨೭,೦೦೦ಕ್ಕೆ ಹೆಚ್ಚಳಗೊಂಡಿತು.

### ೧೯೪೧–೧೯೫೦ರ ಅವಧಿ

ಈ ಅವಧಿಯ ೫೧ ಲಕ್ಷ ಟನ್ ಚಿನ್ನದ ಅದಿರು ತೆಗೆದು, ಪ್ರತಿ ಟನ್ನಿಗೆ ೧೨.೪೩ ಗ್ರಾಂ. ಚಿನ್ನ ಉತ್ಪಾದಿಸಲಾಯಿತು. ಒಟ್ಟು ೬೩,೩೪೦ ಕಿಲೋ.ಗ್ರಾಂ ಚಿನ್ನವನ್ನು ಉತ್ಪಾದಿಸಲಾಯಿತು. ಈ ಅವಧಿಯಲ್ಲಿ ಕಾರ್ಮಿಕರ ಸಂಖ್ಯೆ ೨೭,೦೦೦ ದಿಂದ ೨೩,೭೦೦ಕ್ಕೆ ಕಡಿಮೆಯಾಗಿದೆ. ಎರಡನೇಯ ಮಹಾಯುದ್ಧ ಪ್ರಾರಂಭದ ಹೊತ್ತಿಗೆ ೩೦೦ ಅಧಿಕಾರಿಗಳಿದ್ದರು. ಇದು ೧೯೪೫ರಲ್ಲಿ ೧೯೮ಕ್ಕೆ ಕಡಿಮೆಯಾಗಿದ್ದು, ನಂತರ ೧೯೫೦ರಲ್ಲಿ ೨೧೭ ಅಧಿಕಾರಿಗಳಿದ್ದರು. ಕಾರಣ ಹಲವಾರು ಅಧಿಕಾರಿಗಳು ಯುದ್ಧದ ಕೆಲಸಕ್ಕೆ ಸೇರಬೇಕಾಗಿತ್ತು. ಈ ಅವಧಿಯಲ್ಲಿ ಭಾರತ ಸ್ವಾತಂತ್ರ್ಯ ಪಡೆದುಕೊಂಡ ಮೇಲೆ ವಿದೇಶಿ ಅಧಿಕಾರಿಗಳಲ್ಲಿ ಅಭದ್ರತೆಯ ಅರಿವು ಉಂಟಾಯಿತು. ಇದೇ ಅವಧಿಯಲ್ಲಿ ಭಾರತೀಯರಿಗೆ ಅರ್ಹವಾದ ಹುದ್ದೆಗಳು ಲಭಿಸಿದವು. ಇಲ್ಲಿಯವರೆಗೆ ಚಿನ್ನದ ಗಣಿ

ಉದ್ಯಮದ ಮಹತ್ತರವಾದ ಸಾಧನೆಯನ್ನು ಕಂಡಿತು. ಈ ಅವಧಿಯ ಮುಕ್ತಾಯದ ಹೊತ್ತಿಗೆ ಉತ್ತಮ ದರ್ಜೆಯ ಚಿನ್ನದ ಅದಿರು ಕಡಿಮೆಯಾಗುತ್ತಾ ಬಂದಿದ್ದರಿಂದ ಈ ಗಣಿ ಉದ್ಯಮದ ಕುಸಿತ ಪ್ರಾರಂಭವಾಯಿತು.

### ೧೯೫೧–೧೯೬೦ರ ಅವಧಿ

ಈ ಅವಧಿಯಲ್ಲಿ ೫೨.೯ ಲಕ್ಷ ಟನ್ ಚಿನ್ನದ ಅದಿರು ಉತ್ಪಾದಿಸಲಾಯಿತು. ಪ್ರತಿ ಟನ್ನಿಗೆ ಲಭ್ಯವಿದ್ದ ಚಿನ್ನದ ಪ್ರಮಾಣ ೧೦.೨೩ ಗ್ರಾಂ ಗಳಿಗೆ ಕುಸಿಯಿತು. ಒಟ್ಟು ೫೪,೧೨೫ ಕಿಲೋ ಗ್ರಾಂ ಚಿನ್ನ ಉತ್ಪತ್ತಿಯಾಗಿತ್ತು. ೨೯ನೇ ನವೆಂಬರ್ ೧೯೫೬ರಲ್ಲಿ ಮೈಸೂರು ಸರ್ಕಾರ ಗಣಿಯನ್ನು ರಾಷ್ಟ್ರೀಕರಣಗೊಳಿಸಿತು. ೧೯೫೧ರಲ್ಲಿ ಇಲ್ಲಿ ೨೮೭ ವ್ಯವಸ್ಥಾಪಕ ಸಿಬ್ಬಂದಿ ಹಾಗೂ ೨೦,೫೦೦ ಕಾರ್ಮಿಕರಿದ್ದರು. ಲಾಭದಲ್ಲಿದ್ದ ಗಣಿಗಳು ನಷ್ಟದಂಚಿಗೆ ಬಂದಾಗ ಊರಗಾಂವ್ ಗಣಿಯನ್ನು ಮುಚ್ಚಲಾಯಿತು. ಆಗ ೧೭೮ ವ್ಯವಸ್ಥಾಪಕ ಸಿಬ್ಬಂದಿಗೂ ಹಾಗೂ ೧೯,೩೦೦ ಕಾರ್ಮಿಕರಿಗೂ ಕಡಿಮೆಯಾಯಿತು. ವಿದೇಶಿಯರು ಕೆಲಸ ಬಿಟ್ಟಿದ್ದು ಇದಕ್ಕೆ ಕಾರಣ. ಇದರಿಂದಾಗಿ ವೃತ್ತಿಯಲ್ಲಿ ಅರ್ಹತೆ ಪಡೆದ ಭಾರತೀಯ ಯುವಕರು ವಿದ್ಯುತ್, ಮೆಕಾನಿಕಲ್ ಹಾಗೂ ಮೆಟಲರ್ಜಿಕಲ್ ಇಂಜನೀಯರ್‌ಗಳಾಗಿಯೂ, ಲೆಕ್ಕಾಧಿಕಾರಿಗಳಾಗಿಯೂ, ವೈದ್ಯಾಧಿಕಾರಿಗಳಾಗಿಯೂ ಹಾಗೂ ಕಾರ್ಮಿಕ ಅಧಿಕಾರಿಗಳಾಗಿಯೂ ನೇಮಕಗೊಂಡರು. ಇದರಿಂದಾಗಿ ವ್ಯವಸ್ಥಾಪಕ ಸಿಬ್ಬಂದಿ ೨೦೧ಕ್ಕೆ ಹೆಚ್ಚಳಗೊಂಡಿತು. ಕೆಲವು ಭಾರತೀಯ ಅಧಿಕಾರಿಗಳನ್ನು ಗಣಿ ಉದ್ಯಮಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತರಬೇತಿಗಾಗಿ ವಿದೇಶಗಳಿಗೆ ಕಳುಹಿಸಲಾಯಿತು. ಇಂಜನೀಯರ್ ಕಾಲೇಜ್‌ಗಳಲ್ಲಿ ಗಣಿ ಉದ್ಯಮದ ಇಂಜಿನಿಯರ್‌ಗಳಾಗಿ ಅಧ್ಯಯನ ಮಾಡಲು ಬರುವವರಿಗೆ ವಿದ್ಯಾರ್ಥಿ ವೇತನ ನೀಡುವ ಹಾಗೂ ಕೆಲಸಕ್ಕೆ ತೆಗೆದುಕೊಳ್ಳುವ ಯೋಜನೆಯನ್ನು ತಂದರೂ, ಅದಕ್ಕೆ ಉಜ್ವಲ ಭವಿಷ್ಯವುಳ್ಳ ಇಂಜನೀಯರ್ ಈ ಉದ್ಯಮದಲ್ಲಿ ಬಹಳ ಕಾಲ ಕೆಲಸ ಮಾಡುವುದನ್ನು ಒಪ್ಪಲಿಲ್ಲ. ಹಾಗಾಗಿ ೧೯೬೦ರಲ್ಲಿ ವ್ಯವಸ್ಥಾಪಕ ಸಿಬ್ಬಂದಿ ಸಂಖ್ಯೆಯನ್ನು ೧೫೧ಕ್ಕೆ ಕಡಿತಗೊಳಿಸಲಾಯಿತು. ಇದಕ್ಕೆ ಕಾರಣಗಳೆಂದರೆ, ೧) ೧೯೬೦ರಲ್ಲಿ ಮುಂದಿನ ಹತ್ತರಿಂದ–ಹದಿನೈದು ವರ್ಷಗಳಲ್ಲಿ ಚಿನ್ನದ ಗಣಿಯನ್ನು ಮುಚ್ಚುವ ಬಗ್ಗೆ ಚರ್ಚೆಯಾಗುತಿತ್ತು. ೨) ಈ ಉದ್ಯಮದ ಖಾಸಗೀಕರಣದ ಬಗ್ಗೆ ಚಿಂತನೆ.

### ೧೯೬೧–೧೯೭೦ರ ಅವಧಿ

ಈ ಅವಧಿಯಲ್ಲಿ ೪೫.೪ ಲಕ್ಷ ಟನ್ ಚಿನ್ನದ ಅದಿರನ್ನು ಉತ್ಪಾದಿಸಲಾಯಿತು. ಪ್ರತಿ ಟನ್ನಿಗೆ ೭೧೫ಗ್ರಾಂ ಚಿನ್ನದ ಸಿಗುತ್ತಿದ್ದು, ಒಟ್ಟು, ೩೨,೪೫೦ ಕಿಲೋ.ಗ್ರಾಂ ಚಿನ್ನ ಉತ್ಪತ್ತಿಯಾಗಿತ್ತು. ಒಂದನೇ ಡಿಸೆಂಬರ್ ೧೯೬೨ರಲ್ಲಿ ಮೈಸೂರು ಸರ್ಕಾರದಿಂದ ಕೇಂದ್ರ ಸರ್ಕಾರ ಚಿನ್ನದ ಗಣಿಯನ್ನು ತನ್ನ ಅಧೀನಕ್ಕೆ ವಹಿಸಿಕೊಂಡಿತು. ಈ ಅವಧಿಯಲ್ಲಿ ನೈಸರ್ಗಿಕ ವಿಕೋಪಗಳಿಂದಾಗಿ ವಿಶಾಲ ಪ್ರದೇಶದಲ್ಲಿ ಕಲ್ಲು ಸಿಡಿತ, ಬೆಂಕಿ ಹಾಗೂ ಪ್ರವಾಹಗಳಿಂದಾಗಿ ಈ ಉದ್ಯಮಕ್ಕೆ ತೊಂದರೆಯಾಯಿತು. ಅಲ್ಲದೆ ವ್ಯವಸ್ಥಾಪಕ ಸಿಬ್ಬಂದಿ ಹಾಗೂ ಕಾರ್ಮಿಕರಿಗೆ ಸ್ವಯಂ ನಿವೃತ್ತಿ ಹೊಂದಲು ಅವಕಾಶ ಕಲ್ಪಿಸಲಾಯಿತು. ಇದರಿಂದಾಗಿ ೧೯೭೦ರಲ್ಲಿ ವ್ಯವಸ್ಥಾಪಕ ಸಿಬ್ಬಂದಿ ಸಂಖ್ಯೆಯನ್ನು ೧೨೦ಕ್ಕೂ ಹಾಗೂ ಕಾರ್ಮಿಕರ ಸಂಖ್ಯೆಯನ್ನು ೧೩,೨೦೦ಕ್ಕೂ ಕಡಿಮೆ ಮಾಡಲಾಯಿತು.

### ೧೯೭೧–೧೯೮೦ರ ಅವಧಿ

ಈ ಅವಧಿಯಲ್ಲಿ ಚಿನ್ನದ ಉತ್ಪಾದನೆ ಕುಂಠಿತಗೊಂಡಿತು. ೩೬.೨ಲಕ್ಷ ಟನ್ ಚಿನ್ನದ ಅದಿರು ತೆಗೆಯಲಾಗಿದ್ದು, ಪ್ರತಿ ಟನ್ನಿಗೆ ೫.೩೫ ಗ್ರಾಂ ಚಿನ್ನದ ಅಂಶ ಲಭ್ಯವಿದ್ದು, ಒಟ್ಟು ೧೯,೪೦೦ ಕಿಲೋ ಗ್ರಾಂ ಚಿನ್ನ ಉತ್ಪತ್ತಿ ಮಾಡಲಾಯಿತು. ದಿನಾಂಕ: ೧–೪–೧೯೭೨ ರಿಂದ ಈ ಉದ್ಯಮವನ್ನು ಸಾರ್ವಜನಿಕ ವಲಯದ ಕಂಪನಿ ಎಂದು ಕರೆದು ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ (ಬಿ.ಜಿ.ಎಂ.ಎಲ್) ಎಂದು ನಾಮಕರಣ ಮಾಡಲಾಯಿತು. ಇಂದಿನಿಂದ ಬಿ. ಜಿ. ಎಂ.ಎಲ್. ಸಂಪೂರ್ಣವಾಗಿ ಭಾರತ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿತು. ಇದರಿಂದಾಗಿ ಹಲವು ಹಿರಿಯ ವ್ಯವಸ್ಥಾಪಕ ಸಿಬ್ಬಂದಿ ಕಂಪನಿಯನ್ನು ಬಿಡಬೇಕಾಯಿತು. ಇನ್ನೂ ಕೆಲವರನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಹಾಗಾಗಿ ವ್ಯವಸ್ಥಾಪಕ ಸಿಬ್ಬಂದಿ ಹಾಗೂ ಕಾರ್ಮಿಕರ ಸಂಖ್ಯೆಯನ್ನು ಕ್ರಮವಾಗಿ ೧೧೮ ಹಾಗೂ ೧೩,೧೬೬ಕ್ಕೆ ಕಡಿಮೆಗೊಳಿಸಲಾಯಿತು. ಹೀಗೆ ಕೋಲಾರ ಚಿನ್ನದ ಗಣಿಯಲ್ಲಿ ಚಿನ್ನದ ಅಂಶ ಕಡಿಮೆಯಾಗುತ್ತಾ ಕುಂಠಿತಗೊಂಡಿರುವುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

**೧೯೮೧–೯೦ರ ಅವಧಿ**

ಈ ಅವಧಿಯಲ್ಲಿ ಅದಿರಿನಲ್ಲಿ ಚಿನ್ನದ ಅಂಶ (ಒಂದು ಟನ್ನು ಅದಿರಿಗೆ ೩.೩೭ ಗ್ರಾಂ ಚಿನ್ನವು) ಲಭ್ಯವಾಗುತ್ತಿದ್ದು, ೧೯೯೧ ರಿಂದ ೨೦೦೦ ರವರೆಗೆ ಈ ಪ್ರಮಾಣ ೩.೧೪ ಗ್ರಾಂಗೆ ಕಡಿಮೆಯಾಯಿತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೫ ಹಾಗೂ ಕೋಷ್ಟಕ ೫.೬ರಲ್ಲಿ ನೋಡಿ.

**ಕೋಷ್ಟಕ ೫.೫: ೧೯೦೧ರಿಂದ ೨೦೦೦ದ ಮಾರ್ಚಿ ಅಂತ್ಯದವರೆಗೆ ಚಿನ್ನದ ಉತ್ಪಾದನಾ ಪ್ರಮಾಣದ ವಿವರ**

(ಒಂದು ಟನ್ನಿಗೆ ಚಿನ್ನದ ಅಂಶ ಗ್ರಾಂಗಳಲ್ಲಿ)

| | | | |
|---|---|---|---|
| ೧೯೦೧ ರಿಂದ ೧೯೧೦ | ೨೮.೦೫ | ೧೯೬೧ ರಿಂದ ೧೯೭೦ | ೭೧೫ |
| ೧೯೧೧ ರಿಂದ ೧೯೨೦ | ೧೮.೯೯ | ೧೯೭೧ ರಿಂದ ೧೯೮೦ | ೫.೩೫ |
| ೧೯೨೧ ರಿಂದ ೧೯೩೦ | ೧೯.೬೦ | ೧೯೮೧ ರಿಂದ ೧೯೯೦ | ೩.೩೭ |
| ೧೯೩೧ ರಿಂದ ೧೯೪೦ | ೧೫೪೪ | ೧೯೯೧ ರಿಂದ ೨೦೦೦ | ೩.೧೪ |
| ೧೯೪೧ ರಿಂದ ೧೯೫೦ | ೧೨.೪೩ | (ಮಾರ್ಚ್ ಅಂತ್ಯದವರೆಗೆ) | |
| ೧೯೫೧ ರಿಂದ ೧೯೬೦ | ೧೦.೨೩ | | |

**ಕೋಷ್ಟಕ ೫.೬: ೧೯೭೨ ರಿಂದ ೨೦೦೦ ವರೆಗಿನ ಅವಧಿಯಲ್ಲಾದ ಚಿನ್ನದ ಉತ್ಪಾದನೆ**

| ವರ್ಷ | ಅದಿರು ಉತ್ಪಾದನೆ ಟನ್ನುಗಳಲ್ಲಿ | ಅದುರಿನಲ್ಲಿ ಸರಾಸರಿ ಚಿನ್ನದ ಅಂಶ (ಟನ್ನಿಗೆ ಗ್ರಾಂಗಳಲ್ಲಿ) | ಚಿನ್ನದ ಉತ್ಪಾದನೆ (ಕೆ.ಜಿ.ಗಳಲ್ಲಿ) |
|---|---|---|---|
| **೧೯೭೨–೭೭ ರವರೆಗೆ** | ೧೫,೫೩,೯೪೫ | ೫.೪೫ | ೯,೨೫೫ |
| **೧೯೭೮–೮೨** | ೧೮,೨೫,೭೩೬ | ೪.೫೭ | ೮,೩೬೬ |
| **೧೯೮೨–೮೭** | ೧೬,೧೦,೧೮೬ | ೩.೩೩ | ೫,೩೨೫ |
| **೧೯೮೭–೯೨** | ೧೨,೪೩,೪೩೦ | ೩.೨೧ | ೩,೯೮೭ |
| **೧೯೯೩–೯೭** | ೧೦,೮೦,೯೯ | ೩.೦೭ | ೩,೩೨೩ |
| **೧೯೯೮–೨೦೦೦** | ೪,೪೫,೮೪೧ | ೩.೧೮ | ೧,೪೭೯ |

ಭಾರತ್ ಗೋಲ್ಡ್ ಮೈನ್ಸ್ ಲಿ. ಕಂಪನಿಯು ೧೮ ವರ್ಷಗಳ ಕಾಲ ಗಣಿಗಾರಿಕೆಯನ್ನು ನಡೆಸಿತಾದರೂ ನಷ್ಟವನ್ನು ಎದುರಿಸಬೇಕಾಯಿತು. ಅದಿರಿನಲ್ಲಿ ಚಿನ್ನದ ಅಂಶ ಕಡಿಮೆಯಾದಂತೆಲ್ಲಾ, ಚಿನ್ನದ ಉತ್ಪಾದನೆಯೂ ಕಡಿಮೆಯಾಗತೊಡಗಿತು. ಆದರೆ ವೆಚ್ಚ ಮಾತ್ರ ಹೆಚ್ಚುತ್ತಲೇ ಇತ್ತು.

ಬಿ.ಜಿ.ಎಂ.ಎಲ್. ಕಂಪನಿಯು ನಿರಂತರವಾಗಿ ನಷ್ಟವನ್ನು ಅನುಭವಿಸಿದ ಕಾರಣ ಇದನ್ನು ರೋಗಗ್ರಸ್ಥ ಕೈಗಾರಿಕೆ ಎಂದು ಘೋಷಿಸಿ ಕೈಗಾರಿಕಾ ಹಣಕಾಸು ಪುನರ್ನಿರ್ಮಾಣ ಮಂಡಲಿಗೆ ತಿಳಿಸಲಾಯಿತು. ಈ ಕಂಪನಿಯು ೨೦೦೦ ನೇ ಏಪ್ರಿಲ್ ತಿಂಗಳಿಂದ ಎಲ್ಲಾ ಗಣಿಗಳ ಉತ್ಪಾದನಾ ಕಾರ್ಯವನ್ನು ಸ್ಥಗಿತಗೊಳಿಸಿತು.

ಈ ಕೈಗಾರಿಕೆಯ ಪುನರುಜ್ಜೀವನಕ್ಕೆ ಅಪಾರವಾಗಿ ಬಂಡವಾಳ ಬೇಕಾಗುವುದೆಂದು ಹೇಳಲಾಗಿದೆ. ಭಾರತ ಸರ್ಕಾರಕ್ಕೆ ಅಷ್ಟೊಂದು ವೆಚ್ಚವನ್ನು ಭರಿಸಲು ನಿರ್ಬಂಧವಿರುವುದರಿಂದ, ಖಾಸಗಿ ಉದ್ಯಮದ ಪ್ರಯತ್ನವನ್ನು ಸರ್ಕಾರ ನಿರೀಕ್ಷಿಸುತ್ತಿದೆ. ಈ ಗಣಿ ಪ್ರದೇಶದಲ್ಲಿ ಇನ್ನೂ ಚಿನ್ನ ದೊರೆಯುವುದೆಂದು ಸಂಶೋಧನೆಯಿಂದ ತಿಳಿದು ಬಂದಿದೆ. ಈಗಾಗಲೇ ಕೆಲವು ಗಣಿಗಳು ಹತ್ತು

ಸಾವಿರ ಅಡಿ ಆಳದವರೆಗೂ ಹೋಗಿವೆ. ಇನ್ನೂ ಸಾಕಷ್ಟು ಆಳಕ್ಕೆ ಹೋಗಿ ಅದುರನ್ನು ತೆಗೆದು, ಮೇಲಕ್ಕೆ ಸಾಗಿಸಿ, ಅದುರಿನಿಂದ ಚಿನ್ನವನ್ನು ಬೇರ್ಪಡಿಸುವ ಕಾರ್ಯಕ್ಕೆ ಅತ್ಯಾಧುನಿಕ ಯಂತ್ರಗಳನ್ನು ಅಳವಡಿಸಬೇಕಾಗುತ್ತದೆ. ಭೂಗರ್ಭದಲ್ಲಿರುವ ನಿಕ್ಷೇಪವು ಎಷ್ಟು ಪ್ರಮಾಣದಲ್ಲಿದೆ ಎಂದು ಹೇಳುವುದೂ ಕಷ್ಟಕರವಾದುದು. ಆದುದರಿಂದ ಯಾವದೇ ಖಾಸಗಿ ಕಂಪನಿಯೂ ಮುಂದೆ ಬಂದು ಚಿನ್ನ ತೆಗೆಯುವ ಸಾಹಸ ಕಾರ್ಯದಲ್ಲಿ ತೊಡಗುವುದು ಕಷ್ಟಸಾಧ್ಯ. ಕೆ.ಜಿ.ಎಫ್.ನ ಚಿನ್ನದ ಗಣಿಯನ್ನು ಪುನಃ ಪ್ರಾರಂಭಿಸಿದರೆ, ಒಂದು ಅಂದಾಜಿನಂತೆ ಪ್ರಸ್ತುತ ೧೦ ಗ್ರಾಂ ಚಿನ್ನದ ಉತ್ಪಾದನೆಗೆ ಸುಮಾರು ರೂ. ೨೦,೦೦೦ ವೆಚ್ಚವಾಗಬಹುದೆಂದು ಬಿ.ಜಿ.ಎಂ.ಎಲ್.ನ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ಮುಕ್ತ ಮಾರುಕಟ್ಟೆಯಲ್ಲಿ ೧೦ ಗ್ರಾಂ ಚಿನ್ನದ ಬೆಲೆ ಪ್ರಸ್ತುತ ಸು. ೬,೦೦೦ ರೂ.ಗಳಾಗಿದೆ. ಬಿ.ಜಿ.ಎಂ.ಎಲ್. ಕಂಪನಿಗೆ ಸೇರಿದ ೧೨,೦೦೦ ಎಕರೆ ವಿಸ್ತಾರವಾದ ಭೂಮಿಯಲ್ಲಿ ಒಂಭತ್ತು ಸಾವಿರ ಎಕರೆ ಭೂಮಿಯು ಈಗಾಗಲೇ ಉಪಯೋಗಿಸಲ್ಪಟ್ಟಿದೆ. ಉಳಿದ ಮೂರು ಸಾವಿರ ಎಕರೆ ಭೂಮಿಯಲ್ಲಿ ಆಧುನಿಕ ಕೃಷಿ ಕಾರ್ಯವನ್ನು ನಡೆಸಬಹುದಾಗಿದೆ.

ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಕಾರ್ಖಾನೆಯು ಏಪ್ರಿಲ್ ೨೦೦೦ ದಿಂದ ಮುಚ್ಚಲ್ಪಟ್ಟಿರುವುದರಿಂದ ಅಲ್ಲಿನ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದೆ. ಇವರಿಗೆ ಆದ ನಷ್ಟವನ್ನು ಸರ್ಕಾರ ತುಂಬಿಕೊಡಲಿಲ್ಲ. ಕಾರ್ಮಿಕರಿಗೆ ಬೇರೆ ಆದಾಯದ ಮೂಲಗಳಿಲ್ಲದಿರುವುದರಿಂದ ಇವರು ಬಡತನಕ್ಕೆ ಸಿಲುಕಿ ಬೀದಿ ಪಾಲಾಗಿದ್ದಾರೆ. ಅಲ್ಲದೆ ದೊಡ್ಡ ದೊಡ್ಡ ನಗರಗಳ ಕಡೆ ದಿನಗೂಲಿಗಾಗಿ ವಲಸೆ ಹೋಗುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಹಾಗಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇಂತಹ ೭೫ ಪ್ರಕರಣಗಳು ದಾಖಲಾಗಿವೆ. ಅಲ್ಲದೆ ಆತ್ಮ ಸ್ಥೈರ್ಯ ಕಳೆದುಕೊಂಡಿದ್ದಾರೆ. ಕಾರ್ಮಿಕರಿಗಾಗಿ ೧೮೮೦ರಲ್ಲಿ ಸ್ಥಾಪನೆಯಾಗಿದ್ದ ಉಚಿತ ಆಸ್ಪತ್ರೆ ಮುಚ್ಚಲ್ಪಟ್ಟಿವೆ. ಒಟ್ಟಿನಲ್ಲಿ ಇವರು ಎರಡು ಹೊತ್ತಿನ ಊಟಕ್ಕಾಗಿ ಪರದಾಡುತ್ತಿದ್ದಾರೆ.

### ಭಾರತ್ ಅರ್ತ್ ಮೂವರ್ಸ್ ಲಿ. (ಬಿ.ಇ.ಎಂ.ಎಲ್)

ಜಿಲ್ಲೆಯ ಬಂಗಾರಪೇಟೆಯಲ್ಲಿರುವ ಭಾರತ್ ಆರ್ತ್ ಮೂವರ್ಸ್ (ಲಿ). ಕೇಂದ್ರ ಸರ್ಕಾರಿ ವಲಯದ ಕೈಗಾರಿಕೆಯಾಗಿ ಸ್ಥಾಪಿಸಲ್ಪಟ್ಟಿದ್ದು, ಸ್ವಯಂಚಾಲಿತವಾಗಿ ಮಣ್ಣು ತೆಗೆಯುವ, ಭರ್ತಿಮಾಡುವ, ಸಾಗಿಸುವ ಹಾಗೂ ಭೂಮಿಯನ್ನು ಸಮ ಮಾಡುವ ಯಂತ್ರಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು, ಕೇಂದ್ರ ಸರ್ಕಾರವು ಬೃಹತ್ ಕಂಪನಿಯನ್ನು ಸ್ಥಾಪಿಸುವ ತೀರ್ಮಾನವನ್ನು ಎರಡನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಕೈಕೊಂಡಿತು. ಭಾರತದಲ್ಲಿ ಬೃಹತ್ ಪ್ರಮಾಣದ ನೀರಾವರಿ ಮತ್ತು ವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಭಾರಿ ಯಂತ್ರಗಳ ಅವಶ್ಯಕತೆ ಕಂಡು ಬಂದಿತು. ಈ ಯಂತ್ರಗಳನ್ನು ಉಪಯೋಗಿಸುವುದರಿಂದ ನೂರಾರು ಜನರು ಒಂದು ವಾರದಲ್ಲಿ ಮಾಡುವ ಮಣ್ಣುತೆಗೆಯುವ ಕಾರ್ಯವನ್ನು ಭಾರತ್ ಆರ್ತ್ ಮೂವರ್ಸ್ ಯಂತ್ರಗಳು ಎರಡು ದಿನಗಳಲ್ಲಿ ಮುಗಿಸುವ ಸಾಮರ್ಥ್ಯವನ್ನು ಹೊಂದಿದ್ದವು. ಅಮೇರಿಕದ ಸಂಯುಕ್ತ ಸಂಸ್ಥಾನದ ಲೆಟೋರ್ನ್ಯು–ವೆಸ್ಟಿಂಗ್‌ಹೌಸ್ ಕಂಪನಿ (Letourneall-Westinghouse Company), ಇಲ್ಲಿನಾಯ್ಸ್ (Illinois) ಹಾಗೂ ವೆಸ್ಟಿಂಗ್‌ಹೌಸ್ ಏರ್‌ಬ್ರೇಕ್ ಕಂಪನಿಯ ತಾಂತ್ರಿಕ ಸಹಭಾಗಿತ್ವದೊಂದಿಗೆ ಈ ಕಂಪನಿಯನ್ನು ಸ್ಥಾಪಿಸುವುದೆಂದು ಕೇಂದ್ರ ಸರ್ಕಾರವು ತೀರ್ಮಾನಿಸಿತು. ೧೯೫೬ನೇ ಭಾರತೀಯ ಕಂಪನಿಯ ಶಾಸನದ ಪ್ರಕಾರ ೧೯೬೪ರಲ್ಲಿ ಈ ಕಂಪನಿಯನ್ನು ರಕ್ಷಣಾ ಇಲಾಖೆಯ ವತಿಯಲ್ಲಿ ಸ್ಥಾಪಿಸಲಾಯಿತು.

ಈ ಉದ್ಯಮದ ಸ್ಥಾಪನೆಯ ಕಾಲದಲ್ಲಿ ಮೂಲ ಬಂಡವಾಳವು ೧೦ ಕೋಟಿ ರೂ.ಗಳಾಗಿತ್ತು. ಆದರೆ ಸಂದಾಯವಾದ ಬಂಡವಾಳ ೮.೧೩೮ ಕೋಟಿ ರೂ.ಗಳು, ಸಮಸ್ತ ಬಂಡವಾಳವನ್ನೆಲ್ಲ ಕೇಂದ್ರ ಸರ್ಕಾರವೇ ಹೂಡಿರುತ್ತದೆ. ಈ ಕಂಪನಿಗೆ ಬೇಕಾದ ಬಂಡವಾಳವನ್ನು ಪೂರೈಸಿ, ಇದರ ಸಂಪೂರ್ಣ ಒಡೆತನವನ್ನು ಕೇಂದ್ರ ಸರ್ಕಾರವೇ ಹೊಂದಿದೆ. ಪ್ರಾರಂಭದಲ್ಲಿ ಭಾರತ ಸರ್ಕಾರವು ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಆಡಳಿತಕ್ಕೆ ಒಳಪಟ್ಟಂತೆ ರೈಲುಗಾಡಿ ವಿಭಾಗದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಮಣ್ಣು ತೆಗೆಯುವ ಯಂತ್ರಗಳ ಉತ್ಪಾದನಾ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಿರ್ಧರಿಸಿತ್ತು.

ಭಾರತ ಸರ್ಕಾರದ ಆದೇಶದಂತೆ, ಹಿಂದೂಸ್ತಾನ್ ವಿಮಾನ ಕಂಪನಿಯ ಆಡಳಿತವು ೧೯೬೫ ರಲ್ಲಿ ಯೋಜನಾ ವರದಿಯನ್ನು ಸಿದ್ಧಪಡಿಸಿತು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ವಿದೇಶಿ ವಿನಿಮಯ ಅಗತ್ಯವಾಗಿತ್ತು. ಭಾರತ

ಸರ್ಕಾರ ಆಮದು–ರಪ್ತು ಬ್ಯಾಂಕಿನಿಂದ (EXIM BANK) ಸಾಲ ತೆಗೆಯಲು ನಿಶ್ಚಯಿಸಿದಾಗ ಈ ಯೋಜನೆಯ ಸಂಪೂರ್ಣವಾದ ಆರ್ಥಿಕ ಸಂಭವನೀಯ ವರದಿ (Economic Feasibility report) ಯನ್ನು ತಯಾರಿಸಲು ಅಮೇರಿಕದ ಎ.ಟಿ. ಕೆಯರ್‌ನೇ ಕಂಪನಿಗೆ ವಹಿಸಿತು. ಜಪಾನ್ ದೇಶದ ಕೊಮಟ್ಸು ತಯಾರಿಕಾ ಕಂಪನಿಯ ತಾಂತ್ರಿಕ ಸಹ ಭಾಗಿತ್ವದೊಂದಿಗೆ ಕ್ರಾಲರ್ ಟ್ರಾಕ್ಟರುಗಳನ್ನು (Crawler Tractors), ಮಣ್ಣು ತೆಗೆದು ಸಾಗಿಸುವ ಭಾರಿ ಯಂತ್ರಗಳನ್ನು ತಯಾರಿಸುವ ಒಪ್ಪಂದವೂ ಆಯಿತು. ಕೋಲಾರ ಚಿನ್ನದ ಗಣಿ ಪಟ್ಟಣದ ಉತ್ತರ ಭಾಗದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಲು, ಕರ್ನಾಟಕ ಸರ್ಕಾರವು ೧೬೪೫ ಎಕರೆಗಳ ವಿಸ್ತಾರವಾದ ಭೂಮಿಯನ್ನು ಉಚಿತವಾಗಿ ನೀಡಿತು. ೧೯೬೫ರ ಅಂತ್ಯಕ್ಕೆ ಕಾರ್ಖಾನೆ ಮತ್ತಿತರ ಕಟ್ಟಡಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ೧೯೬೬–೬೭ ರಲ್ಲಿ ಆಮದು ಮಾಡಲ್ಪಟ್ಟ ಯಂತ್ರಗಳನ್ನು ಅಳವಡಿಸಲಾಯಿತು. ಈ ಕಂಪನಿಯು ೧೯೬೮–೬೯ ರಲ್ಲಿ ಟ್ರಾಕ್ಟರು ಹಾಗೂ ಬುಲ್‌ಡೋಜ಼ರ್‌ಗಳ ಉತ್ಪಾದನೆಯನ್ನು ಪ್ರಾರಂಭಿಸಿತು. ಉದ್ಯೋಗಿಗಳ ವಾಸಕ್ಕಾಗಿ ಒಂದು ಉಪನಗರವನ್ನು ನಿರ್ಮಾಣ ಮಾಡಲು ಒಟ್ಟು ಬಂಡವಾಳದ ಶೇ. ೭೫ (ಏಳೂವರೆ) ರಷ್ಟು ಪ್ರಮಾಣದ ಹಣವನ್ನು ಭಾರತ ಸರ್ಕಾರವು ಮಂಜೂರು ಮಾಡಿತು. ಮುಖ್ಯ ಉತ್ಪನ್ನಗಳ ತಯಾರಿಕೆಗೆ ಸಹಾಯವಾಗುವ ಮೆಷಿನ್ ಷಾಪ್, ಟೂಲ್ ರೂಂ, ಹೀಟ್ ಟ್ರೀಟ್‌ಮೆಂಟ್ ಪ್ಲಾಂಟ್, ಇನ್ನಿತರ ಅಂಗ ಸಂಸ್ಥೆಗಳ ಕಟ್ಟಡಗಳು ಪೂರ್ಣಗೊಂಡ ಮೇಲೆ ಉತ್ಪದನಾ ಕಾರ್ಯವೂ ಭರದಿಂದ ಸಾಗುತ್ತಿದೆ. ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಂಪನಿಗೆ ಸೇರಿದ್ದ ಭಾರತ್ ಅರ್ತ್ ಮೂವರ್ಸ್ ಕಂಪನಿಯು ಮಾತೃ ಸಂಸ್ಥೆಯಿಂದ ಬೇರ್ಪಟ್ಟು ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ವಿಮಾನ ಕಾರ್ಖಾನೆಗೆ ಸೇರಿದ್ದ ರೈಲುಗಾಡಿ ತಯಾರಿಕಾ ಕಾರ್ಖಾನೆಯನ್ನು ಭಾರತ್ ಅರ್ತ್ ಮೂವರ್ಸ್ ಕಂಪನಿಯಲ್ಲಿ ಸೇರಿಸಲಾಗಿದ್ದು, ಈ ಘಟಕವು ಬೆಂಗಳೂರಿನಲ್ಲೇ ಮುಂದುವರಿದಿದೆ. ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿರುವ ಭಾರತ್ ಅರ್ತ್ ಮೂವರ್ಸ್ ವಿಭಾಗವು ಮಣ್ಣು ತೆಗೆದು ಸಾಗಿಸುವ ಯಂತ್ರ, ಕ್ರಾಲರ್ ಟ್ರಾಕ್ಟರ್, ಬುಲ್‌ಡೋಜರ್, ಡಂಪರ್ ಮುಂತಾದ ಮೋಟಾರು ಚಾಲಿತಯಂತ್ರಗಳನ್ನು ತಯಾರಿಸುತ್ತಿದೆ. ೧೯೬೭ ರಷ್ಟು ಹಿಂದೆಯೇ ೨೨೫ ಅಶ್ವಶಕ್ತಿಯ ಡಿ–೧೨೦–೬ ಮಾದರಿಯ ಕ್ರಾಲರ್ ಟ್ರಾಕ್ಟರ್‌ಗಳನ್ನು ಮಾರುಕಟ್ಟೆಗೆ ಈ ಕಂಪನಿಯು ಬಿಡುಗಡೆ ಮಾಡಿತು. ಪ್ರಸ್ತುತ ಇಲ್ಲಿ ಬಿಡಿ ೪೭೫, ಬಿಡಿ ೩೫೫, ಬಿಡಿ ೧೫೫, ಬಿಡಿ ೮೦, ಬಿಡಿ ೬೫ ಹಾಗೂ ಬಿಡಿ ೩೦ ಅಶ್ವಶಕ್ತಿ ಬುಲ್‌ಡೋಜರ್‌ಗಳನ್ನು ತಯಾರಿಸಲಾಗುತ್ತಿದೆ. ಇವು ಚೈನ್ ಆಧಾರದಲ್ಲಿ ಚಲಿಸುತ್ತವೆ. ಬಿಇ ೧೦೦೦, ಬಿಇ ೬೫೦, ಬಿಇ ೩೦೦ ಹಾಗೂ ಬಿಇ ೨೨೦ ಅಶ್ವಶಕ್ತಿಯ ಇವು ಗಾಲಿಗಳ ಮೇಲೆ ಚಲಿಸುವ ಬುಲ್‌ಡೋಜರ್‌ಗಳಾಗಿವೆ. ಅಲ್ಲದೆ ರಕ್ಷಣಾ ಇಲಾಖೆಗೆ ಸರಬರಾಜು ಮಾಡಲು ಹೆಚ್.ಆರ್.ವಿ. ಹಾಗೂ ಎ.ಆರ್.ವಿ. ಟಾಟ್ರ (Tatra)ಗಳನ್ನು ತಯಾರಿಸುತ್ತಿದೆ.

ಉತ್ಪಾದನೆಯಲ್ಲಿ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವನ್ನು ೩೦೦ ದಶಲಕ್ಷ ರೂ.ಗಳ ವೆಚ್ಚದಲ್ಲಿ ಕಾರ್ಖಾನೆಯ ಆವರಣದಲ್ಲೇ ಸ್ಥಾಪಿಸಲಾಗಿದೆ. ೨೦೦೩ರ ಹೊತ್ತಿಗೆ ಈ ಕಂಪನಿಯು ಶೇ ೮೫ ರಷ್ಟು ಸ್ವಾವಲಂಬನೆಯನ್ನು ಸಾಧಿಸಿದೆ. ಯಂತ್ರಗಳ ವಿನ್ಯಾಸಗಳನ್ನೂ ಕಂಪನಿಯ ಇಂಜನಿಯರುಗಳೇ ಮಾಡುತ್ತಿದ್ದಾರೆ. ಕಂಪನಿಯು ತಯಾರಿಸಿದ ಯಂತ್ರಗಳಿಗೆಲ್ಲಾ ISO ೯೦೦೦ ಗುಣಮಟ್ಟದ ಶಿಫಾರಸು ದೊರಕಿದೆ.

ಭಾರತ್ ಅರ್ತ್ ಮೂವರ್ಸ್ (ಬೆಮಲ್)ನ ಯಂತ್ರಗಳಲ್ಲಿ ಶೇ ೬೦ ರಷ್ಟನ್ನು ಕಲ್ಲಿದ್ದಲು ಮತ್ತು ಕಬ್ಬಿಣದ ಗಣಿಗಳಲ್ಲಿ ಉಪಯೋಗಿಸಲಾಗುತ್ತಿದೆ. ರಸ್ತೆ ನಿರ್ಮಾಣ, ನೀರಾವರಿ ಮತ್ತು ವಿದ್ಯುತ್ ಯೋಜನೆಯ ನಿರ್ಮಾಣದಲ್ಲೂ ಈ ಯಂತ್ರಗಳು ಉಪಯೋಗಿಸಲ್ಪಟ್ಟಿವೆ. ರಕ್ಷಣಾ ಇಲಾಖೆ ಮತ್ತು ರೈಲ್ವೆ ಇಲಾಖೆಗಳು ತಮ್ಮ ಅಭಿವೃದ್ಧಿ ಕಾರ್ಯದಲ್ಲಿ ಬೆಮಲ್‌ನಲ್ಲಿ ತಯಾರಿಸಿದ ಯಂತ್ರಗಳನ್ನೇ ಉಪಯೋಗಿಸುತ್ತಿವೆ.

ಬೆಮಲ್ ತಯಾರಿತ ಯಂತ್ರೋಪಕರಣಗಳು ಮುಖ್ಯವಾಗಿ ದೇಶದಾದ್ಯಂತ ೧೦ ಪ್ರಾದೇಶಿಕ ಕಛೇರಿಗಳು, ೧೫ ಜಿಲ್ಲಾ ಕಛೇರಿಗಳಲ್ಲಿ ಮಾರಾಟವಾಗುತ್ತಿವೆ. ಅಲ್ಲದೆ ಬಿಡಿ ಭಾಗಗಳ ಮಳಿಗೆಗಳು, ಸೇವಾ ಕೇಂದ್ರಗಳನ್ನು ವ್ಯಾಪಕವಾಗಿ ಬಳಕೆದಾರರ ಅನುಕೂಲಕ್ಕಾಗಿ ತೆರೆಯಲಾಗಿದೆ ಬೆಮೆಲ್‌ನ ಉತ್ಪನ್ನಗಳು ವಿದೇಶಗಳಿಗೂ ರಫ್ತಾಗುತ್ತಿವೆ ಸಿರಿಯಾ, ಟುನಿಷಿಯಾ, ಯು.ಕೆ ಜೋರ್ಡಾನ್, ಏಷ್ಯಾ, ಆಫ್ರಿಕಾ, ಯುರೋಪ್, ಲ್ಯಾಟಿನ್ ಅಮೇರಿಕ ಹಾಗೂ ಮಧ್ಯಪ್ರಾಚ್ಯ ಮುಂತಾದ ೩೦ ರಾಷ್ಟ್ರಗಳಲ್ಲಿ ಮಾರಾಟವಾಗುತ್ತಿವೆ.

ಬೆಮಲ್, ಹೊರದೇಶಗಳಲ್ಲಿ ನಡೆಯುವ ಇಂಜಿನಿಯರಿಂಗ್ ಪ್ರದರ್ಶನಗಳಲ್ಲೂ ಭಾಗವಹಿಸಿ ಮೆಚ್ಚುಗೆಯನ್ನು ಪಡೆದಿದೆ. ಅಲ್ಲದೆ ತನ್ನ ಉತ್ಪನ್ನಗಳಿಗೆ ಹೆಚ್ಚು ಬೇಡಿಕೆಯನ್ನೂ ಗಳಿಸಿದೆ. ಬೆಮಲ್ ಅನೇಕ ಸಣ್ಣ ಮತ್ತು ಅಧೀನ ಕಂಪನಿಗಳಿಗೆ ಬಿಡಿ

ಭಾಗಗಳನ್ನು ತಯಾರಿಸಲು ಬೇಡಿಕೆಗಳನ್ನು ಸಲ್ಲಿಸಿದೆ.ಈ ವಸ್ತುಗಳ ಉತ್ಪಾದನೆಯನ್ನು ಅದರ ಅವಶ್ಯಕತೆಗೆ ತಕ್ಕಂತೆ ತಯಾರಿಸಲು ಸೂಕ್ತ ಮಾರ್ಗದರ್ಶನವನ್ನೂ ಕೊಡುತ್ತಿದೆ. ೨೦೦೨–೦೩ ರಲ್ಲಿ ೫೪ ಕೋಟಿ ರೂ.ಗಳ ಬಿಡಿ ಭಾಗಗಳನ್ನು ಸಣ್ಣ ಮತ್ತು ಅಧೀನ ಕೈಗಾರಿಕೆಗಳಿಂದ ಖರೀದಿಸಿದೆ.

ಕಂಪನಿಯು ತಯಾರಿಸಿದ ವಸ್ತುಗಳ ಮಾರಾಟದ ಮೌಲ್ಯ ೧೯೬೫–೬೬ ರಲ್ಲಿ ಕೇವಲ ೫ ಕೋಟಿ ರೂ.ಗಳಾಗಿತ್ತು. ಇದು ೧೯೮೧–೮೨ ರಲ್ಲಿ ೨೨೧ ಕೋಟಿ ರೂ.ಗಳಿಗೂ, ೧೯೯೫–೯೬ರಲ್ಲಿ ೧,೦೧೧ ಕೋಟಿ ರೂ.ಗಳಿಗೂ ಹಾಗೂ ೨೦೦೨–೦೩ರಲ್ಲಿ ೧೬೮೧ ಕೋಟಿ ರೂ.ಗಳಿಗೂ ಹೆಚ್ಚಿದೆ. ತೆರಿಗೆ ಪಾವತಿಯಾದ ನಂತರದ ಲಾಭ ೧೯೮೬–೮೭ ರಲ್ಲಿ ೩೨ ಲಕ್ಷ ರೂಗಳಾಗಿದ್ದರೆ, ೧೯೯೫–೯೬ ರಲ್ಲಿ ೧೪ ಕೋಟಿ ರೂ.ಗಳಿಗೂ, ೨೦೦೨–೦೩ ರಲ್ಲಿ ೨೬ ಕೋಟಿ ರೂ.ಗಳಿಗೂ ಏರಿತು. ೨೦೦೨–೦೩ ರಲ್ಲಿ ಅಬುದಾಬಿ, ಭೂತಾನ್, ದಕ್ಷಿಣ ಆಫ್ರಿಕಾ, ಸಿರಿಯಾ, ಹಾಗೂ ಟ್ಯುನಿಷಿಯಾ ರಾಷ್ಟ್ರಗಳಿಗೆ ವಸ್ತುಗಳನ್ನು ರಫ್ತುಮಾಡಿ ೧೨.೪೫ ಕೋಟಿ ರೂ.ಗಳ ವಿದೇಶಿ ವಿನಿಮಯವನ್ನು ಗಳಿಸಿತು. ಕೋಲಾರ ಜಿಲ್ಲೆಯಲ್ಲಿರುವ ಈ ಉದ್ಯಮವು ಉತ್ತಮ ಭವಿಷ್ಯವನ್ನು ಹೊಂದಿದ್ದು, ದೇಶದ ಕೈಗಾರಿಕಾ ರಂಗಕ್ಕೆ ಕಳಶಪ್ರಾಯವಾಗಿದೆ.

ಈ ಉದ್ದಿಮೆಯಲ್ಲಿ ೨೦೦೨–೦೩ರಲ್ಲಿ ಒಟ್ಟು ೫,೮೬೬ ಕಾರ್ಮಿಕರಿದ್ದು, ಇವರಲ್ಲಿ ೮೭೫ ಅಧಿಕಾರಿಗಳು ಸೇರಿದ್ದಾರೆ. ಬಂಗಾರುಪೇಟೆಯಲ್ಲಿರುವ ಬೆಮೆಲ್ ಮುಖ್ಯ ಕಾರ್ಖಾನೆಯಾಗಿದ್ದು, ಇದರ ಇತರ ಘಟಕಗಳು ಮೈಸೂರು ಮತ್ತು ಬೆಂಗಳೂರಿನಲ್ಲಿವೆ. ಇದರ ಅಧೀನ (ಸಬ್ಸಿಡಿಯರಿ) ಘಟಕವಾಗಿ ಚಿಕ್ಕಮಂಗಳೂರು ಜಿಲ್ಲೆಯ ತರೀಕೆರೆಯಲ್ಲಿರುವ ವಿಘ್ನಯನ್ ಇಂಡಸ್ಟ್ರೀಸ್ (ವಿ.ಐ.ಎಲ್) ಲಿಮಿಟೆಡ್ ಕಾರ್ಯನಿರ್ವಹಿಸುತ್ತಿದೆ.

ಮೈಸೂರಿನ ಘಟಕ ಎರಡು ವಿಭಾಗಗಳನ್ನು ಹೊಂದಿದ್ದು, ಟ್ರಕ್ ವಿಭಾಗ ಹಾಗೂ ಇಂಜಿನ್ ವಿಭಾಗಗಳಾಗಿ ಕೆಲಸ ನಿರ್ವಹಿಸುತ್ತಿದೆ. ಟ್ರಕ್ ವಿಭಾಗವು ೧೯೮೬ರಲ್ಲಿ ಪ್ರಾರಂಭವಾಗಿದ್ದು, ರಿಯರ್ ಡಂಪ್ ಟ್ರಕ್ಸ್ (೩೫ ಟಿ ಯಿಂದ ೧೭೦ ಟಿ ವರೆಗೆ) ಗಳನ್ನು, ಮೋಟಾರ್ ಗ್ರೇಡರ್ಸ್, ವಾಟರ್ಸ್, ಸ್ಪ್ರಿಂಕ್‌ಲರ್ಸ್, ಏರ್‌ಕ್ರಾಫ್ಟ್ ಟೋಯಿಂಗ್ ಮತ್ತು ಏರ್‌ಕ್ರಾಫ್ಟ್ ವೆಪನ್ ಲೋಡಿಂಗ್ ಟ್ರಾಲಿಗಳು ಹಾಗೂ ಟಾಟ್ರ (Tatra) (8x8, 4x4) ಟ್ರಕ್ಸ್‌ಗಳನ್ನು ಉತ್ಪಾದಿಸಿ, ರಕ್ಷಣಾ ಇಲಾಖೆಗೆ ಸರಬರಾಜು ಮಾಡುತ್ತಿದೆ. ಇಂಜಿನ್ ವಿಭಾಗ, ೧೯೯೦ರಲ್ಲಿ ಪ್ರಾರಂಭವಾಗಿದ್ದು, ವಿವಿಧ ಸಾಮರ್ಥ್ಯದ ಡೀಸಲ್ ಇಂಜಿನ್‌ಗಳನ್ನು ಉತ್ಪಾದಿಸುತ್ತಿದೆ.

ಬೆಂಗಳೂರು ಘಟಕವು ಭಾರತೀಯ ರೈಲ್ವೆಗೆ ಬೇಕಾದ ರೈಲ್ವೆ ಭೋಗಿಗಳು, ಟವರ್ ವ್ಯಾಗನ್‌ಗಳು, ರೈಲ್‌ಬಸ್‌ಗಳು ಹಾಗೂ ಡಿಸಿ ಮತ್ತು ಎಸಿ ಇಎಂಯ್ಯೂ ಗಳನ್ನು ತಯಾರಿಸುತ್ತಿದೆ. ಇದರ ಜೊತೆಗೆ ಡಿಯುಆರ್‌ಸಿ ಉತ್ಕೃಷ್ಟವಾದ ತಾಂತ್ರಿಕತೆಯೊಂದಿಗೆ ಸ್ಟೈನ್‌ಲೆಸ್‌ಸ್ಟೀಲ್, ಮೆಟ್ರೋ ರೈಲ್ವೆ ಭೋಗಿಗಳನ್ನು ಈ ಘಟಕ ತಯಾರಿಸುತ್ತಿದೆ. ಈ ಘಟಕವು ಪ್ರೋಟೋ (Proto) ಮಾದರಿಯ ಸ್ಕೈಬಸ್ ಅನ್ನು ಅಭಿವೃದ್ಧಿಪಡಿಸಿ ಕೆ.ಆರ್.ಸಿ.ಎಲ್. ಗೆ ಪ್ರಯೋಗಕ್ಕೆ ಮತ್ತು ಮೌಲ್ಯೀಕರಣಕ್ಕೆ ಕಳುಹಿಸಿಕೊಡುತ್ತಿದೆ. ಇದು ಸಹ ರಕ್ಷಣಾ ಇಲಾಖೆಗೆ ಬೇಕಾದ ಉಪಕರಣಗಳನ್ನು ತಯಾರಿಸುತ್ತಿದೆ. 'ಪೃಥ್ವಿ' ಮತ್ತು 'ತ್ರಿಶೂಲ್' ಮುಂತಾದ ಉಪಗ್ರಹಗಳನ್ನು ಅಭಿವೃದ್ಧಿಪಡಿಸಲು ಬೇಕಾದ ಉಪಕರಣಗಳನ್ನು ತಯಾರಿಸುತ್ತಿದೆ.

ವಿಘ್ನಯನ್ ಕಾರ್ಖಾನೆ (ಲಿಮಿಟೆಡ್) (ವಿ.ಐ.ಎಲ್) ಖಾಸಗಿ ವಲಯದ ಕಾರ್ಖಾನೆಯಾಗಿದ್ದು, ಒಂದು ರೋಗಗ್ರಸ್ತ ಕಾರ್ಖಾನೆಯಾಗಿತ್ತು. ಅದನ್ನು ೧೯೮೪ರಲ್ಲಿ ಬೆಮೆಲ್ ತನ್ನ ಅಧೀನ ಕಾರ್ಖಾನೆಯಾಗಿ ತೆಗೆದುಕೊಂಡಿತು. ವಿ.ಐ.ಎಲ್. ಉತ್ಕೃಷ್ಟವಾದ ಸ್ಟೀಲ್ ಮತ್ತು ಸ್ಟೀಲ್‌ಕ್ಯಾಸ್ಟಿಂಗ್ ತಯಾರಿಸಿ, ವಿವಿದೆಡೆಗಳಲ್ಲಿರುವ ಬೆಮೆಲ್ ಘಟಕಗಳಾದ ಕೆ.ಜಿ.ಎಫ್., ಬೆಂಗಳೂರು, ಮೈಸೂರು ಹಾಗೂ ಹೊರಗಿನ ಗ್ರಾಹಕರಿಗೆ ಸರಬರಾಜು ಮಾಡುತ್ತಿದೆ. ಬೆಮೆಲ್‌ನ ವಿವಿಧ ಘಟಕಗಳು ಹಾಗೂ ತನ್ನ ಅಧೀನ (ವಿ.ಐ.ಎಲ್) ಘಟಕಗಳು ಐ.ಎಸ್.ಓ (ISO) ೯೦೦೦ ಹಾಗೂ ೨೦೦೦ ಗುಣಮಟ್ಟದ ಧೃಢೀಕರಣ ಪತ್ರವನ್ನು ಪಡೆದುಕೊಂಡಿವೆ.

### ಸಹಕಾರಿ ಸಕ್ಕರೆ ಕಾಖಾನೆ (ಲಿ), ಗೌರಿಬಿದನೂರು

ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಹಿಂದೆ ಆಶಾದಾಯಕವಾಗಿದ್ದು ಇಂದು ಕ್ಷಮ್ಮರೆಯಾಗಿರುವ ಮತ್ತೊಂದು ಕೈಗಾರಿಕೆ ಗೌರಿಬಿದನೂರಿನ ಸಕ್ಕರೆ ಕಾರ್ಖಾನೆ. ಗೌರಿಬಿದನೂರು ಮತ್ತು ನೆರೆಯ ತಾಲ್ಲೂಕುಗಳಲ್ಲಿ ಸಾಕಷ್ಟು ಕಬ್ಬನ್ನು ಬೆಳೆಯಲಾಗುತ್ತಿತ್ತು, ಈ ಸಕ್ಕರೆ

ಕಾರ್ಖಾನೆಯು ಸ್ಥಾಪನೆಯಾಗುವುದಕ್ಕಿಂತ ಮುಂಚೆ, ಈ ಭಾಗದಲ್ಲಿ ಬೆಲ್ಲವನ್ನು ತಯಾರಿಸಲಾಗುತ್ತಿತ್ತು. ಗೌರಿಬಿದನೂರು, ಚಿಕ್ಕಬಳ್ಳಾಪುರ ಹಾಗೂ ನೆರೆಯ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕುಗಳಿಗೆ ಈ ಸಕ್ಕರೆ ಕಾರ್ಖಾನೆಯು ಕೇಂದ್ರ ಬಿಂದುವಾಗಿತ್ತು. ಆ ತಾಲ್ಲೂಕುಗಳಲ್ಲಿ ಬೆಳೆಯುವ ಕಬ್ಬನ್ನು ಗಮನದಲ್ಲಿಟ್ಟುಕೊಂಡು ದಿನಕ್ಕೆ ೧೫೦೦ ಟನ್ನು ಸಕ್ಕರೆಯನ್ನು ಉತ್ಪಾದಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಯೋಜನೆಯನ್ನು ಈ ಭಾಗದ ರೈತರು ರೂಪಿಸಿದ ಪರಿಣಾಮವಾಗಿ, ೧೯೬೧ ರಲ್ಲಿ ಸಹಕಾರಿ ಮಾದರಿಯ ಸಕ್ಕರೆ ಕಾರ್ಖಾನೆಯು ರೂಪುಗೊಂಡಿತು. ೬೫ ಲಕ್ಷ ರೂ. ಷೇರು ಬಂಡವಾಳ ಮತ್ತು ರಾಜ್ಯ ಸರ್ಕಾರ ನೀಡಿದ ೩೦ ಲಕ್ಷ ರೂಪಾಯಿಯ ಸಹಾಯ ಧನದಿಂದ ಕಾರ್ಖಾನೆಯ ಕಟ್ಟಡಗಳ ನಿರ್ಮಾಣ, ಯಂತ್ರೋಪಕರಣಗಳ ಜೋಡಣೆ ಮುಂತಾದ ಕಾರ್ಯಗಳನ್ನು ಮಾಡಲಾಯಿತು. ಉತ್ಪಾದನೆಯನ್ನು ಪ್ರಾರಂಭಿಸುವುದಕ್ಕೆ ಕೇಂದ್ರ ಸರ್ಕಾರದ ಅನುಮತಿಯೂ ದೊರಕಿತು. ೧೯೬೭ರಲ್ಲಿ ಕಬ್ಬನ್ನು ಅರೆದು, ಸಕ್ಕರೆ ತಯಾರಿಸುವ ಕಾರ್ಯ ಆರಂಭವಾಯಿತು. ಪ್ರಾರಂಭದಲ್ಲಿ ವರ್ಷಕ್ಕೆ ಮೂರು ತಿಂಗಳುಗಳ ಕಾಲ ಕಾರ್ಖಾನೆಯು ಸಕ್ಕರೆಯನ್ನು ಉತ್ಪಾದಿಸುತ್ತಿತ್ತು. ಹೀಗೆ ಪ್ರಾರಂಭವಾದ ಕಾರ್ಖಾನೆಗೆ ಎಂಟು ತಿಂಗಳು ಕಾಲ ಸಕ್ಕರೆ ಉತ್ಪಾದಿಸಲು ಸಾಕಾಗುವಷ್ಟು ಕಬ್ಬು ಪೂರೈಕೆಯಾಗುತ್ತಿತ್ತು. ಈ ಕಾರ್ಖಾನೆಯು ಉತ್ಕೃಷ್ಟವಾದ ಹರಳು ಸಕ್ಕರೆಯನ್ನು ತಯಾರಿಸುತ್ತಿದ್ದು, ಈ ಸಕ್ಕರೆಗೆ ವಿಪುಲವಾದ ಬೇಡಿಕೆಯೂ ಇತ್ತು, ೧೯೬೭ ರಲ್ಲಿ ೨೦೫ ಕಾರ್ಮಿಕರಿಂದ ಆರಂಭವಾದ ಈ ಕಾರ್ಖಾನೆಯು ೧೯೮೫ರ ಹೊತ್ತಿಗೆ ೩೨೦ ಕಾರ್ಮಿಕರಿಗೆ ಉದ್ಯೋಗ ಒದಗಿಸಿತ್ತು. ಈ ಮಧ್ಯೆ ದಾರುಣ ನಷ್ಟಕ್ಕೆ ಗುರಿಯಾದ ಈ ಸಹಕಾರಿ ಕಂಪನಿಯನ್ನು 'ಸಿರಗುಪ್ಪ ಸಕ್ಕರೆ ಮತ್ತು ರಾಸಾಯನಿಕ ವಸ್ತುಗಳು' ಕಂಪನಿಯ ಮಾಲೀಕರಿಗೆ ಮಾರಾಟ ಮಾಡಲಾಯಿತು. ಸಿರಗುಪ್ಪ ಸಕ್ಕರೆ ಕಂಪನಿಯ ಮಾಲೀಕರು ನಾಲ್ಕೈದು ವರ್ಷಗಳ ಕಾಲ ಕಾರ್ಖಾನೆಯನ್ನು ಮುಂದುವರಿಸಿದರು. ಆದರೆ ಈ ಕಂಪನಿಯೂ ನಷ್ಟದ ಸಮಸ್ಯೆಯನ್ನು ಎದುರಿಸಲಾರದೆ ನಾಲ್ಕು ವರ್ಷಗಳ (೨೦೦೦) ಹಿಂದೆ ಉತ್ಪಾದನೆಯನ್ನು ಸ್ಥಗಿತಗೊಳಿಸಿತು. ಸಕ್ಕರೆ ಉತ್ಪಾದನೆ ಸ್ಥಗಿತಗೊಂಡಿದ್ದರಿಂದ ಕಬ್ಬಿನ ಬೆಳೆಯೂ ಸ್ಥಗಿತಗೊಂಡಿತು. ಪರ್ಯಾಯವಾಗಿ ಈ ಭಾಗದ ರೈತರು ಮೆಕ್ಕೆ ಜೋಳದ ಕೃಷಿಯನ್ನು ಪ್ರಾರಂಭಿಸಿದ್ದಾರೆ.

## ಗೌರಿ ಡಿಸ್ಟಿಲರಿ ಪ್ರೈ. ಲಿಮಿಟೆಡ್, ಗೌರಿಬಿದನೂರು

ಈ ಉದ್ಯಮವು ೧೯೮೦ರಲ್ಲಿ ಗೌರಿಬಿದನೂರಿನಲ್ಲಿ ರೂ. ೨,೮೭೪ಲಕ್ಷ ಬಂಡವಾಳದೊಂದಿಗೆ ಸ್ಥಾಪಿತವಾಯಿತು. ಇದು ಪ್ರತಿ ದಿನ ೩೦ ಕೆ. ಎಲ್.ರೆಕ್ಟಿಫೈಡ್ ಸ್ಪಿರಿಟ್ ಹಾಗೂ ೨೦ ಕೆ.ಎಲ್. ನ್ಯೂಟ್ರಲ್ ಸ್ಪಿರಿಟ್ ಉತ್ಪಾದಿಸುತ್ತಿದೆ. ಈ ಉದ್ಯಮವು ೬೮ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಈ ಕಾರ್ಖಾನೆಯಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಭವಿಷ್ಯ ನಿಧಿ ಸೌಲಭ್ಯವನ್ನು ಮಾತ್ರ ಕಲ್ಪಿಸಲಾಗಿದೆ.

## ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.

ಈ ಒಕ್ಕೂಟವು ಬೆಂಗಳೂರು ಹಾಲು ಒಕ್ಕೂಟದಿಂದ ೧೯೮೭ರಲ್ಲಿ ಬೇರ್ಪಟ್ಟು ಕಾರ್ಯಾರಂಭ ಮಾಡಿತು. ಹಾಗೂ (ಕೋಲಾರ (೨ಲಕ್ಷ), ಚಿಂತಾಮಣಿ (೧ಲಕ್ಷ), ಗೌರಿಬಿದನೂರು (೧ಲಕ್ಷ) ಮತ್ತು ಸಾದಲಿ (೧ಲಕ್ಷ))ಗಳಲ್ಲಿ ಒಟ್ಟು ಐದು ಲಕ್ಷ ಲೀಟರ್‌ಗಳಷ್ಟು ಸಾಮರ್ಥ್ಯದ ಶೈತ್ಯಾಗಾರಗಳನ್ನು ಹೊಂದಿದೆ. ಹಾಲಿನಲ್ಲಿರುವ ಜೀವಾಣುಗಳ ಶಕ್ತಿಗುಂದಿಸಲು ಹಾಲನ್ನು ಪ್ಯಾಶ್ಚರ್ ಸಂಸ್ಕಾರಕ್ಕೆ ಒಳಪಡಿಸಿ (ಪ್ಯಾಶ್ಚರೈಸೇಷನ್), ಹಾಲಿನಲ್ಲಿರುವ ಜಿಡ್ಡನ್ನು ಒಂದು ನಿಶ್ಚಿತ ಮಟ್ಟಕ್ಕೆ ತಂದು ಪಾಲಿಥೀನ್ ಚೀಲಗಳಲ್ಲಿ ತುಂಬಿ ಮಾರಾಟ ಮಾಡಲಾಗುತ್ತದೆ. ಹಾಲಿನ ಉಪ ಉತ್ಪನ್ನಗಳಾದ ಬೆಣ್ಣೆ, ಗಿಣ್ಣು, ತುಪ್ಪ, ಪೇಡ, ಮಸಾಲೆ ಮಜ್ಜಿಗೆ ಹಾಗೂ ಶೈತೀಕರಣದ ಅವಶ್ಯಕತೆಯಿಲ್ಲದ ೪೫ ದಿವಸಗಳವರೆಗೆ ಇಡಬಹುದಾದ 'ಗುಡ್‌ಲೈಫ್' ಹೆಸರಿನ ಹಾಲು, 'ಅಮೂಲ್' ಹೆಸರಿನಲ್ಲಿ ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಭರ್ತಿಮಾಡಿದ ಮೊಸರು, ಪಾಲಿಥೀನ್ ಚೀಲಗಳಲ್ಲಿ ತುಂಬಿದ ಮೊಸರು, ಇತ್ಯಾದಿ ವಸ್ತುಗಳನ್ನು ತಯಾರಿಸಿ ಒಕ್ಕೂಟವು ಮಾರಾಟ ಮಾಡುತ್ತಿದೆ. ಎಲ್ಲ ವಸ್ತುಗಳ ಚೀಲದ ಮೇಲೆ 'ನಂದಿನಿ' ಎಂಬ ಟ್ರೇಡ್‌ಮಾರ್ಕ್ ಇರುತ್ತದೆ.

ಒಕ್ಕೂಟದ ಆಡಳಿತ ಕಛೇರಿ ಮತ್ತು ಉತ್ಪಾದನಾ ಘಟಕಗಳು ಕೋಲಾರ–ಮುಳಬಾಗಿಲು ಹೆದ್ದಾರಿಯಲ್ಲಿ ಕೋಲಾರದಿಂದ ೧೦ ಕಿಲೋಮೀಟರ್ ದೂರದಲ್ಲಿ ೩೩.೧ ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಸ್ಥಾಪನೆಯಾಗಿದೆ. ಈ ಉದ್ಯಮವು ಸಹಕಾರ ತತ್ವದ ಆಧಾರದ ಮೇಲೆ ಸ್ಥಾಪನೆಯಾಗಿದ್ದು, ಜಿಲ್ಲೆಯ ೨,೮೯೩ ಹಳ್ಳಿಗಳ ಹಾಲು ಉತ್ಪಾದಕರ ಸಂಘಗಳು ಇದರ ಸದಸ್ಯರಾಗಿವೆ. ಹಾಲು

ಉತ್ಪಾದನೆ ಮತ್ತು ಮಾರಾಟ, ಉತ್ತಮ ತಳಿಗಳ ಅಭಿವೃದ್ಧಿ, ದನಗಳ ರೋಗ ನಿವಾರಣೆಗೆ ಏರ್ಪಾಡು, ಹಸುಗಳಿಗೆ ಪೌಷ್ಠಿಕ ಆಹಾರ ಪೂರೈಕೆ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ ಮುಂತಾದ ಕಾರ್ಯಗಳನ್ನು ಈ ಒಕ್ಕೂಟವೇ ನೋಡಿಕೊಳ್ಳುತ್ತದೆ.

ಕೋಲಾರದ ಒಕ್ಕೂಟ ಪ್ರಾರಂಭವಾದಾಗ ಜಿಲ್ಲೆಯಲ್ಲಿ ೪೬೦ ಹಾಲು ಉತ್ಪಾದಕರ ಸಂಘಗಳಿದ್ದವು. ೨೦೦೪ರ ಮಾರ್ಚ್ ಅಂತ್ಯದಲ್ಲಿ ೧,೪೦೭ ಹಾಲು ಉತ್ಪಾದಕರ ಸಂಘಗಳು ಕಾರ್ಯನಿರತವಾಗಿದ್ದವು. ೧೯೮೭ರ ಏಪ್ರಿಲ್‌ನಲ್ಲಿ ಸರಾಸರಿ ಹಾಲು ಶೇಖರಣೆ ದಿನಕ್ಕೆ ೧,೫೬,೭೬೪ ಕೆ.ಜಿ. ಗಳಾಗಿದ್ದರೆ, ೨೦೦೩ರ ಮಾರ್ಚ್ ಅಂತ್ಯಕ್ಕೆ ೫.೫೫ ಲಕ್ಷ ಕೆ.ಜಿ.ಗೆ ಹೆಚ್ಚಳಗೊಂಡಿತ್ತು. ಪ್ರತಿ ಹಾಲು ಉತ್ಪಾದಕರ ಸಹಕಾರ ಸಂಘವು ಸರಾಸರಿ ೪೬೦ ಕೆ.ಜಿ. ಹಾಲನ್ನು ದಿನವಹಿ ಶೇಖರಿಸುತ್ತದೆ.

ಕೋಲಾರ ಮತ್ತು ಇತರ ಮೂರು ಶೈತ್ಯಾಗಾರ ಕೇಂದ್ರಗಳ ಸ್ಥಾಪನೆಗೆ ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಯಂತ್ರೋಪಕರಣಗಳನ್ನು ಖರೀದಿಸಿ, ಅಳವಡಿಸುವುದಕ್ಕೆ ಸುಮಾರು ೧೨.೫೧ ಕೋಟಿ ರೂ.ಗಳ ಬಂಡವಾಳವನ್ನು ಹೂಡಲಾಗಿದೆ. ಹಾಲನ್ನು ಸಂಗ್ರಹಿಸಲು ಉತ್ಪಾದಕರ ಸಹಕಾರ ಸಂಘಗಳಿಗೆ ಸ್ಟೈಯಿನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಕೊಡಲಾಗಿದೆ. ಹಾಲು ಹಿಂಡಲು ಸಹಕಾರ ಸಂಘಗಳಿಗೆ ಒಕ್ಕೂಟವು ೧.೪೩ಲಕ್ಷ ರೂ.ಬೆಲೆ ಬಾಳುವ ಹಾಲು ಹಿಂಡುವ ಯಂತ್ರಗಳನ್ನು ನೀಡಿದೆ. ೪೩ ಹಾಲು ಉತ್ಪಾದನಾ ಕೇಂದ್ರಗಳಲ್ಲಿ ಸ್ವಯಂಚಾಲಿತ ಹಾಲು ಸಂಗ್ರಹಣಾ ಘಟಕಗಳನ್ನು ಸ್ಥಾಪಿಸಲಾಗಿದೆ. ಹಾಲು ಶೇಖರಣೆಯಾದ ತಕ್ಷಣವೇ ಶೈಥಲೀಕರಣಕ್ಕೆ ಒಳಪಡಿಸಲು ಹಾಲು ಉತ್ಪಾದಕರ ಸಂಘಗಳಲ್ಲಿ ಯಂತ್ರಗಳನ್ನು ಅಳವಡಿಸಲಾಗಿದೆ. ಗಿಣ್ಣು ತಯಾರಿಸುವ ಘಟಕ ಸ್ಥಾಪಿಸಲು ೩.೫ ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಉದ್ಯಮದ ವ್ಯವಹಾರಗಳನ್ನು ನಿರ್ದೇಶನ ಮಾಡುವುದಕ್ಕಾಗಿ, ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಚುನಾಯಿತರಾದ ಸದಸ್ಯರನ್ನೊಳಗೊಂಡ ಮಂಡಲಿ ಇದ್ದು. ಇದಕ್ಕೆ ಚುನಾಯಿತ ಅಧ್ಯಕ್ಷರು ಮುಖ್ಯಸ್ಥರಾಗಿರುತ್ತಾರೆ. ಈ ಮಂಡಲಿಯು ಒಕ್ಕೂಟದ ರೀತಿ ನೀತಿ, ರೂಪು-ರೇಷೆಗಳನ್ನು ನಿರ್ಧರಿಸುತ್ತದೆ. ಮಂಡಲಿಯು ಮಾಡಿದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ವ್ಯವಸ್ಥಾಪಕ ನಿರ್ದೇಶಕ ತಂತ್ರಜ್ಞರಿರುತ್ತಾರೆ. ಹಾಲು ತಯಾರಿಕಾ ವಿಜ್ಞಾನದಲ್ಲಿ ಶಿಕ್ಷಣ ಪಡೆದಿರುವ ಪರಿಣಿತರು ಮತ್ತು ತಾಂತ್ರಿಕ ಅಧಿಕಾರಿಗಳು ಸಹಾಯಕ ವ್ಯವಸ್ಥಾಪಕರು, ಎಂಜಿನಿಯರುಗಳು, ಲೆಕ್ಕಿಗರು, ಪರಿಶೋಧಕರು, ಮಾರಾಟ ವಿಭಾಗದ ಅಧಿಕಾರಿ, ಮೋಟಾರು ವಾಹನಗಳ ನಿಯಂತ್ರಕರು, ಚಾಲಕರು, ಕಂಪ್ಯೂಟರ್ ವಿಭಾಗದ ಅಧಿಕಾರಿಗಳು ಹೀಗೆ ೪೫೦ ಸಿಬ್ಬಂದಿ ವರ್ಗದವರು ಇದ್ದರು.

## ಹಾಲು ಉದ್ಯಮದ ಪ್ರಗತಿ

೨೦೦೩-೦೪ರಲ್ಲಿ ಈ ಉದ್ಯಮವು ೬೬೬೬೫೦ ಕೆ.ಜಿ.ಗಳಷ್ಟು ಪೇಡ, ೭೯,೦೩೬೭೭ ಕೆ.ಜಿ. ತುಪ್ಪ ೧೦,೭೭೬೮೧ ಕೆ.ಜಿ. ಮೊಸರು, ೨೭,೦೫,೩೪೯.೬೧ ಕೆ.ಜಿ. ಬೆಣ್ಣೆ ಹಾಗೂ ೩೩,೬೨,೬೭೦ ಕೆ.ಜಿ. ಹಾಲಿನ ಪುಡಿ ಇನ್ನಿತರ ಉತ್ಪನ್ನಗಳನ್ನು ಮಾರಾಟ ಮಾಡಿದೆ. ಈ ಉದ್ಯಮವು ತಯಾರಿಸಿದ ಬಹುಪಾಲು ತುಪ್ಪವನ್ನು ತಿರುಪತಿ ದೇವಸ್ಥಾನಕ್ಕೆ ಮಾರಾಟ ಮಾಡಲಾಗುತ್ತಿದೆ. ಈ ಉದ್ಯಮವು ೨೦೦೩-೦೪ರಲ್ಲಿ ೬,೨೭,೮೭೫ ಕೆ.ಜಿ. 'ಮಸ್ತದಹಿ'ಯನ್ನು ಮೈಸೂರು, ಬೆಂಗಳೂರು, ಪಾಂಡಿಚೇರಿ ಮತ್ತು ಚೆನ್ನೈ ನಗರಗಳಲ್ಲಿ ಮಾರಾಟ ಮಾಡಿತು. ಟೆಟ್ರಾಪ್ಯಾಕ್‌ನ ಸಹಯೋಗದೊಂದಿಗೆ ಗುಡ್‌ಲೈಫ್ ಹಾಲಿನ ಪೊಟ್ಟಣಗಳನ್ನು, ಸ್ಮಾರ್ಟ್ ಹಾಲನ್ನು ಆಂಧ್ರಪ್ರದೇಶ, ಗೋವಾ ಕೇರಳ ಮತ್ತು ಮಹಾರಾಷ್ಟ್ರ ನಗರಗಳಲ್ಲಿ ಮಾರಾಟ ಮಾಡುತ್ತಿದೆ. ಈ ಅವಧಿಯಲ್ಲಿ ೪೪,೨೬,೭೯೮ ಲೀಟರ್ ಗುಡ್‌ಲೈಫ್ ಹಾಲು, ೪೫,೯೭೦ ಲೀಟರ್ ಹೈ ಫ್ಯಾಟ್ ಹಾಲು, ೪೭,೨೮೦ ಲೀಟರ್ ಸ್ಮಾರ್ಟ್ ಹಾಲು ಹಾಗೂ ೫,೪೪,೯೩೦ ಲೀಟರ್ ಸ್ಲಿಮ್ ಹಾಲನ್ನು ಮಾರಾಟ ಮಾಡಲಾಗಿದೆ. ಬೆಂಗಳೂರಿನಲ್ಲಿ ಪಾಲಿಥೀನ್ ಚೀಲಗಳಲ್ಲಿ ಜಿಡ್ಡು ತೆಗೆದ ಹಾಲನ್ನು ಅರ್ಧ ಲೀಟರ್, ಒಂದು ಲೀಟರ್ ಚೀಲಗಳಲ್ಲಿ ತುಂಬಿ ಮಾರಾಟ ಮಾಡುತ್ತಿದೆ.

ಒಕ್ಕೂಟವು ಉತ್ಕೃಷ್ಟವಾದ ಹಾಲನ್ನು ಉತ್ಪಾದಿಸುವುದಕ್ಕೆ ಪಶುಪಾಲಕರಿಗೆ ಶಿಬಿರಗಳನ್ನು ನಡೆಸಿ ಆಧುನಿಕ ರೀತಿಯಲ್ಲಿ ದನಗಳನ್ನು ಸಾಕುವುದರ ಬಗ್ಗೆ ತರಬೇತಿಯನ್ನು ಕೊಡುತ್ತಿದೆ. ಪೌಷ್ಠಿಕಾಂಶದಿಂದ ಕೂಡಿದ ಮೇವು ಮತ್ತು ತಿಂಡಿಗಳನ್ನು ಒದಗಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ವರ್ಷಕ್ಕೆ ೧೬ ಸಾವಿರ ಟನ್ನುಗಳಷ್ಟು ಪಶು ಆಹಾರವನ್ನು ಸರಬರಾಜು ಮಾಡುತ್ತಿದೆ. ಪಶು ರೋಗಗಳನ್ನು ತಪ್ಪಿಸಲು, ಗುಣಪಡಿಸಲು ಚುಚ್ಚು ಮದ್ದು ನೀಡುತ್ತದೆ. ಕೋಲಾರದ ಚಿನ್ನದ ಗಣಿಯಲ್ಲಿ ಉದ್ಯೋಗವನ್ನು ಕಳೆದುಕೊಂಡ ನಿರುದ್ಯೋಗಿಗಳಿಗೆ ಒಕ್ಕೂಟವು ಉತ್ತಮ ತಳಿಯ ಹಸುಗಳನ್ನು ಸಾಲದ ರೂಪದಲ್ಲಿ ಹಂಚಿದೆ.

ಶುದ್ಧಹಾಲು ಕಾರ್ಯಕ್ರಮದಡಿ ಒಕ್ಕೂಟವು ಹಾಲು ಉತ್ಪಾದಕರ ಸಂಘಗಳಲ್ಲಿ ಶುದ್ಧ ಹಾಲು ಉತ್ಪಾದನೆಗೆ ಅವಶ್ಯವಾಗಿರುವ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು ಖರೀದಿಸಿ ಅಳವಡಿಸಲಾಗಿದೆ. ಈ ಉಪಕರಣಗಳಿಗೆ ತಗಲಿರುವ ವೆಚ್ಚದ ವಿವರಗಳನ್ನು ಮುಂದೆ ನೀಡಲಾಗಿದೆ. ಸ್ವಯಂಚಾಲಿತ ಹಾಲು ಶೇಖರಣಾ ಘಟಕಗಳ ಸಂಖ್ಯೆ ೨೮೩ ಆಗಿದ್ದು, ರೂ. ೨೮೩ ಲಕ್ಷ ಖರ್ಚು ಮಾಡಲಾಗಿದೆ. ಹಾಗೆಯೇ ಸ್ವಯಂಚಾಲಿತ ಹಾಲು ಕರೆಯುವ ಯಂತ್ರಗಳ ಸಂಖ್ಯೆ ೧೯೪ (೨೮೧ ಲಕ್ಷ ರೂ.ಗಳು), ಸ್ವಯಂಚಾಲಿತ ಹಾಲು ತೂಕಮಾಡುವ ಯಂತ್ರಗಳ ಸಂಖ್ಯೆ ೧೬೫ (೨೬ ಲಕ್ಷ ರೂ.ಗಳು), ಬಲ್ಕ್ ಮಿಲ್ಕ್ ಕೂಲರ್ ಘಟಕಗಳ ಸಂಖ್ಯೆ ೧೦೫ (೫೨೫ ಲಕ್ಷ ರೂ.ಗಳು), ಹಾಲು ಪರೀಕ್ಷಾ ಯಂತ್ರಗಳ ಸಂಖ್ಯೆ ೪೧೭ (೧೧೭.೧೦ ಲಕ್ಷ ರೂ.ಗಳು), ಸ್ಟೈನ್‌ಲೆಸ್ ಸ್ಟೀಲ್ ಹಾಲು ಶೇಖರಣಾ ಉಪಕರಣಗಳು ೧೧೦ ಸೆಟ್ (೪.೦೦ ಲಕ್ಷ ರೂ.ಗಳು), ಸ್ಟೈನ್‌ಲೆಸ್ ಸ್ಟೀಲ್ ಹಾಲಿನ ಪಾತ್ರೆಗಳ ಸಂಖ್ಯೆ ೧೩,೦೦೦ (೪೦ ಲಕ್ಷ ರೂ.ಗಳು) (ಹಾಲು ಉತ್ಪಾದಕರಿಗೆ), ಶುದ್ಧ ಹಾಲು ಕಾರ್ಯಕ್ರಮದ ಪ್ರಚಾರ ಸಾಮಗ್ರಿಗಳು ೧೬೦೦ ಸಂಘಗಳಿಗೆ (೧೦.೫೦ ಲಕ್ಷ ರೂ.ಗಳು) ಹಾಗೂ ಶುದ್ಧ ಹಾಲು ಕಾರ್ಯಕ್ರಮದ ತರಬೇತಿ ೧೬೦೦ ಸಂಘಗಳಿಗೆ (೯ ಲಕ್ಷ ರೂ.ಗಳು). ಹೀಗೆ ಒಟ್ಟು ಶುದ್ಧ ಹಾಲು ಕಾರ್ಯಕ್ರಮಕ್ಕಾಗಿ ೧೨.೯೫ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. (ಆವರಣದಲ್ಲಿ ನೀಡಿರುವ ಅಂಕಿಗಳು ವೆಚ್ಚವನ್ನು ಸೂಚಿಸುತ್ತವೆ.)

೨೦೦೩-೦೪ರಲ್ಲಿ ಈ ಒಕ್ಕೂಟವು ೨೫,೪೮೪.೨೦ ಲಕ್ಷ ರೂ.ಗಳ ವಹಿವಾಟು ನಡೆಸಿ ಹಾಲು ಉತ್ಪಾದಕರಿಗೆ ೧೮,೫೮೮.೬೦ ಲಕ್ಷ ರೂ.ಗಳನ್ನು ಸಹಕಾರ ಸಂಘಗಳ ಮೂಲಕ ಪಾವತಿ ಮಾಡಿದೆ. ಆ ಸಾಲಿನಲ್ಲಿ ಈ ಉದ್ಯಮವು ೭೦.೭೦ ಲಕ್ಷ ರೂ.ಗಳ ನಿವ್ವಳ ಲಾಭವನ್ನು ಗಳಿಸಿದೆ. ಕ್ಷೀರ ಕ್ರಾಂತಿಯನ್ನು ಜಿಲ್ಲೆಯಲ್ಲಿ ನಡೆಸಿ ಕೀರ್ತಿ ಗಳಿಸಿದ ಸಂಸ್ಥೆಯೆಂದರೆ, ಕೋಲಾರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ. ಈ ಒಕ್ಕೂಟವು ಗ್ರಾಮಾಂತರ ಪ್ರದೇಶಗಳ ಮಹಿಳೆಯರಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಿ ಪ್ರಯೋಜನ ಪಡೆಯಲು ವ್ಯವಸ್ಥೆ ಮಾಡಿದೆ. ಈಗಾಗಲೇ ೭೩ ಮಹಿಳಾ ಸಹಕಾರ ಸಂಘಗಳು ದಾಖಲಾಗಿವೆ. ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ೬,೫೦೦ ಜನರಿಗೆ ಹಾಲು ಉತ್ಪಾದನೆಯಲ್ಲಿ ಭಾಗವಹಿಸಿ ವರಮಾನವನ್ನು ಗಳಿಸಲು ಈ ಒಕ್ಕೂಟವು ಅನುಕೂಲ ಮಾಡಿದೆ. ಈ ಒಕ್ಕೂಟಕ್ಕೆ ೨೦೦೩ರ ಅಂತ್ಯಕ್ಕೆ ೭.೨೮ ಕೋಟಿ ರೂ.ಗಳ ಷೇರು ಬಂಡವಾಳ ಸಂದಾಯವಾಗಿದೆ. ಈ ಉದ್ಯಮವು ISO-೯೦೦೨ರ ಧೃಡೀಕರಣವನ್ನು ಗಳಿಸಿದೆ. ಜಿಲ್ಲೆಯ ಹೈನುಗಾರಿಕೆ ಅಭಿವೃದ್ಧಿ ಯೋಜನಾಕಾರ್ಯಕ್ಕೆ ಒಟ್ಟು ರೂ. ೩೬.೫೧ ಕೋಟಿ ವೆಚ್ಚ ಮಾಡಿದೆ. ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಲಿಯು ಎರಡು ಕೋಟಿ ರೂ.ಗಳ ಸಹಾಯಧನವನ್ನೂ, ೧೭.೯೮ ಕೋಟಿ ರೂ.ಗಳ ಬಡ್ಡಿ ರಹಿತ ಸಾಲವನ್ನೂ, ೧೧.೪೩ ಕೋಟಿ ರೂ.ಗಳ ಶೇ.೧೨ರ ಬಡ್ಡಿಯಂತೆ ಸಾಲವನ್ನೂ ಒದಗಿಸಿದೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ-೮ ಅನ್ನು ನೋಡಿ. ಕೋಮುಲ್‌ನ ಸಾಧನೆಯ ವಿವರಗಳಿಗೆ ಕೋಷ್ಟಕ ೫.೭ಅನ್ನು ನೋಡಿ.

**ಯೂನಿವರ್ಸಲ್ ಹೆಲ್ತ್‌ಕೇರ್ (ಪ್ರೈ) ಲಿಮಿಟೆಡ್, ಟಮಕ**

ಈ ಉದ್ಯಮವು ಹಣ್ಣಿನ ರಸ, ತಿರುಳು ಮತ್ತು ಜಾಮ್‌ಗಳನ್ನು ತಯಾರು ಮಾಡಿ, ಸಂಸ್ಕರಿಸಿ ಡಬ್ಬ ಮತ್ತು ಸೀಸೆಗಳಲ್ಲಿ ತುಂಬಿ ಹಿಂದೂಸ್ತಾನ್ ಲಿವರ್ ಕಂಪನಿಗೆ ಸರಬರಾಜು ಮಾಡುತ್ತಿದೆ. ಈ ಉದ್ಯಮದಲ್ಲಿ ೩೦ ಜನ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ವರ್ಷಕ್ಕೆ ಒಂದು ಕೋಟಿ ರೂ. ಮೌಲ್ಯದ ಉತ್ಪನ್ನವನ್ನು ತಯಾರಿಸುತ್ತಿದೆ.

**ವಿಶ್ವಕರ್ಮ ರಿಫ್ರಾಕ್ಟರೀಸ್, ಟಮಕ**

೧೯೮೬ ರಲ್ಲಿ ಸ್ಥಾಪನೆಯಾದ ಈ ಉದ್ಯಮವು ಉಕ್ಕಿನ ಕಾರ್ಖಾನೆ ಮತ್ತು ಲೋಹದ ಕಾರ್ಖಾನೆಗಳಿಗೆ ಅತ್ಯಗತ್ಯವಾದ ಕುಲುಮೆಗಳನ್ನು ನಿರ್ಮಿಸಲು ವಿಶೇಷವಾದ ರಿಫ್ರಾಕ್ಟರಿ ಇಟ್ಟಿಗೆಗಳನ್ನು ತಯಾರಿಸುತ್ತಿದೆ. ಈ ಉದ್ಯಮವು ವರ್ಷಕ್ಕೆ ೧೨ ರಿಂದ ೧೪ ಕೋಟಿ ರೂ. ಮೌಲ್ಯದ ಮೂಲಭೂತ ರಿಫ್ರಾಕ್ಟರಿಗಳನ್ನು ತಯಾರಿಸುತ್ತಿದೆ. ಈ ಉದ್ಯಮದಲ್ಲಿ ೭೪ ಜನ ಕಾರ್ಮಿಕರು, ೧೪ ಜನ ಆಡಳಿತ ವರ್ಗದ ಅಧಿಕಾರಿಗಳೂ ಕೆಲಸ ಮಾಡುತ್ತಿದ್ದಾರೆ.

**ಭುವಾಲ್ಕ ಉಕ್ಕಿನ ಕಾರ್ಖಾನೆ, (ಲಿ). ಟಮಕ**

ಈ ಉದ್ಯಮವು ೧೯೮೬ ರಲ್ಲಿ ೨.೪೩ ಕೋಟಿ ರೂ.ಗಳ ಬಂಡವಾಳದೊಂದಿಗೆ ಸ್ಥಾಪನೆಯಾಯಿತು. ನಿರುಪಯೋಗಿ ಕಬ್ಬಿಣದ ಚೂರುಪಾರುಗಳಿಂದ ಮೈಲ್ಡ್‌ಸ್ಟೀಲ್ ಪದಾರ್ಥಗಳನ್ನು ತಯಾರಿಸಿ ಉಕ್ಕಿನ ಉತ್ಪನ್ನಗಳನ್ನು ತಯಾರಿಸುವ ಕೈಗಾರಿಕೆಗಳಿಗೆ

## ಕೋಷ್ಟಕ. ೫.೭ ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಸಾಧನೆಯ ವಿವರ

| ವರ್ಷಗಳು | ನೋಂದಾಯಿಸಿರುವ ಸಂಘಗಳ ಸಂಖ್ಯೆ | ಕಾರ್ಯ ನಿರತ ಸಂಘಗಳ ಸಂಖ್ಯೆ | ಸದಸ್ಯರ ಸಂಖ್ಯೆ (ಲಕ್ಷ ಗಳಲ್ಲಿ) | ದಿನವಹಿ ಸರಾಸರಿ ಹಾಲು ಶೇಖರಣೆ (ಕೆ.ಜಿ) | ಹಾಲು ಶೇಖರಣಾ ದರ ಪ್ರತಿ ಕೆ.ಜಿ.ಗೆ (ರೂ.ಪೈ) | ದಿನವಹಿ ಸರಾಸರಿ ಹಾಲು ಶೇಖರಣೆ ಪ್ರತಿ ಸಂಘಕ್ಕೆ (ಕೆ.ಜಿ) | ಸರಾಸರಿ ಶೇಖರಣಾ ಸಾಗಾಣಿಕಾ ವೆಚ್ಚ ಪ್ರತಿ ಕೆ.ಜಿ.ಗೆ (ರೂ. ಪೈ) | ಲಾಭ ದಲ್ಲಿರುವ ಸಂಘಗಳ ಸಂಖ್ಯೆ | ಲಾಭದ ಮೊತ್ತ ಲಕ್ಷ ರೂ.ಗಳಲ್ಲಿ | ನಷ್ಟದಲ್ಲಿರುವ ಸಂಘಗಳ ಸಂಖ್ಯೆ | ನಷ್ಟದ ಮೊತ್ತ ಲಕ್ಷ ರೂ. ಗಳಲ್ಲಿ | ದಿನವಹಿ ಸರಾಸರಿ ಹಾಲು ಮಾರಾಟ (ಲೀಟರ್ ಗಳಲ್ಲಿ) | ಕೃತಕ ಗರ್ಭ ಧಾರಣೆ ಮಾಡಿರುವ ರಾಸುಗಳ ಸಂಖ್ಯೆ | ಪಶು ಆಹಾರ ಮಾರಾಟ (ಟನ್ ಗಳಲ್ಲಿ) | ಒಕ್ಕೂಟದ ನಿವ್ವಳ ಲಾಭ ನಷ್ಟ (ಲಕ್ಷ ರೂ.ಗಳಲ್ಲಿ) |
|---|---|---|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ |
| ೧೯೮೭-೮೮ | ೫೫೧ | ೫೧೧ | ೦.೭೭ | ೧೭೫೮೬೬ | ೩.೧೬ | ೩೪೪ | ೦.೧೩ | ೫೦೩ | ೧೩೨.೧೨ | ೮ | ೦.೪೪ | – | ೬೩೬೬೨ | ೩೯೯೫ | ೭.೬೪ |
| ೧೯೮೮-೮೯ | ೬೬೭ | ೬೨೪ | ೧.೦೩ | ೧೯೨೧೯೭ | ೩.೧೪ | ೩೦೮ | ೦.೧೪ | ೬೦೯ | ೧೬೦.೭೭ | ೧೫ | ೨.೦೪ | – | ೭೮೫೮೧ | ೪೭೮೯ | ೧೪.೭೪ |
| ೧೯೮೯-೯೦ | ೭೨೪ | ೬೯೬ | ೧.೧೫ | ೨೧೯೫೯ | ೩.೫೩ | ೩೦೫ | ೦.೧೬ | ೬೬೯ | ೧೬೫.೨೧ | ೨೫ | ೨.೬೬ | – | ೧೦೧೯೮೧ | ೫೨೫೦ | ೩.೬೪ |
| ೧೯೯೦-೯೧ | ೭೮೧ | ೭೬೦ | ೧.೧೭ | ೨೯೦೮೦ | ೩.೪೮ | ೨೫೫ | ೦.೧೯ | ೭೩೨ | ೧೬೧.೯೩ | ೨೮ | ೨.೯೧ | – | ೯೮೭೯೯ | ೪೪೨೭ | ೯.೫೫ |
| ೧೯೯೧-೯೨ | ೮೨೦ | ೮೦೭ | ೧.೬೫ | ೨೦೬೩೨೪ | ೪.೪೫ | ೨೫೬ | ೦.೨೧ | ೭೮೬ | ೧೮೨.೩೪ | ೨೧ | ೨.೧೩ | – | ೧೦೫೯೨೦ | ೩೭೨೬ | ೧೧.೪೩ |
| ೧೯೯೨-೯೩ | ೮೬೧ | ೮೫೧ | ೧.೭೧ | ೨೫೯೫೦೧ | ೫.೭೨ | ೨೫೫ | ೦.೧೯ | ೮೨೭ | ೨೮೨.೮೧ | ೧೪ | ೧.೬೫ | – | ೧೧೩೬೬೨ | ೪೭೨೬ | ೩.೮ |
| ೧೯೯೩-೯೪ | ೯೩೨ | ೯೧೫ | ೧.೮ | ೨೬೦೫೦೬ | ೫೫೪ | ೨೫೫ | ೦.೨೧ | ೯೦೦ | ೨೮೫.೨ | ೧೫ | ೨.೨೯ | – | ೧೧೮೨೩೫ | ೩೦೬೮ | –೧೬೫.೮೨ |
| ೧೯೯೪-೯೫ | ೯೬೮ | ೯೪೩ | ೧.೮೮ | ೨೬೪೩೨೪ | ೫೫೮ | ೨೫೦ | ೦.೨೨ | ೯೨೦ | ೩೦೮.೦೩ | ೨೩ | ೩.೧೬ | ೧೭೨೨೦ | ೧೧೨೭೩೪ | ೨೭೧೮ | ೧೫೨.೩ |
| ೧೯೯೫-೯೬ | ೧೦೫೯ | ೧೦೧೩ | ೧.೯೬ | ೩೧೬೮೧೯ | ೬೬೬ | ೩೧೨ | ೦.೧೯ | ೯೮೭ | ೩೯೪.೦೯ | ೨೬ | ೫೫೧ | ೩೯೬೩೬ | ೧೨೬೨೯೬ | ೪೯೨೦ | ೬೭೪೧ |
| ೧೯೯೬-೯೭ | ೧೧೫೦ | ೧೧೦೫ | ೨.೧ | ೩೬೫೧೫೦ | ೭.೫೬ | ೩೩೦ | ೦.೨ | ೧೦೭೬ | ೩೫೩.೪೩ | ೨೯ | ೬.೨೪ | ೫೪೨೬೭ | ೧೨೬೫೫೩ | ೬೭೯೫ | ೧೧೭೪೧ |
| ೧೯೯೭-೯೮ | ೧೨೨೦ | ೧೧೬೮ | ೨.೧೬ | ೩೬೫೬೧೭ | ೭.೮೮ | ೩೧೩ | ೦.೨೪ | ೧೧೪೨ | ೪೯೩.೩೬ | ೨೬ | ೫.೧೬ | ೬೮೭೧೦ | ೧೧೭೭೩೭ | ೫೫೮೬ | ೧೫೫೮.೧೩ |
| ೧೯೯೮-೯೯ | ೧೨೬೧ | ೧೧೯೯ | ೨.೨೨ | ೩೯೪೯೯೮ | ೮.೨೫ | ೩೨೯ | ೦.೨೫ | ೧೧೨೫ | ೬೧೦.೭೩ | ೨೪ | ೪.೨೨ | ೭೬೬೭೮ | ೧೨೧೪೨೧ | ೯೬೯೮ | ೧೧೪.೮೭ |
| ೧೯೯೯-೨೦೦೦ | ೧೨೭೦ | ೧೧೯೯ | ೨.೨೨ | ೪೬೩೧೦೩ | ೮.೨೫ | ೩೮೬ | ೦.೨೪ | ೧೧೭೧ | ೬೦೦.೯ | ೨೮ | ೭೬ | ೮೦೪೨೯ | ೧೨೪೪೯೮ | ೧೪೯೫೬ | ೨೧.೯೬ |
| ೨೦೦೦-೨೦೦೧ | ೧೩೨೨ | ೧೨೪೬ | ೨.೫೬ | ೪೯೭೧೨೬ | ೮.೧೫ | ೩೯೯ | ೦.೨೩ | ೧೨೨೨ | ೬೮೧.೯೨ | ೧೯ | ೧೦.೮೩ | ೮೩೫೦೮ | ೧೪೩೩೨ | ೧೦೦೭ | ೫೪.೭೬ |
| ೨೦೦೧-೨೦೦೨ | ೧೩೭೯ | ೧೩೦೩ | ೨.೬೧ | ೫೫೮೪೨೨ | ೭೯ | ೪೧೩ | ೦.೨೪ | ೧೨೭೭ | ೭೫೦.೨೮ | ೨೬ | ೫೯೧ | ೯೦೦೮೭ | ೧೫೦೬೧೬ | ೧೫೪೫೫ | ೪೫೩.೨೨ |
| ೨೦೦೨-೨೦೦೩ | ೧೫೩೧ | ೧೫೬೦ | ೨.೬೭ | ೫೫೭೮೮೨ | ೮.೩೮ | ೪೧೧ | ೦.೨೨ | ೧೫೪೫ | ೭೯೩.೬೭ | ೧೫ | ೧೨ | ೮೨೬೧೩ | ೧೫೯೫೨೭ | ೧೬೪೯೩ | ೧೮.೩೬ |
| ೨೦೦೩-೨೦೦೪ | ೧೯೪೪ | ೧೫೦೭ | ೨.೭೬ | ೫೫೩೩೫೦ | ೮೯೪ | ೪೦೧ | ೦.೨೩ | ೧೫೮೫ | ೭೮೫.೪೫ | ೨೨ | ೭೦೨ | ೯೦೦೪೬ | ೧೬೫೪೨೪ | ೨೬೬೮೩ | ೧೩೧.೯೮ |

ಆಧಾರ: ಕೋಲಾರ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ.

ಸರಬರಾಜು ಮಾಡುತ್ತಿದೆ. ವರ್ಷಕ್ಕೆ ೧೦ ಸಾವಿರದಿಂದ ೧೨ ಸಾವಿರ ಟನ್ ಮೈಲ್ಡ್ ಸ್ಟೀಲನ್ನು ಉತ್ಪಾದಿಸುತ್ತಿದೆ. ಈ ಉದ್ಯಮದಲ್ಲಿ ೯೨ ಜನ ಕಾರ್ಮಿಕರು, ಎಂಟು ಮಂದಿ ಆಡಳಿತ ವರ್ಗದವರೂ ಉದ್ಯೋಗದಲ್ಲಿದ್ದಾರೆ.

**ಐ.ಕ್ಯು.ಎಫ್.ಪುಡ್ಸ್ (ಪ್ರೈ).ಲಿ**

ಈ ಕೈಗಾರಿಕಾ ಘಟಕವು ೧೦ ಕೋಟಿ ರೂ.ಬಂಡವಾಳವನ್ನು ಹೂಡಿ ವೇಮಗಲ್ ಸಮೀಪದಲ್ಲಿ ಮಾವಿನ ಹಣ್ಣು, ಬಾಳೆಹಣ್ಣು, ಮುಂತಾದ ಹಣ್ಣುಗಳ ತಿರುಳಿನಿಂದ ಜಾಮ್ ಅನ್ನು ತಯಾರಿಸುತ್ತಿದೆ. ಅಲ್ಲದೆ ತರಕಾರಿಗಳನ್ನು ಪರಿಷ್ಕರಿಸಿ ಹೊರದೇಶಗಳಿಗೆ ರಫ್ತು ಮಾಡುತ್ತಿದೆ. ೨೦೦೨–೦೩ನೇ ಸಾಲಿನಲ್ಲಿ ೨,೨೦,೪೯೫ ಕೆ.ಜಿ.ಗಳಷ್ಟು ಸಂಸ್ಕರಿಸಿದ ಹಣ್ಣಿನ ಪದಾರ್ಥಗಳನ್ನು ತಯಾರಿಸಿತ್ತು. ವರ್ಷಕ್ಕೆ ೨.೫೦ ಲಕ್ಷ ಕೆ.ಜಿ.ಗಳಷ್ಟು ಉತ್ಪನ್ನಗಳನ್ನು ತಯಾರಿಸುವ ಗುರಿಯನ್ನು ಈ ಉದ್ಯಮವು ಹೊಂದಿದೆ. ಈ ಉದ್ಯಮವು ೧೦೪ ಜನರಿಗೆ ಉದ್ಯೋಗವನ್ನು ಕಲ್ಪಿಸಿದ್ದು, ಅತ್ಯಾಧುನಿಕ ಯಂತ್ರಗಳೊಂದಿಗೆ ಉತ್ಪಾದನೆಯಲ್ಲಿ ತೊಡಗಿದೆ.

**ಕೋಲ್‌ಮನ್ ಇಂಡಿಯಾ (ಪ್ರೈ.) ಲಿ.**

ಕೋಲಾರದ ಹೊರವಲಯದಲ್ಲಿರುವ ನರಸಾಪುರ ಸಮೀಪದಲ್ಲಿ ಸ್ಥಾಪಿಸಲ್ಪಟ್ಟಿರುವ ಈ ಉದ್ಯಮವು ಐದು ಕೋಟಿ ರೂ. ಬಂಡವಾಳದೊಂದಿಗೆ ಸಂರಕ್ಷಿಸಿದ ತರಕಾರಿ ಮತ್ತು ಲವಣ ಲೇಪಿಸಲ್ಪಟ್ಟ ತರಕಾರಿಗಳನ್ನು ತಯಾರಿಸಿ ಡಬ್ಬಗಳಲ್ಲಿ ತುಂಬಿ ಜರ್ಮನಿ, ಹಾಲೆಂಡ್, ಇಂಗ್ಲೆಂಡ್, ಅಮೆರಿಕ, ಆಸ್ಟ್ರೇಲಿಯ, ಮುಂತಾದ ದೇಶಗಳಿಗೆ ರಫ್ತು ಮಾಡುತ್ತಿದ್ದು, ವರ್ಷಕ್ಕೆ ೪೫ ಲಕ್ಷ ಕೆ.ಜಿ.ಗಳಷ್ಟು ತರಕಾರಿಗಳನ್ನು ಸಂಸ್ಕರಣೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಐದು ಕೋಟಿ ರೂ ವಾರ್ಷಿಕ ವ್ಯವಹಾರದ ಗುರಿಯನ್ನು ಹೊಂದಿರುವ ಈ ಉದ್ಯಮದಲ್ಲಿ ೧೫೦ ಜನರು ಉದ್ಯೋಗಿಗಳಿದ್ದಾರೆ.

**ಡೆಕ್ಕನ್ ಹೈಡ್ರಾಲಿಕ್ಸ್ (ಪ್ರೈ). ಲಿ.**

ಬಂಗಾರಪೇಟೆಯ ಕೈಗಾರಿಕಾ ಕ್ಷೇತ್ರದಲ್ಲಿ ಎರಡು ಎಕರೆಗಳಷ್ಟು ವಿಸ್ತಾರವಿರುವ ಮೂರು ದೊಡ್ಡ ಪ್ಲಾಟುಗಳಲ್ಲಿ ಈ ಉದ್ಯಮ ಅಭಿವೃದ್ಧಿಯಾಗುತ್ತಿದೆ. ೧೯೯೨ ರಲ್ಲಿ ೨೮ ಲಕ್ಷ ರೂ.ಗಳ ಬಂಡವಾಳದೊಂದಿಗೆ ರೈತ ಕುಟುಂಬದ ವಿದ್ಯಾವಂತ ಸಹೋದರರು, ಇದನ್ನು ಸ್ಥಾಪಿಸಿದ್ದಾರೆ. ಈ ಉದ್ಯಮ ವರ್ಷಕ್ಕೆ ನಾಲ್ಕರಿಂದ ಐದು ಕೋಟಿ ರೂ.ಗಳ ಇಂಜನಿಯರಿಂಗ್ ಕೈಗಾರಿಕೆಗಳಿಗೆ ಬೇಕಾಗುವ ಉತ್ತಮ ತಂತ್ರಜ್ಞಾನದಿಂದ ಕೂಡಿದ ಬಿಡಿ ಭಾಗಗಳನ್ನು ತಯಾರಿಸುತ್ತಿದೆ. ೨೦೦೩ರ ಮಾರ್ಚ್ ಅಂತ್ಯಕ್ಕೆ ಹೆಚ್ಚಿಸಿದ ಬಂಡವಾಳ ಎರಡು ಕೋಟಿ ರೂ.ಗಳಾಗುತ್ತದೆ. ಈ ಉದ್ಯಮವು ಬುಲ್‌ಡೋಸರ್‌ಗಳಿಗೆ ಅಳವಡಿಸುವ ಹೈಡ್ರಾಲಿಕ್ ಸಿಲಿಂಡರ್ಸ್, ಹೈಡ್ರಾಲಿಕ್ ಟ್ಯಾಂಕ್ಸ್, ಸ್ವಯಂ ಚಾಲಿತ ಮಣ್ಣು ತೆಗೆಯುವ ಯಂತ್ರಗಳಲ್ಲಿ ಸೇರಿಸುವ ಹೈಡ್ರಾಲಿಕ್ಸ್, ಹೈಡ್ರಾಲಿಕ್ ಪಂಪ್ಸ್, ಎರಡು ಟನ್ನುಗಳಿಂದ ೨೦ ಟನ್ನು ಭಾರ ಎತ್ತುವ ಜಾಕ್‌ಗಳೇ ಮುಂತಾದವುಗಳನ್ನು ತಯಾರಿಸುತ್ತದೆ. ಈ ಉದ್ಯಮವು ಉತ್ತಮ ಗುಣಮಟ್ಟವನ್ನು ಸಾಧಿಸಿ, ISO ೯೦೦೧, ೯೦೦೨ ರ ಶಿಫಾರಸ್ಸನ್ನು ಪಡೆದಿದೆ. ಈ ಉದ್ಯಮವು ಭಾರತ್ ಅರ್ತ್ ಮೂವರ್ಸ್, ಮೋಟಾರು ಯಂತ್ರಗಳ ಕಾರ್ಖಾನೆ ಹಾಗೂ ರಕ್ಷಣಾ ಕೈಗಾರಿಕೆಗಳಿಗೆ ಬಿಡಿ ಭಾಗಗಳನ್ನು ತಯಾರಿಸಿ ಒದಗಿಸುತ್ತಿದೆ.

**ಕಂಫರ್ಟ್ ಲೆದರ್ಸ್ ಇಂಡಿಯಾ**

ಈ ಉದ್ಯಮವು ೪೬೦ ಲಕ್ಷ ರೂ. ಬಂಡವಾಳದೊಂದಿಗೆ ಕೋಲಾರದಲ್ಲಿ ಚರ್ಮದ ಉಡುಪುಗಳ ತಯಾರಿಕೆಯಲ್ಲಿ ತೊಡಗಿದ್ದು ೩೭೦ ಜನರಿಗೆ ಉದ್ಯೋಗವನ್ನು ಒದಗಿಸಿದೆ.

**ಓವೋ ಬೆಲ್ ಫುಡ್ಸ್**

ಈ ಕಂಪನಿಯು, ಮಾಲೂರಿನ ಕೈಗಾರಿಕಾ ಕ್ಷೇತ್ರದಲ್ಲಿ ಐದು ಎಕರೆ ಪ್ರದೇಶದಲ್ಲಿರುವ ತನ್ನ ಕಾರ್ಖಾನೆಯಲ್ಲಿ ಕೋಳಿ ಮೊಟ್ಟೆ ಪುಡಿಯನ್ನು ತಯಾರಿಸಿ ಈ ವಸ್ತುವನ್ನು ಜರ್ಮನಿ, ಜಪಾನ್, ಇಂಡೋನೇಷಿಯ, ಪೋಲೆಂಡ್ ಮುಂತಾದ ದೇಶಗಳಿಗೆ

ರಫ್ತು ಮಾಡುತ್ತಿದೆ. ವರ್ಷಕ್ಕೆ ೧೦ ಕೋಟಿ ರೂ.ಗಳ ಮೌಲ್ಯದ ಕೋಳಿ ಮೊಟ್ಟೆಯ ಪುಡಿಯನ್ನು ಉತ್ಪಾದಿಸುವ ಈ ಉದ್ಯಮದಲ್ಲಿ ೭೫ ಕಾರ್ಮಿಕರು, ೧೫ ಅಧಿಕಾರಿಗಳೂ ಉದ್ಯೋಗದಲ್ಲಿದ್ದಾರೆ.

**ಶ್ಯಾಮ್ ಅಹುಜಾ (ಲಿ)**

ಈ ಉದ್ಯಮವು ಮಾಲೂರಿನಲ್ಲಿ ನೆಲೆಗೊಂಡಿದ್ದು, ಆಧುನಿಕ ರೇಷ್ಮೆ ಬಟ್ಟೆಯನ್ನು ತಯಾರಿಸುವ ಯಂತ್ರಗಳನ್ನು ಅಳವಡಿಸಿ, ರೇಷ್ಮೆ ಉತ್ಪನ್ನಗಳನ್ನು ತಯಾರಿಸಿ ವಿದೇಶಗಳಿಗೆ ರಫ್ತು ಮಾಡುತ್ತಿದೆ.

**ಸ್ಪೀಡೋಗ್ರಾಫಿಕ್ಸ್ (ಪ್ರೈ.) ಲಿ. ಚಿಕ್ಕಬಳ್ಳಾಪುರ**

ಈ ಉದ್ಯಮವು ೧೯೯೫ ರಲ್ಲಿ ೯೫ ಲಕ್ಷ ರೂ.ಗಳ ಬಂಡವಾಳದೊಂದಿಗೆ ಸ್ಥಾಪನೆಯಾಯಿತು. ಮುದ್ರಣ ಯಂತ್ರಗಳೂ ಸೇರಿದಂತೆ ವಿವಿಧ ಯಂತ್ರೋಪಕರಣಗಳನ್ನು ಉತ್ಪಾದಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಈ ಉದ್ಯಮವು ಬೇಡಿಕೆಯ ಯಂತ್ರಗಳ ಬಿಡಿ ಭಾಗಗಳನ್ನು ತಯಾರಿಸುತ್ತಿದೆ. ಇದರ ವಾರ್ಷಿಕ ಉತ್ಪಾದನೆ ೩೫ ಲಕ್ಷ ರೂ.ಗಳೆಂದು ಕಂಪನಿಯ ಆಡಳಿತ ವರದಿ ತಿಳಿಸುತ್ತದೆ.

**ಶ್ರೇಯಸ್** ಎಂಬ ಉದ್ಯಮವು ಡೈಸ್‌ಗಳನ್ನು ತಯರಿಸುತ್ತಿದೆ. ೩೦ ಮಂದಿ ಉದ್ಯೋಗಿಗಳಿರುವ ಈ ಉದ್ಯಮದಲ್ಲಿ ಸ್ತ್ರೀ ಕೆಲಸಗಾರರೇ ಹೆಚ್ಚು. ಅನೇಕರು ದಿನಕೂಲಿಯಮೇಲೆ ಕೆಲಸ ಮಾಡುತ್ತಿದ್ದಾರೆ.

**ಕಪಾಲಿ ರವಾ ಕೈಗಾರಿಕೆ**

ಬನ್ಸಿ ರವೆ ತಯಾರಿಸುವ ಈ ಉದ್ಯಮವು ೧೯೯೫ ರಲ್ಲಿ ಸ್ಥಾಪಿತವಾಯಿತು. ೧೫ ಲಕ್ಷ ರೂ. ಬಂಡವಾಳದೊಂದಿಗೆ ಆರಂಭವಾದ ಈ ಉದ್ಯಮವು ರವೆ ಮಾಡುವ ಆಧುನಿಕ ಯಂತ್ರವನ್ನು ಜೋಡಿಸಿದೆ. ರಾಜಾಸ್ತಾನ್ ಮತ್ತು ಮಧ್ಯಪ್ರದೇಶಗಳಿಂದ ಗೋಧಿಯನ್ನು ಖರೀದಿಸಿಕೊಂಡು ಶ್ರೇಷ್ಠವಾದ 'ಬನ್ಸಿ' ರವೆಯನ್ನು ತಯಾರಿಸುತ್ತಿದೆ. ಬನ್ಸಿ ರವೆಯನ್ನು ಚಿಲ್ಲರೆಯಾಗಿ ಅಂದರೆ ಒಂದರಿಂದ ಹತ್ತು ಕೆ.ಜಿ. ತನಕ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಮಾರಾಟ ಮಾಡುತ್ತಿದೆ. ಸಗಟು ವ್ಯಾಪಾರವನ್ನು ೫೦ ಕೆ.ಜಿ. ಚೀಲಗಳಲ್ಲಿ ತುಂಬಿ ಮಾರಾಟ ಮಾಡುತ್ತಿದೆ. ವರ್ಷಕ್ಕೆ ರೂ. ೧೦ ರಿಂದ ೧೨ ಲಕ್ಷ ರೂ. ವ್ಯವಹಾರ ಮಾಡುವ ಈ ಉದ್ಯಮದಲ್ಲಿ ೧೦ ಜನರಿಗೆ ಉದ್ಯೋಗ ಲಭ್ಯವಾಗಿದೆ.

**ಕರ್ನಾಟಕ ಕ್ರಿಸ್ಟಲ್ (ಪ್ರೈ.) ಲಿ. ಚಿಕ್ಕಬಳ್ಳಾಪುರ**

ಗಾಜುಗಳನ್ನು ತಯಾರಿಸುವ ಕಾರ್ಖಾನೆ ಇದಾಗಿದೆ. ೧.೩೨ ಲಕ್ಷ ರೂ. ಬಂಡವಾಳದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಈ ಕಾರ್ಖಾನೆಯು ೨೧ ಜನರಿಗೆ ಉದ್ಯೋಗವನ್ನು ನೀಡಿದೆ.

**ಸ್ಪನ್ ಸಿಲ್ಕ್ ಎಕ್ಸ್‌ಪೋರ್ಟರ್ಸ್ (ಲಿ) ಗೌರಿಬಿದನೂರು**

ಈ ಉದ್ಯಮವು ೧೧೨ ಲಕ್ಷ ರೂ.ಗಳ ಬಂಡವಾಳದೊಂದಿಗೆ ಸ್ಥಾಪಿತವಾಗಿ ೧೮ ಜನರಿಗೆ ಉದ್ಯೋಗವನ್ನು ಕಲ್ಪಿಸಿದೆ.

**ಪ್ರೀಕಾಟ್ ಮಿಲ್ಸ್, ಗೌರಿಬಿದನೂರು**

ಪ್ರೀಕಾಟ್ ಮಿಲ್ಸ್ ಚಿಕ್ಕ ಕುರುಗೋಡು, ಗೌರಿಬಿದನೂರು, ತಾ॥ ಈ ಉದ್ಯಮವು ರೂ. ೫೦೬ಲಕ್ಷ ಬಂಡವಾಳದೊಂದಿಗೆ ಸೆಪ್ಟೆಂಬರ್ ೧೯೯೯ರಲ್ಲಿ ಸ್ಥಾಪನೆಗೊಂಡಿತು. ಡೈ ಮಾಡಿದ ಪಾಲಿಸ್ಟಾರ್ ನೂಲನ್ನು ತಯಾರಿಸುತ್ತಿದ್ದು, ಪ್ರತಿದಿನ ೩.೫ ಟನ್, ವಾರ್ಷಿಕ ೧೨೪೬ ಟನ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ಈ ಉದ್ದಿಮೆಯಲ್ಲಿ ೫೦ ಮಂದಿ ಉದ್ಯೋಗದಲ್ಲಿದ್ದಾರೆ. ಇಲ್ಲಿ ತಯಾರಾಗುವ ನೂಲಿನ ಮಾರುಕಟ್ಟೆ ಬೆಲೆ ಒಂದು ಕೆ. ಜಿ.ಗೆ ರೂ. ೧೮೦ ಆಗಿದೆ. ಈ ಉದ್ದಿಮೆಯು ೧೨ ರಿಂದ ೧೪ ಕೋಟಿ ವಾರ್ಷಿಕ ವಹಿವಾಟು ನಡೆಸುತ್ತಿದ್ದು, ಇಲ್ಲಿ ಉತ್ಪಾದಿಸುವ ನೂಲನ್ನು ಮಾರಾಟ ಮಾಡಲು ತನ್ನದೇ ಆದ ಸೇಲ್ಸ್ ಡಿಪೋಗಳನ್ನು

ಬೆಂಗಳೂರು, ತಿರಪೂರು ಹಾಗೂ ಮುಂಬೈಯಲ್ಲಿ ತೆರೆದು ಸ್ಥಳೀಯವಾಗಿ ಮಾರಾಟ ಮಾಡುತ್ತಿದೆ. ಕಾರ್ಮಿಕರ ಕಲ್ಯಾಣಕ್ಕಾಗಿ ಮನರಂಜನಾ ಕ್ಲಬ್‌ನ ಜೊತೆಗೆ, ಟಿವಿ, ನ್ಯೂಸ್‌ಪೇಪರ್ಸ್, ನಿಯತಕಾಲಿಕೆಗಳು (Magzines) ಹಾಗೂ ಒಳಾಂಗಣ ಆಟ, ವೈದ್ಯಕೀಯ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಪಟ್ಟಿಯನ್ನು ಕೋಷ್ಟಕ ೫.೮ರಲ್ಲಿ ನೀಡಿದೆ.

**ಕೋಷ್ಟಕ ೫.೮: ಜಿಲ್ಲೆಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರ**

| ಕ್ರ.ಸಂ. | ಕೈಗಾರಿಕೆಗಳ ಹೆಸರು ಮತ್ತು ವಿಳಾಸ | ಸ್ಥಾಪನೆಗೊಂಡ ವರ್ಷ | ಉತ್ಪನ್ನ | ತೊಡಗಿಸಿದ ಬಂಡವಾಳ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳ ಸಂಖ್ಯೆ |
|---|---|---|---|---|---|
| ೧ | ಭಾರತ್ ಅರ್ತ್ ಮೂವರ್ಸ್ ಲಿ. ಕೆ.ಜಿ.ಎಫ್ ಬಂಗಾರುಪೇಟೆ ತಾ॥ | ೧೯೬೪ | ಮಣ್ಣನ್ನು ಸಾಗಿಸುವ ಉಪಕರಣಗಳು | ೭೯೫ | ೧೪೦೦೦ |
| ೨ | ಭಾರತ್ ಗೋಲ್ಡ್ ಮೈನ್ಸ್ ಲಿ. ಕೆ.ಜಿ.ಎಫ್ ಬಂಗಾರುಪೇಟೆ ತಾ॥ | ೧೮೮೦ | ಚಿನ್ನ | ೪೫೯೪.೪೨ | ೧೨೦೦೦ |
| ೩ | ಆರ್ಕೊ ಸ್ಪಿನ್ನಿಂಗ್ ಮಿಲ್ಸ್ ಲಿ. ಕ್ಯಾಲನೂರು, ಕೋಲಾರ ತಾ. | ೧೯೮೫ | ಸ್ಪನ್ ಸಿಲ್ಕ್ ಯಾರ್ನ್ | ೧೫೨ | ೫೦ |
| ೪ | ಸಿಎಡಿ (ಕ್ಯಾಡ್) ಮೆಷಿನ್ಸ್ ಲಿ., ಚಿಕ್ಕಬಳ್ಳಾಪುರ | ೧೯೯೦ | ಸಿ.ಎಸ್.ಐ. ಟೂಲ್ಸ್, ಹಲ್ಲರ್ಸ್, ಗ್ರೈಂಡರ್ಸ್ | ೧೪೮೧೪ | ೫೫ |
| ೫ | ಕಾರ್ಬನ್ ಅಂಡ್ ರೋಟರಿ ಕಾಂಪೋನೆಂಟ್ಸ್ (ಪ್ರೈ.) ಲಿ. ಚಿಕ್ಕಬಳ್ಳಾಪುರ | ೧೯೯೧ | ಕಾರ್ಬನ್ ಬ್ಲಾಕ್ಸ್ | ೮೮.೨೫ | ೧೦ |
| ೬ | ಕರ್ನಾಟಕ ಕ್ರಿಸ್ಟಲ್ (ಪ್ರೈ).ಲಿ. ಚಿಕ್ಕಬಳ್ಳಾಪುರ | ೧೯೯೧ | ಗ್ಲಾಸಸ್ | ೧೩.೨ | ೩೧ |
| ೭ | ಮೈಕ್ರೊಟೆಕ್ ಡೈಸ್ ಪ್ರೈ.ಲಿ., ಚಿಕ್ಕಬಳ್ಳಾಪುರ | ೧೯೯೮ | ಡೈಮಂಡ್ ಡೈಸ್ | ೧೨೦.೧ | – |
| ೮ | ನ್ಯಾಚುರಲ್ ಸ್ಟೋನ್ಸ್ ಅಂಡ್ ಟೈಲ್ಸ್ ಲಿ., ಟಮಕ, ಕೋಲಾರ ತಾ. | ೧೯೯೨ | ಗ್ರಾನೈಟ್ಸ್ ಮತ್ತು ಟೈಲ್ಸ್ | ೧೦೦ | ೧೪ |
| ೯ | ನ್ಯೂಕರ್ ವೆಲ್ಡ್ಸ್ ಪ್ರೈ.ಲಿ., ಚಿಕ್ಕಬಳ್ಳಾಪುರ | – | ವೆಲ್ಡಿಂಗ್ ಎಲೆಕ್ಟ್ರೋಡ್ಸ್ | ೯೮ | – |
| ೧೦ | ಟುಲ್‌ಶನ್ ಗ್ರಾನೈಟ್ಸ್ (ಪ್ರೈ).ಲಿ. ಮಾಲೂರು | – | ಗ್ರಾನೈಟ್ಸ್ | ೨೧೨.೮೪ | ೧೫ |
| ೧೧ | ಸಿರಗುಪ್ಪ ಶುಗರ್ಸ್ ಲಿ. ಗೌರಿಬಿದನೂರು | ೧೯೬೬ | ಸಕ್ಕರೆ | ೨೧೨.೧೨ | ೩೭ |
| ೧೨ | ಸ್ಪನ್‌ಸಿಲ್ಕ್ ಇಂಡಿಯಾ ಲಿ. ಗೌರಿಬಿದನೂರು | ೧೯೮೩ | ಸ್ಪೋನ್ ಸಿಲ್ಕ್ ಯಾರ್ನ್ | ೫೫೨.೨೩ | ೫೦ |
| ೧೩ | ಸ್ವಾನ್‌ಸಿಲ್ಕ್ ಎಕ್ಸ್‌ಪೋರ್ಟರ್ಸ್ ಲಿ. ಚಿಕ್ಕಬಳ್ಳಾಪುರ | ೧೯೯೯ | ಸ್ಪನ್ ಸಿಲ್ಕ್ | ೧೧೨ | ೧೮ |
| ೧೪ | ಉಷಾ ಟೆಲಿಹೊಯಿಸ್ಟ್ ಲಿ. ಕೋಲಾರ ತಾ. | ೧೯೮೨ | ಟ್ರ್ಯಾಕಿಂಗ್ ಅಸೆಂಬ್ಲಿ | ೩೦ | ೨೨೨ |
| ೧೫ | ಶ್ಯಾಮ್ ಅಹುಜಾ ಲಿ. ಮಾಲೂರು | – | ಸಿಲ್ಕ್, ಕಾಟನ್, ಉಲ್ಲನ್ ಕ್ಲಾತ್ಸ್ | ೨೪೯೯.೯೬ | ೨೦ |
| ೧೬ | ಬಾಕೈಲ್ ಕೆಮಿ ಇಂಡಿಯಾ (ಪ್ರೈ) ಲಿ. ಕೋಲಾರ ತಾ. | – | ಕೆಮಿಕಲ್ಸ್ | – | – |

ಮುಂದುವರಿದಿದೆ.............

| | | | | | |
|---|---|---|---|---|---|
| ೧೭ | ಬಸವೇಶ್ವರ ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಷನ್ (ಪ್ರೈ) ಲಿ. ಬಂಗಾರಪೇಟೆ | – | ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಷನ್ | ೯೨೯೭ | ೮೦ |
| ೧೮ | ಐಕ್ಯೂಎಫ್ ಫುಡ್ಸ್ (ಪ್ರೈ).ಲಿ. ವೇಮಗಲ್, ಕೋಲಾರ ತಾ॥ | – | ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ | ೮೫೦ | ೫೦ |
| ೧೯ | ಭುವಲ್ಕಾ ಸ್ಟೀಲ್ ಇಂಡಸ್ಟ್ರೀಸ್ ಲಿ. ಟಮಕಾ, ಕೋಲಾರ | – | ಸ್ಟೀಲ್ಸ್ | ೨೪೩೬೭ | ೨೯ |
| ೨೦ | ಕೋಲೆಮನ್ ಇಂಡಿಯಾ (ಪ್ರೈ.) ಲಿ. ಕೋಲಾರ ತಾ. | – | ಪಿಕಲ್ಡ್ ವೆಜಿಟೇಬಲ್ಸ್ | ೨೫ | ೯೭ |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ.

## ಸಣ್ಣ ಪ್ರಮಾಣದ ಕೈಗಾರಿಕೆಗಳು

ಕೋಲಾರ ಜಿಲ್ಲೆಯು ಕೈಗಾರಿಕೆಗಳಲ್ಲಿ ಹಿಂದುಳಿದ ಜಿಲ್ಲೆಯಾಗಿದ್ದರೂ, ೨೦೦೩–೦೪ರವರೆಗೆ ೧೧,೭೭೪ ಸಣ್ಣ ಕೈಗಾರಿಕೆಗಳು ಜಿಲ್ಲೆಯಲ್ಲಿ ನೋಂದಣಿಗೊಂಡಿದ್ದವು. ಇವುಗಳಲ್ಲಿ ರೂ. ೩೪,೨೬೪.೧೦ ಲಕ್ಷಗಳನ್ನು ತೊಡಗಿಸಲಾಗಿದ್ದು, ೭೧,೬೮೧ ಮಂದಿಗೆ ಉದ್ಯೋಗ ದೊರಕಿತ್ತು. ಕೋಷ್ಟಕ ೫.೯ ರಲ್ಲಿ ನೋಡಿ.

**ಕೋಷ್ಟಕ ೫.೯: ಜಿಲ್ಲೆಯಲ್ಲಿ ೨೦೦೩–೦೪ರಲ್ಲಿದ್ದ ಸಣ್ಣ ಕೈಗಾರಿಕೆಗಳ ವಿವರ**

| | | ೩೧-೩-೨೦೦೩ಕ್ಕೆ (ಕ್ರೋಡಿಕೃತ) | | | ೩೧-೩-೨೦೦೪ರ (ಸಾಲಿನಲ್ಲಿದ್ದಂತೆ) | | | ೩೧-೩-೨೦೦೪ಕ್ಕೆ (ಕ್ರೋಡಿಕೃತ) | | |
|---|---|---|---|---|---|---|---|---|---|---|
| ಕ್ರ ಸಂ | ತಾಲ್ಲೂಕು | ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ | ಸ್ಥಿರ ಬಂಡವಾಳ ಲಕ್ಷ ರೂ.ಗಳಲ್ಲಿ | ಉದ್ಯೋಗಿ ಗಳ ಸಂಖ್ಯೆ | ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ | ಸ್ಥಿರ ಬಂಡವಾಳ ಲಕ್ಷ ರೂ. ಗಳಲ್ಲಿ | ಉದ್ಯೋಗಿ ಗಳ ಸಂಖ್ಯೆ | ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ | ಸ್ಥಿರ ಬಂಡವಾಳ ಲಕ್ಷ ರೂ. ಗಳಲ್ಲಿ | ಉದ್ಯೋಗಿ ಗಳ ಸಂಖ್ಯೆ |
| ೧ | ಚಿಕ್ಕಬಳ್ಳಾಪುರ | ೪೯೩ | ೧೩೭೦೫೪ | ೩೦೦೮ | ೪೦ | ೧೦೭೪೯ | ೧೪೯ | ೫೩೩ | ೧೪೭೮.೦೩ | ೩೧೬೭ |
| ೨ | ಚಿಂತಾಮಣಿ | ೧೫೨ | ೩೪೨೪.೯೭ | ೭೫೧೫ | ೪೭ | ೧೮೮.೧ | ೩೧೫ | ೧೨೯ | ೩೬೧೩.೦೬ | ೭೮೩೦ |
| ೩ | ಬಾಗೇಪಲ್ಲಿ | ೧೩೧೦ | ೩೬೪೧.೮ | ೭೯೧ | ೧೧ | ೪೫೯೭ | ೪೯ | ೧೩೩೧ | ೩೬೮೭೭೭ | ೮೫೦ |
| ೪ | ಗುಡಿಬಂಡೆ | ೧೫೧೨ | ೩೯೫೩.೧೬ | ೮೬೭೪ | ೪ | ೪.೬ | ೧೫ | ೧೫೩೬ | ೩೯೫೭೭೬ | ೮೬೯ |
| ೫ | ಕೋಲಾರ | ೯೯೯ | ೨೭೭೭.೨೨ | ೬೮೯೪ | ೭೭ | ೪೮೯.೦೭ | ೪೧೦ | ೧೦೭೬ | ೩೧೮೬.೫೯ | ೬೫೦೪ |
| ೬ | ಮಾಲೂರು | ೫೪೯ | ೬೬೪.೪೨ | ೧೫೫೮ | ೬೦ | ೬೨೦.೮೬ | ೪೪೯ | ೫೯೯ | ೧೨೮೫.೨೮ | ೯೪೭ |
| ೭ | ಮುಳಬಾಗಿಲು | ೧೮೭೬ | ೫೨೪೬೭೨ | ೧೧೫೩೪ | ೩೧ | ೧೩೭೬ | ೧೬೮ | ೯೦೭ | ೫೩೮೪.೩೨ | ೧೧೭೦೨ |
| ೮ | ಶ್ರೀನಿವಾಸಪುರ | ೧೨೦೬ | ೩೩೫೨.೬೮ | ೭೩೫೭ | ೨೮ | ೬೩೦.೭೪ | ೧೧೮ | ೧೩೫೪ | ೩೯೮೩.೪೨ | ೭೪೭೫ |
| ೯ | ಬಂಗಾರಪೇಟೆ | ೭೨೨ | ೨೦೦೭೧೬ | ೪೪೮೪ | ೪೫ | ೨೭೦.೧೧ | ೨೦೬ | ೭೬೭ | ೨೨೭೭.೨೭ | ೪೬೧೦ |
| ೧೦ | ಗೌರಿಬಿದನೂರು | ೧೫೨ | ೩೨೦೨೫೬ | ೭೦೨೨ | ೩೨ | ೯೦.೭ | ೧೫೪ | ೧೧೪ | ೩೯೩೨೬ | ೭೬೧ |
| ೧೧ | ಶಿಡ್ಲಘಟ್ಟ | ೭೦೨ | ೯೫೧೫೬ | ೪೨೮೨ | ೪೬ | ೧೬೬೦೫ | ೨೫೪ | ೭೪೮ | ೨೧೧೭೬೧ | ೪೫೫೬ |
| | ಒಟ್ಟು | ೧೧೩೫೩ | ೩೧೫೯೨.೭೮ | ೬೫೩೪೪ | ೪೫೧ | ೨೬೭೧೯ | ೫೩೩೭ | ೧೧೭೭೪ | ೩೪೨೬೪.೧ | ೭೧೬೮೧ |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ.

ಕೋಲಾರ ಜಿಲ್ಲೆಯಲ್ಲಿ ೧೯೯೦–೯೧, ೧೯೯೫–೯೬, ೨೦೦೦–೦೧ ಹಾಗೂ ೨೦೦೩–೦೪ರಲ್ಲಿದ್ದ ಘಟಕವಾರು ಸಣ್ಣ ಕೈಗಾರಿಕೆಗಳು, ಅವುಗಳಲ್ಲಿ ತೊಡಗಿಸಿದ್ದ ಬಂಡವಾಳ ಹಾಗೂ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆಯನ್ನು ಕೋಷ್ಟಕ ೫.೧೦ರಲ್ಲಿ ನೀಡಲಾಗಿದೆ

**ಕೋಷ್ಟಕ ೫.೧೦: ಜಿಲ್ಲೆಯಲ್ಲಿರುವ ಘಟಕವಾರು ಸಣ್ಣ ಕೈಗಾರಿಕೆಗಳ ವಿವರ**

| ಕ್ರ. ಸಂ. | ಸಣ್ಣ ಕೈಗಾರಿಕಾ ಘಟಕಗಳು | ೧೯೯೦–೯೧ ಘಟಕಗಳ ಸಂಖ್ಯೆ | ೧೯೯೦–೯೧ ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | ೧೯೯೦–೯೧ ಉದ್ಯೋಗಿಗಳ ಸಂಖ್ಯೆ | ೧೯೯೫–೯೬ ಘಟಕಗಳ ಸಂಖ್ಯೆ | ೧೯೯೫–೯೬ ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | ೧೯೯೫–೯೬ ಉದ್ಯೋಗಿಗಳ ಸಂಖ್ಯೆ | ೨೦೦೦–೦೧ ಘಟಕಗಳ ಸಂಖ್ಯೆ | ೨೦೦೦–೦೧ ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | ೨೦೦೦–೦೧ ಉದ್ಯೋಗಿಗಳ ಸಂಖ್ಯೆ | ೨೦೦೩–೦೪ ಘಟಕಗಳ ಸಂಖ್ಯೆ | ೨೦೦೩–೦೪ ಸ್ಥಿರ ಬಂಡವಾಳ (ಲಕ್ಷ ರೂ.ಗಳಲ್ಲಿ) | ೨೦೦೩–೦೪ ಉದ್ಯೋಗಿಗಳ ಸಂಖ್ಯೆ |
|---|---|---|---|---|---|---|---|---|---|---|---|---|---|
| ೧ | ಆಹಾರ ಮತ್ತು ಪಾನೀಯ | ೭೩ | ೧೫೬೪೪೭ | ೩೩೩ | ೩೩ | ೧೭೨೯ | ೩೧೦ | ೫೪ | ೩೧೧೪೬ | ೫೯೦ | ೩೬ | ೨೫೨೪ | ೧೮೦ |
| ೨ | ವಸ್ತ್ರ ಮತ್ತು ಸಿದ್ಧ ಉಡುಪುಗಳು | ೧೪ | ೮೧೩ | ೭೫೮ | ೧೫ | ೨೫೧೪ | ೧೧೭ | ೧೫೪ | ೮೪೮೪೬ | ೬೯೦ | ೧೪ | ೮೯೫೬ | ೬೭೦ |
| ೩ | ಮರದ ಗೃಹೋಪಯೋಗಿ ಮತ್ತು ಪೀಠೋಪಕರಣಗಳು | ೨ | ೯೯೭ | ೯೨ | ೧೭ | ೫೫೨೯ | ೩೬೬ | ೧೭ | ೬೮೧೯ | ೬೫೫ | ೪೩ | ೨೭೬೭ | ೨೫ |
| ೪ | ಮುದ್ರಣ ಮತ್ತು ಲೇಖನ ಸಾಮಗ್ರಿಗಳು | – | – | – | – | – | – | ೮ | ೧೩೩೭ | ೪೦ | ೫ | ೩೧೭ | ೫ |
| ೫ | ಚರ್ಮ ಹದ ಮಾಡುವುದು ಮತ್ತು ಚರ್ಮೋದ್ಯಮ | – | – | – | – | – | – | ೬ | ೩೨೨೨ | ೪೮ | ೮ | ೫೦೭೨ | ೪೦ |
| ೬ | ರಬ್ಬರ್ ಮತ್ತು ಪ್ಲಾಸ್ಟಿಕ್ | – | – | – | – | – | – | ೫ | ೨೬೫೫ | ೨೫ | ೩ | ೧೯೦೨ | ೧೫ |
| ೭ | ರಾಸಾಯನಿಕ ವಸ್ತುಗಳು | ೧೨ | ೪೩೧ | ೬೬ | ೧೦ | ೧೩೬೮೨ | ೭೩ | – | – | – | ೪ | ೨೫೩೬ | ೨೦ |
| ೮ | ಗಾಜು ಮತ್ತು ಪಿಂಗಾಣಿ | ೨೦ | – | – | – | – | – | ೮ | ೪೨೯೭ | ೪೦ | ೩೧ | ೧೩೩೧೪ | ೧೫ |
| ೯ | ಲೋಹದ ಸಾಮಾನುಗಳು | ೫– | ೮೬೬೫ | ೯೩೫ | ೧೪ | ೧೮೩ | ೩೪ | ೫೨ | ೨೯೭೨೪ | ೩೬೦ | ೩೧ | ೧೩೩೧೪ | ೧೫ |
| ೧೦ | ಜನರಲ್ ಇಂಜನೀಯರಿಂಗ್ | – | ೧೦೭೫೫ | ೨೯ | ೫೪ | ೧೫೪೨೪ | ೫೦೦ | ೪ | ೨೧೪೮ | ೨೦ | ೨೨ | ೧೯೯೪೮ | ೧೧೦ |
| ೧೧ | ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ | – | – | – | – | – | – | ೧೦ | ೫೩೭ | ೫೦ | ೯ | ೫೭೦೬ | ೪೫ |
| ೧೨ | ಆಟೋಮೋಬೈಲ್ಸ್ | – | – | – | – | – | – | – | – | – | ೪ | ೨೫೩೬ | ೨೦ |
| ೧೩ | ಸಾರಿಗೆ ಸಲಕರಣೆ ಮತ್ತು ಬಿಡಿಭಾಗಗಳು | – | – | – | – | – | – | – | – | – | – | – | – |
| ೧೪ | ಫೆರೆಸ್ ಮತ್ತು ನಾನ್ ಫೆರೆಸ್ ಸರಕುಗಳ ಉತ್ಪಾದನೆ. | – | – | – | – | – | – | – | – | – | – | – | – |
| ೧೫ | ರಿಪೇರಿ ಮತ್ತು ಸೇವಾಕಾರ್ಯಗಳು | ೫೯ | ೨೧೦೪೨ | ೨೩ | ೯೯ | ೪೧೨೧ | ೨೯ | ೧೭೨ | ೯೧೦೪೩ | ೧೩೬೮ | ೫೯ | ೨೪೭೨೬ | ೧೫೫ |
| ೧೬ | ಇತರ ಸೇವಾಕಾರ್ಯಗಳು | – | – | – | – | – | – | ೪ | ೨೧೪೮ | ೨೦ | ೭೨ | ೪೫೬೬೩ | ೫೯೨ |
| | ಒಟ್ಟು | ೫೧೦ | ೬೮೭೪೬೨ | ೨೬೮ | ೪೨ | ೧೫೪೦೦೦ | ೨೯೯ | ೬೭೨ | ೩೨೫೪೬೪ | ೫೫೮ | ೪೫೧ | ೨೬೦೧೫೦ | ೩೫೭ |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ.

ಜಿಲ್ಲೆಯಲ್ಲಿ ೨೦೦೪ರ ಮಾರ್ಚ್ ಅಂತ್ಯಕ್ಕೆ ಇದ್ದ ತಾಲೂಕುವಾರು ಸಣ್ಣ ಕೈಗಾರಿಕೆಗಳು, ಅವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ಹಾಗೂ ಅವುಗಳು ಒದಗಿಸಿದ್ದ ಉದ್ಯೋಗಗಳ ವಿವರವನ್ನು ಕೋಷ್ಟಕ ೫.೧೧ರಲ್ಲಿ ನೀಡಿದೆ.

**ಕೋಷ್ಟಕ ೫.೧೧**

| ಘಟಕಗಳು | ಆಹಾರ ಮತ್ತು ಪಾನೀಯ | ವಸ್ತ್ರ ಮತ್ತು ಸಿದ್ಧ ಉಡುಪು | ಮರದ ಗೃಹೋಪ– ಯೋಗಿ ಮತ್ತು ಪೀಠೋಪ– ಕರಣಗಳು | ಮುದ್ರಣ ಮತ್ತು ಲೇಖನ ಸಾಮಗ್ರಿಗಳು | ಚರ್ಮೋ– ದ್ಯೋಗಗಳು | ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪಾದನೆ | ರಾಸಾಯನಿಕ ವಸ್ತುಗಳು | ಗಾಜು ಮತ್ತು ಪಿಂಗಾಣಿ | ಜನರಲ್ ಇಂಜಿನಿಯರಿಂಗ್ ಮತ್ತು ಇತರ ಸೇವಾ ಕಾರ್ಯಗಳು | ಇತರ ಕೈಗಾರಿಕೆ ಗಳು |
|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| **ಚಿಕ್ಕಬಳ್ಳಾಪುರ** | | | | | | | | | | |
| ಘಟಕಗಳ ಸಂಖ್ಯೆ | ೧ | ೧೨ | ೧ | – | – | – | – | – | ೪ | ೨೨ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೨.೬೮ | ೩.೨೪ | ೨.೬೮ | | – | – | – | – | ೧೦೭೪ | ೫೯.೧೫ |
| ಉದ್ಯೋಗಿಗಳ ಸಂಖ್ಯೆ | ೪ | ೪೮ | ೪ | – | – | – | – | – | ೨೦ | ೮೩ |
| **ಚಿಂತಾಮಣಿ** | | | | | | | | | | |
| ಘಟಕಗಳ ಸಂಖ್ಯೆ | ೧ | ೧೫ | ೩ | – | ೩ | – | ೧ | ೧ | ೨೨ | ೪೭ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೪ | ೬೦.೦೪ | ೧೨.೦೧ | – | ೧೨.೦೧ | – | ೪ | ೪ | ೮೮.೦೪ | ೧೮೮.೧ |
| ಉದ್ಯೋಗಿಗಳ ಸಂಖ್ಯೆ | ೭ | ೧೦೫ | ೨೧ | – | | – | ೭ | ೭ | ೧೪೦ | ೩೧೫ |
| **ಬಾಗೇಪಲ್ಲಿ** | | | | | | | | | | |
| ಘಟಕಗಳ ಸಂಖ್ಯೆ | ೧ | ೬ | – | – | – | – | – | – | ೧ | ೩ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೪.೧೮ | ೨೫.೦೭ | – | – | – | – | – | – | ೪.೧೮ | ೧೨೫೪ |
| ಉದ್ಯೋಗಿಗಳ ಸಂಖ್ಯೆ | ೪ | ೯ | – | – | – | – | – | – | ೪ | ೧೨ |
| **ಗುಡಿಬಂಡೆ** | | | | | | | | | | |
| ಘಟಕಗಳ ಸಂಖ್ಯೆ | ೧ | ೧ | – | – | – | – | – | – | – | ೨ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೧.೧೫ | ೧.೧೫ | – | – | – | – | – | – | – | ೨.೩ |
| ಉದ್ಯೋಗಿಗಳ ಸಂಖ್ಯೆ | ೪ | ೪ | – | – | – | – | – | – | – | ೭ |
| **ಕೋಲಾರ** | | | | | | | | | | |
| ಘಟಕಗಳ ಸಂಖ್ಯೆ | ೧೦ | ೨೮ | ೪ | ೪ | ೧ | ೨ | ೧ | ೧೦ | ೧ | ೧೭ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೫೩.೧೨ | ೧೪೮.೮೨ | ೨೧.೨೫ | ೨೧.೨೫ | ೫೩.೧ | ೧೦.೬೨ | ೫೩.೧ | ೫೩.೧೨ | ೫೩.೧ | ೮೪.೯೭ |
| ಉದ್ಯೋಗಿಗಳ ಸಂಖ್ಯೆ | ೫೩ | ೧೨೦ | ೨೨ | ೨೨ | ೫ | ೧೦ | ೫ | ೫೩ | ೫ | ೮೫ |

ಮುಂದುವರಿದಿದೆ.............

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
|---|---|---|---|---|---|---|---|---|---|---|
| **ಮಾಲೂರು** | | | | | | | | | | |
| ಘಟಕಗಳ ಸಂಖ್ಯೆ | ೬ | ೧೦ | ೧೦ | – | ೨ | – | – | – | ೨೫ | ೭ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೬೨.೯ | ೧೦೩.೪೮ | ೧೦೩.೪೮ | – | ೨೦.೭೦ | – | – | – | ೨೫೮.೬೯ | ೭೨.೪೩ |
| ಉದ್ಯೋಗಿಗಳ ಸಂಖ್ಯೆ | ೪೮ | ೮೦ | ೮೦ | – | ೧೬ | – | – | – | ೨೯ | ೫೬ |
| **ಮುಳಬಾಗಿಲು** | | | | | | | | | | |
| ಘಟಕಗಳ ಸಂಖ್ಯೆ | ೪ | ೬ | ೪ | – | – | – | – | – | – | ೧೭ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೧೭೭೫ | ೨೬೬೩ | ೧೭೭೫ | – | – | – | – | – | – | ೭೫.೪೬ |
| ಉದ್ಯೋಗಿಗಳ ಸಂಖ್ಯೆ | ೨೦ | ೩೦ | ೨೦ | – | – | – | – | – | – | ೯೮ |
| **ಶ್ರೀನಿವಾಸಪುರ** | | | | | | | | | | |
| ಘಟಕಗಳ ಸಂಖ್ಯೆ | ೪ | – | ೮ | – | – | ೧ | – | ೨ | ೨ | ೧೧ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೪.೩೯ | – | ೩.೮೪ | – | – | ೧.೧೦ | – | ೨.೨೦ | ೨.೨೦ | ೧೨.೦೮ |
| ಉದ್ಯೋಗಿಗಳ ಸಂಖ್ಯೆ | ೧೬ | – | ೩೨ | – | – | ೪ | – | ೮ | ೮ | ೫೦ |
| **ಬಂಗಾರಪೇಟೆ** | | | | | | | | | | |
| ಘಟಕಗಳ ಸಂಖ್ಯೆ | ೧ | ೩೦ | ೨ | ೧ | ೨ | – | ೨ | ೨ | ೩ | ೪೫ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೬೧೬ | ೧೮೪.೭೪ | ೧೨.೩೨ | ೬೧೬ | ೧೨.೩೨ | – | ೧೨.೩೨ | ೧೨.೩೨ | ೧೮೪೭ | ೨೭೭೧೧ |
| ಉದ್ಯೋಗಿಗಳ ಸಂಖ್ಯೆ | ೪ | ೧೪೬ | ೮ | ೪ | ೮ | – | ೮ | ೮ | ೧೨ | ೨೦೬ |
| **ಗೌರಿಬಿದನೂರು** | | | | | | | | | | |
| ಘಟಕಗಳ ಸಂಖ್ಯೆ | ೪ | ೧೦ | ೧ | – | – | – | – | ೧ | ೨ | ೧೪ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೧೧.೩೪ | ೨೮.೩೫ | ೨.೮೪ | – | – | – | – | ೨.೮೪ | ೫.೬೭ | ೩೯.೬೯ |
| ಉದ್ಯೋಗಿಗಳ ಸಂಖ್ಯೆ | ೨೦ | ೫೦ | ೫ | – | – | – | – | ೫ | ೧೦ | ೮೪ |
| **ಶಿಡ್ಲಘಟ್ಟ** | | | | | | | | | | |
| ಘಟಕಗಳ ಸಂಖ್ಯೆ | ೩ | ೧೬ | ೧೦ | – | – | – | – | ೫ | ೫ | ೭ |
| ಬಂಡವಾಳ (ಲಕ್ಷ ರೂ.ಗಳಲ್ಲಿ) | ೧೦.೮೩ | ೫೭೭೬ | ೩೬೧೦ | – | – | – | – | ೧೮.೦೫ | ೧೮.೦೫ | ೨೫.೨೭ |
| ಉದ್ಯೋಗಿಗಳ ಸಂಖ್ಯೆ | ೧೫ | ೮೭ | ೫೦ | – | – | – | – | ೩೦ | ೩೦ | ೪೨ |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ.

ಜಿಲ್ಲೆಯಲ್ಲಿರುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ಪ್ರಧಾನವಾಗಿ ಆಹಾರ ಮತ್ತು ಪಾನೀಯ, ವಸ್ತ್ರ ಮತ್ತು ಸಿದ್ಧ ಉಡುಪು, ಗೃಹೋಪಯೋಗಿ ವಸ್ತು ಮತ್ತು ಪೀಠೋಪಕರಣ, ಪ್ಲಾಸ್ಟಿಕ್ ವಸ್ತುಗಳು, ರಾಸಾಯನಿಕ ವಸ್ತು, ಗಾಜು ಮತ್ತು

ಪಿಂಗಾಣಿ, ಲೋಹದ ಸಾಮಾನು, ಯಂತ್ರೋಪಕರಣ, ರಿಪೇರಿ ಮತ್ತು ಸೇವಾ ಕಾರ್ಯ ಹಾಗೂ ಇನ್ನಿತರೇ ಉತ್ಪಾದನಾ ಕಾರ್ಯಗಳಲ್ಲಿ ತೊಡಗಿದ್ದವು. ೨೦೦೩–೨೦೦೪ರ ಸಾಲಿನಲ್ಲಿ ಒಟ್ಟು ೪೨೧ ಸಣ್ಣ ಕೈಗಾರಿಕಾ ಘಟಕಗಳು ನೋಂದಣಿಗೊಂಡಿದ್ದವು. ಇವುಗಳಲ್ಲಿ ತೊಡಗಿಸಿದ್ದ ಒಟ್ಟು ಬಂಡವಾಳ ೨,೬೭೧.೨೯ ಲಕ್ಷ ರೂ.ಗಳಾಗಿದ್ದು, ೨,೩೩೭ ಜನರಿಗೆ ಉದ್ಯೋಗ ಒದಗಿಸಿವೆ. ಅಲ್ಲದೇ ಜಿಲ್ಲೆಯಲ್ಲಿ ಸುಮಾರು ಶೇ. ೧೦%ರಷ್ಟು ಸಣ್ಣ ಮತ್ತು ಅತೀ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಳ್ಳದೇ ಕಾರ್ಯನಿರ್ವಹಿಸುತ್ತಿವೆ ಎಂದು ಅಂದಾಜು ಮಾಡಲಾಗಿದೆ.

೧. **ಆಹಾರ ಮತ್ತು ಪಾನೀಯ ಕೈಗಾರಿಕೆ:** ಕೃಷಿ ಆಧಾರಿತ (ಆಹಾರ ಮತ್ತು ಪಾನೀಯ) ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕೆ, ಖಾದ್ಯ ತೈಲ, ಐಸ್‌ಕ್ರೀಂ ತಯಾರಿಕೆ, ಬೀಡಿ ಕಟ್ಟುವುದು, ರೇಷ್ಮೆ ಗೂಡಿನಿಂದ ರೇಷ್ಮೆ ನೂಲು ತೆಗೆಯುವುದು, ಕಬ್ಬಿನ ರಸ ತಯಾರಿಕೆ, ಬೆಲ್ಲ ತಯಾರಿಕೆ, ಅಕ್ಕಿ ಗಿರಣಿ, ಕಡಲೆಕಾಯಿ ಸಿಪ್ಪೆ ತೆಗೆಯುವ ಕಾರ್ಖಾನೆ ಮುಂತಾದವುಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩ರಲ್ಲಿ ನೋಂದಣಿಗೊಂಡ ಕೃಷಿ ಆಧಾರಿತ ಕೈಗಾರಿಕೆಗಳ ಸಂಖ್ಯೆ ೩೬ ಆಗಿದ್ದು, ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ ರೂ. ೨೨೮.೨೪ ಲಕ್ಷ ಗಳಾಗಿತ್ತು. ಇವುಗಳು ೧೮೦ ಜನರಿಗೆ ಉದ್ಯೋಗ ಒದಗಿಸಿದ್ದವು.

೨. **ಗಾಜು ಮತ್ತು ಪಿಂಗಾಣಿ ಕೈಗಾರಿಕೆ:** ಈ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಸುಣ್ಣ ತಯಾರಿಕೆ, ಟೇಬಲ್ ಮೌಲ್ಡ್ ಇಟ್ಟಿಗೆ ತಯಾರಿಕೆ, ಮಂಗಳೂರು ಹೆಂಚು ತಯಾರಿಕೆ, ಕಲ್ಲನ್ನು ತುಂಡರಿಸುವುದು ಮತ್ತು ಸಿಮೆಂಟ್ ಪೈಪ್ ತಯಾರಿಕೆ, ಬಳಪದ ಕಲ್ಲಿನ ಸಾಮಾನು ತಯಾರಿಕೆ ಮುಂತಾದವುಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರ ಸಾಲಿನಲ್ಲಿ ಗಾಜು ಮತ್ತು ಪಿಂಗಾಣಿ ಸಾಮಾನುಗಳನ್ನು ತಯಾರಿಸುವ ೨೧ ಘಟಕಗಳಿದ್ದು, ರೂ. ೧೩೩.೧೪ ಲಕ್ಷ ಬಂಡವಾಳದೊಂದಿಗೆ ಸ್ಥಾಪನೆಗೊಂಡಿದ್ದು, ೧೦೫ ಜನರಿಗೆ ಉದ್ಯೋಗವನ್ನೊದಗಿಸಿದ್ದವು.

೩. **ಚರ್ಮ ಮತ್ತು ರೆಗ್ಸಿನ್ ಕೈಗಾರಿಕೆ:** ಚರ್ಮ ಮತ್ತು ರೆಗ್ಸಿನ್ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಚರ್ಮದ ಪಾದರಕ್ಷೆ, ಆಟದ ಸಾಮಾನು, ಫ್ಯಾನ್ಸಿ ಸರಕು ಮುಂತಾದವುಗಳನ್ನು ತಯಾರಿಸುವ ಮತ್ತು ಚರ್ಮ ಹದ ಮಾಡುವ ಘಟಕಗಳೂ ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ಇವು ಎಂಟು ಘಟಕಗಳಿದ್ದು, ರೂ. ೫೦.೭೨ಲಕ್ಷ ಬಂಡವಾಳದೊಂದಿಗೆ ಸ್ಥಾಪನೆಗೊಂಡಿದ್ದು, ೪೦ ಜನರಿಗೆ ಉದ್ಯೋಗ ಒದಗಿಸಿವೆ.

೪. **ವಸ್ತ್ರ ಮತ್ತು ಸಿದ್ಧ ಉಡುಪುಗಳ ಕೈಗಾರಿಕೆ:** ವಸ್ತ್ರ ಮತ್ತು ಸಿದ್ಧ ಉಡುಪುಗಳಿಗೆ ಸಂಬಂಧಿಸಿದ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಟವಲ್, ನ್ಯಾಪ್ಕಿನ್ ಹಾಗೂ ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ವಸ್ತ್ರ ಮತ್ತು ಸಿದ್ಧ ಉಡುಪುಗಳ ತಯಾರಿಕಾ ಘಟಕಗಳ ಸಂಖ್ಯೆ ೧೩೪ ಆಗಿದ್ದು, ಇವುಗಳಲ್ಲಿ ರೂ. ೮೪೯.೫೬ ಲಕ್ಷ ಬಂಡವಾಳದೊಂದಿಗೆ ಸ್ಥಾಪನೆಗೊಂಡಿವೆ ಇವು ೬೭೦ ಮಂದಿಗೆ ಉದ್ಯೋಗ ಒದಗಿಸಿವೆ

೫ **ಮರದ ಗೃಹೋಪಯೋಗಿ ಮತ್ತು ಪೀಠೋಪಕರಣ ಕೈಗಾರಿಕೆ:** ಮರಕೊಯ್ಯುವುದು, ಪೀಠೋಪಕರಣ, ಕಿಟಕಿ ಬಾಗಿಲು, ಎತ್ತಿನಗಾಡಿ, ಆಟದ ಸಾಮಾನು ಮತ್ತು ಪೋಟೋ ಚೌಕಟ್ಟುಗಳನ್ನು ತಯಾರಿಸುವುದು, ವುಡನ್‌ಇನ್‌ಲೇ ವರ್ಕ್ಸ್ ಮುಂತಾದವು ಮರದ ಗೃಹೋಪಯೋಗಿ ಮತ್ತು ಪೀಠೋಪಕರಣ ಕೈಗಾರಿಕೆಗಳ ವ್ಯಾಪ್ತಿಗೆ ಒಳಪಡುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ಮರದ ಗೃಹೋಪಯೋಗಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳ ಸಂಖ್ಯೆ ೪೩ ಆಗಿದ್ದು, ಇವುಗಳಲ್ಲಿ ರೂ. ೨೭೨.೬೨ ಲಕ್ಷ ಬಂಡವಾಳ ತೊಡಗಿಸಿ, ೨೧೫ ಮಂದಿಗೆ ಉದ್ಯೋಗ ನೀಡಿವೆ.

೬ **ಮುದ್ರಣ ಲೇಖನ ಸಾಮಗ್ರಿಗಳ ಕೈಗಾರಿಕೆ:** ಜಿಲ್ಲೆಯ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ವ್ಯಾಪ್ತಿಗೆ ಕೈಚೀಲ, ಪೇಪರ್ ಕವರ್, ವ್ಯಾಕ್ಸ್ ಕೋಟೆಡ್ ಪೇಪರ್, ಕಾರ್ಡ್‌ಬೋರ್ಡ್, ಗಮ್. ಪೇಪರ್‌ಟೇಪ್, ಕಂಪ್ಯೂಟರ್ ಸ್ಟೇಷನರಿ ವಸ್ತುಗಳು ಮುದ್ರಣಾಲಯ ಮೊದಲಾದವು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ ರಲ್ಲಿ ಕೇವಲ ಐದು ಮುದ್ರಣ ಲೇಖನ ಸಾಮಗ್ರಿಗಳ ಕೈಗಾರಿಕಾ ಘಟಕಗಳಿದ್ದವು. ಇವುಗಳಲ್ಲಿ ತೊಡಗಿಸಿರುವ ಬಂಡವಾಳ ರೂ. ೩೧.೭ ಲಕ್ಷಗಳಾಗಿದ್ದು, ೨೫ ಮಂದಿಗೆ ಉದ್ಯೋಗ ನೀಡಿವೆ.

೭ **ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ:** ರಬ್ಬರ್ ಮತ್ತು ಪ್ಲಾಸ್ಟಿಕ್ ಕೈಗಾರಿಕೆಯ ವ್ಯಾಪ್ತಿಗೆ ಪಾಲಿಥಿನ್ ಚೀಲ, ಪ್ಲಾಸ್ಟಿಕ್ ವಸ್ತು, ನೈಲಾನ್ ಚೀಲ, ಟೈರ್ ರಿಟ್ರೇಡಿಂಗ್, ಪಿ.ವಿ.ಸಿ. ಪೈಪ್ಸ್, ಹವಾಯ್‌ಚಪ್ಪಲಿ, ಬಾಲ್‌ಪೆನ್, ಬಾಲ್‌ಪೆನ್ ರಿಫಿಲ್, ಪ್ಲಾಸ್ಟಿಕ್ ಗಾರ್‌ಮೆಂಟ್ಸ್, ಪ್ಲಾಸ್ಟಿಕ್ ಸೀಸೆ, ಫೈಬರ್ ಗ್ಲಾಸ್ ಮುಂತಾದವು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ಕೇವಲ ಮೂರು ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕಾ ಘಟಕಗಳಿದ್ದವು. ಇವುಗಳಲ್ಲಿ ತೊಡಗಿಸಿರುವ ಬಂಡವಾಳ ರೂ. ೧೯.೦೨ ಲಕ್ಷಗಳಾಗಿದ್ದು, ೧೫ ಮಂದಿಗೆ ಉದ್ಯೋಗ ನೀಡಿವೆ.

೮. **ರಾಸಾಯನಿಕ ವಸ್ತುಗಳ ತಯಾರಿಕೆ:** ಜಿಲ್ಲೆಯಲ್ಲಿ ತಯಾರಾಗುವ ರಾಸಾಯನಿಕ ವಸ್ತುಗಳ ವ್ಯಾಪ್ತಿಗೆ ಬಣ್ಣ ಮತ್ತು ವಾರ್ನಿಶ್, ಸಿಮೆಂಟ್, ಡಿಸ್ಟೆಂಪರ್, ಅಗರುಬತ್ತಿ, ಮುದ್ರಣ ಇಂಕು, ಸೋಪಿನ ದ್ರವ ಮತ್ತು ಫಿನಾಲ್, ಲಾಂಡ್ರಿ ಸೋಪು, ಡಿಟರ್‌ಜೆಂಟ್ ಕೇಕ್ ಮತ್ತು ಪೌಡರ್, ಬರವಣಿಗೆಯ ಇಂಕು, ಬೆಂಕಿಕಡ್ಡಿ, ಸುಗಂಧದ ಪೌಡರ್, ಬ್ಲೀಚಿಂಗ್ ಪೌಡರ್ ಮೊದಲಾದವು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ನಾಲ್ಕು ರಾಸಾಯನಿಕ ವಸ್ತುಗಳ ತಯಾರಿಕಾ ಘಟಕಗಳಿದ್ದು, ರೂ. ೨೫.೩೭ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೨೦ ಮಂದಿಗೆ ಉದ್ಯೋಗ ನೀಡಿವೆ.

೯. **ಜನರಲ್ ಇಂಜಿನಿಯರಿಂಗ್:** ಜನರಲ್ ಇಂಜಿನಿಯರಿಂಗ್ ವ್ಯಾಪ್ತಿಗೆ ಕಬ್ಬಿನ ಗಾಣಗಳ ಬಿಡಿಭಾಗ, ಅಕ್ಕಿಗಿರಣಿಗಳ ಬಿಡಿಭಾಗ, ವ್ಯವಸಾಯೋಪಕರಣ, ರೋಲಿಂಗ್ ಷಟರ್ಸ್, ಗ್ರಿಲ್ಸ್ ಮತ್ತು ಗೇಟು, ಸ್ಟೀಲ್ ಫರ್ನಿಚರ್ಸ್, ಆಯಿಲ್ ಇಂಜಿನ್ಸ್, ಆಟೋಮೊಬೈಲ್ ಬಿಡಿಭಾಗ, ವೆಲ್ಡಿಂಗ್ ಮತ್ತು ಟರ್ನಿಂಗ್, ಬಿಲ್ಡರ್ಸ್ ಹಾರ್ಡ್‌ವೇರ್, ಬೋಲ್ಟ್ ಮತ್ತು ನಟ್ಸ್, ಅಲ್ಯೂಮಿನಿಯಂ, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳೇ ಮೊದಲಾದ ತಯಾರಿಕಾ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ೨೨ ಜನರಲ್ ಇಂಜಿನಿಯರಿಂಗ್ ಘಟಕಗಳಿದ್ದು, ಇವುಗಳಲ್ಲಿ ೧೩೯.೪೮ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದ್ದು, ೧೧೦ ಮಂದಿಗೆ ಉದ್ಯೋಗ ನೀಡಿವೆ.

೧೦. **ರಿಪೇರಿ ಮತ್ತು ಸೇವಾಕಾರ್ಯಗಳು:** ರಿಪೇರಿ ಮತ್ತು ಸೇವಾ ಕಾರ್ಯಗಳ ವ್ಯಾಪ್ತಿಗೆ ಆಟೋ ರಿಪೇರಿ, ಫೋಟೋ ಸ್ಟುಡಿಯೋ, ಗಡಿಯಾರಗಳ ರಿಪೇರಿ, ಲಾಂಡ್ರಿ ಮತ್ತು ಡ್ರೈಕ್ಲೀನಿಂಗ್, ಸೈಕಲ್‌ಷಾಪ್, ಎಕ್ಸರೇ ಕ್ಲಿನಿಕ್, ಎಸ್.ಟಿ.ಡಿ ಮತ್ತು ಐ.ಎಸ್.ಡಿ. ಬೂತ್ಸ್, ರೇಡಿಯೋ ಮತ್ತು ಟಿವಿ ರಿಪೇರಿ, ಜಾಬ್ ಟೈಪಿಂಗ್, ಕಂಪ್ಯೂಟರ್ ಗ್ರಾಫಿಕ್ಸ್, ಡೇಟಾಪ್ರೊಸೆಸಿಂಗ್, ಆಟೋಝೆರಾಕ್ಸ್, ಬ್ಯಾಟರಿಚಾರ್ಜಿಂಗ್, ಟೇಪ್‌ರೆಕಾರ್ಡ್‌ಗಳ ರಿಪೇರಿ ಮೊದಲಾದವುಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ೩೯ ರಿಪೇರಿ ಮತ್ತು ಸೇವಾ ಕಾರ್ಯಗಳ ಘಟಕಗಳಿದ್ದು, ರೂ. ೨೪೭.೨೬ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವುಗಳು ೧೯೫ ಮಂದಿಗೆ ಉದ್ಯೋಗ ನೀಡಿವೆ.

೧೧. **ಇತರ ಉತ್ಪಾದನಾ ಕಾರ್ಯಗಳು:** ಕೈಮಗ್ಗ, ವಿದ್ಯುತ್ ಚಾಲಿತ ಮಗ್ಗ, ಹಿತ್ತಾಳೆ ಮತ್ತು ಪಂಚಲೋಹದ ಸರಕು, ರೇಷ್ಮೆ ನೂಲು ತಯಾರಿಕೆ, ಬಿದಿರಿನ ಸ್ಟ್ಯಾಂಡ್ ತಯಾರಿಕೆ, ಕಾಫಿ ಬೀಜ ಹುರಿದು ಪುಡಿ ಮಾಡುವುದು, ಬಟ್ಟೆಗಳ ಪ್ರಿಂಟಿಂಗ್ ಮತ್ತು ಬಣ್ಣ ಹಚ್ಚುವುದು, ಸ್ಕ್ರೀನ್ ಪ್ರಿಂಟಿಂಗ್, ಉಣ್ಣೆ ಹೆಣೆಯುವುದು, ಕೊಂಬಿನ ಅಲಂಕಾರಿಕ ವಸ್ತು, ನಾರಿನ ಉತ್ಪನ್ನ, ಆಧುನಿಕ ಮಣ್ಣಿನ ಪಾತ್ರೆ, ಹಿತ್ತಾಳೆಯ ವಿಗ್ರಹಗಳ ತಯಾರಿಕೆ ಮೊದಲಾದವು ಇತರ ಉತ್ಪಾದನಾ ಕಾರ್ಯಗಳ ವ್ಯಾಪ್ತಿಗೆ ಬರುತ್ತವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧೦ ಹಾಗೂ ಕೋಷ್ಟಕ ೫.೧೧ಅನ್ನು ನೋಡಿ.

**ಬೆಲ್ಲ ತಯಾರಿಕೆ:** ಕಬ್ಬು ಬೆಳೆಯುತ್ತಿದ್ದ ಗೌರಿಬಿದನೂರು, ಚಿಕ್ಕಬಳ್ಳಾಪುರ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಬೆಲ್ಲವನ್ನು ತಯಾರಿಸಿ ಬೆಂಗಳೂರು ಪೇಟೆಯಲ್ಲಿ ಮಾರಾಟ ಮಾಡುತ್ತಿದ್ದ ಕಾಲ ಒಂದಿತ್ತು. ಮಂಚೇನಹಳ್ಳಿ ಬೆಲ್ಲವು ಗುಣಮಟ್ಟದಲ್ಲಿ ಹಾಗೂ ರುಚಿಯಲ್ಲಿ ಬಹಳ ಹೆಸರುವಾಸಿಯಾಗಿದೆ. ಶಿಡ್ಲಘಟ್ಟ, ಮುಳಬಾಗಿಲು ಮತ್ತು ಬಂಗಾರಪೇಟೆ ತಾಲ್ಲೂಕುಗಳಲ್ಲಿ ಹಳೆಯ ಪದ್ಧತಿಯಲ್ಲಿ ಬಿಳಿ ಸಕ್ಕರೆ ಉತ್ಪಾದನೆಯಾಗುತ್ತಿತ್ತು. ಪರಿಶುದ್ಧವಾದ ಹರಳಿನ ಸಕ್ಕರೆ ಮಾರಾಟಕ್ಕೆ ಬಂದ ಮೇಲೆ ಬಿಳಿ ಸಕ್ಕರೆಗೆ ಬೇಡಿಕೆ ಕಡಿಮೆಯಾಗಿ, ಉತ್ಪಾದನೆಯೂ ಸ್ಥಗಿತಗೊಂಡಿತು. ಗೌರಿಬಿದನೂರು ಸಕ್ಕರೆ ಕಾರ್ಖಾನೆ ಸ್ಥಾಪನೆಯ ನಂತರ ಕಬ್ಬನ್ನು ಸಕ್ಕರೆ ಕಂಪನಿಗೆ ಸರಬರಾಜು ಮಾಡಿದ್ದರಿಂದ ಬೆಲ್ಲದ ಉತ್ಪಾದನೆಯೂ ಕಡಿಮೆಯಾಗುತ್ತಾ ಬಂದಿದ್ದು ಇಂದು ಈ ಗೃಹ ಕೈಗಾರಿಕೆಯು ಜಿಲ್ಲೆಯಲ್ಲಿ ಸಂಪೂರ್ಣವಾಗಿ ಕಣ್ಮರೆಯಾಗಿದೆ. ಕಬ್ಬು ಬೆಳೆಗೆ ಪರ್ಯಾಯವಾಗಿ ಮೆಕ್ಕೆ ಜೋಳವನ್ನು ಬೆಳೆಯಲಾಗುತ್ತದೆ.

**ಅಕ್ಕಿಗಿರಣಿಗಳು:** ಕೋಲಾರ ಜಿಲ್ಲೆಯಲ್ಲಿ ೨೦೦೧–೨೦೦೨ರಲ್ಲಿ ೮೭೬ ಹಲ್ಲರ್ಸ್ ಮತ್ತು ಷೆಲ್ಲರ್ಸ್ ಅಕ್ಕಿ ಗಿರಣಿಗಳಿದ್ದವು. ಒಂದು ಟನ್ ಸಾಮರ್ಥ್ಯದ ೬ ಭತ್ತದ ಗಿರಣಿಗಳೂ, ೨ ಟನ್ ಸಾಮರ್ಥ್ಯದ ೬೦ ಘಟಕಗಳು ಬಂಗಾರಪೇಟೆ, ಚಿಂತಾಮಣಿ, ಗೌರಿಬಿದನೂರು, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ತಾಲ್ಲೂಕುಗಳಲ್ಲಿವೆ. ಅತ್ಯಾಧುನಿಕ ಭತ್ತದ ಗಿರಣಿಗಳು ಬಂಗಾರಪೇಟೆಯಲ್ಲಿ ಸ್ಥಾಪನೆಯಾಗಿವೆ. ಜಿಲ್ಲೆಯಲ್ಲಿ ಭತ್ತವನ್ನು ಅಕ್ಕಿ ಮಾಡುವ ಗಿರಣಿಗಳ ಒಟ್ಟು ಸಾಮರ್ಥ್ಯ ೩,೧೦,೦೦೦ ಟನ್ನುಗಳು. ಜಿಲ್ಲೆಯಲ್ಲಿ ಉತ್ಪಾದನೆಯಾಗುವ ಭತ್ತ ೧,೦೪,೨೫೬ ಟನ್ನುಗಳು, ಪೂರ್ಣ ಸಾಮರ್ಥ್ಯದ ಬಳಕೆಗಾಗಿ ಭತ್ತವನ್ನು ಆಂಧ್ರಪ್ರದೇಶ ಮತ್ತು ತಮಿಳುನಾಡಿನ ನೆರೆಯ ತಾಲ್ಲೂಕುಗಳಿಂದ ಖರೀದಿಸಲಾಗುತ್ತದೆ. ೨೦೦೧–೨೦೦೨ ರಲ್ಲಿದ್ದ ಹಲ್ಲರ್ಸ್ ಮತ್ತು ಷೆಲ್ಲರ್ಸ್ ಅಕ್ಕಿಗಿರಣಿಗಳ ವಿವರವನ್ನು ಕೋಷ್ಟಕ ೫.೧೨ರಲ್ಲಿ ನೀಡಿದೆ.

**ಕೋಷ್ಟಕ ೫.೧೨**

| ತಾಲ್ಲೂಕು | ಹಲ್ಲರ್ಸ್ | ಷೆಲ್ಲರ್‌ಗಳು | ಒಟ್ಟು | ಆಧುನೀಕರಿಸಿದ ಗಿರಣಿಗಳು |
|---|---|---|---|---|
| **ಕೋಲಾರ** | ೯೭ | ೭ | ೧೦೪ | ೭ |
| **ಮಾಲೂರು** | ೪೬ | – | ೪೬ | – |
| **ಬಂಗಾರಪೇಟೆ** | ೯೯ | ೧೭ | ೧೧೬ | ೧೭ |
| **ಮುಳಬಾಗಿಲು** | ೯೬ | ೧ | ೯೭ | ೧ |
| **ಶ್ರೀನಿವಾಸಪುರ** | ೨೫ | ೩ | ೨೮ | ೩ |
| **ಚಿಂತಾಮಣಿ** | ೯೨ | ೩೦ | ೧೨೨ | ೩೦ |
| **ಶಿಡ್ಲಘಟ್ಟ** | ೪೭ | – | ೪೭ | – |
| **ಚಿಕ್ಕಬಳ್ಳಾಪುರ** | ೨೭ | ೨ | ೨೯ | ೨ |
| **ಗೌರಿಬಿದನೂರು** | ೧೩೦ | ೪ | ೧೩೪ | ೪ |
| **ಗುಡಿಬಂಡೆ** | ೨೧ | ೧ | ೨೨ | ೧ |
| **ಬಾಗೇಪಲ್ಲಿ** | ೮೦ | ೧ | ೮೧ | ೧ |
| **ಒಟ್ಟು** | **೮೧೦** | **೬೬** | **೮೭೬** | **೬೬** |

ಆಧಾರ: ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಕೋಲಾರ

## ಜಲ್ಲಿ ಕ್ರಷಿಂಗ್

ಕೋಲಾರ ಜಿಲ್ಲೆಯಲ್ಲಿ ಫೆಬ್ರುವರಿ ೨೦೦೫ರಲ್ಲಿದ್ದಂತೆ ಒಟ್ಟು ೫೪ ಜಲ್ಲಿ ಕ್ರಷಿಂಗ್ ಘಟಕಗಳಿದ್ದು, ಕೋಲಾರ ತಾ॥ ಅತಿ ಹೆಚ್ಚು ಜಲ್ಲಿ ಕ್ರಷಿಂಗ್ ಘಟಕಗಳನ್ನು ಹೊಂದಿದೆ. ಇಲ್ಲಿ ಒಟ್ಟು ೩೧ ಘಟಕಗಳಿವೆ. ನಂತರ ಮಾಲೂರಿನಲ್ಲಿ ೧೦ ಘಟಕಗಳು, ಚಿಕ್ಕಬಳ್ಳಾಪುರದಲ್ಲಿ ೦೬, ಮುಳಬಾಗಿಲು ೦೨, ಚಿಂತಾಮಣಿ ೦೨; ಬಂಗಾರಪೇಟೆ, ಬಾಗೇಪಲ್ಲಿ ಹಾಗೂ ಗೌರಿಬಿದನೂರು ತಾಲೂಕುಗಳು ತಲಾ ಒಂದೊಂದು ಘಟಕಗಳನ್ನು ಹೊಂದಿವೆ. ಜಿಲ್ಲೆಯು ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಇಲ್ಲಿ ಜಲ್ಲಿ ಕ್ರಷಿಂಗ್‌ಗೆ ವಿಪುಲ ಅವಕಾಶವಿದೆ. ಈ ಉದ್ಯಮಗಳಲ್ಲಿ ಒಟ್ಟು ೧೨೩೬ ಲಕ್ಷ ರೂ.ಗಳ ಬಂಡವಾಳ ತೊಡಗಿಸಿದ್ದು ಸುಮಾರು ೮೦೮೦ ಮಂದಿಗೆ ಉದ್ಯೋಗ ಒದಗಿಸಿವೆ.

## ಖಾದಿ ಮತ್ತು ಗ್ರಾಮೋದ್ಯೋಗ

ಕೋಲಾರ ಜಿಲ್ಲೆಯಲ್ಲಿ ಕೃಷಿಯು ಮಳೆಯನ್ನೇ ಅವಲಂಬಿಸಿರುವುದರಿಂದ ಪೂರ್ಣ ಉದ್ಯೋಗವನ್ನು ಕಲ್ಪಿಸಲು ಸಾಧ್ಯವಾಗಲಾರದು. ಅಲ್ಲದೆ ಕೃಷಿಯ ಇತರ ಅಂಗಗಳಾದ ತೋಟಗಾರಿಕೆ, ಪಶುಪಾಲನೆ ಮುಂತಾದವುಗಳ ಅಭಿವೃದ್ಧಿಗೆ ನೀರಾವರಿ ಸೌಲಭ್ಯದ ಅವಶ್ಯಕತೆಯು ಹೆಚ್ಚಾಗಿಯೇ ಇರುತ್ತದೆ. ಕೃಷಿಯನ್ನು ಮಾಡಲಾಗದ ಕಾಲದಲ್ಲಿ ಗ್ರಾಮಸ್ಥರು ಎದುರಿಸುತ್ತಿದ್ದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಹಾಗೂ ಖಾದಿ ಉದ್ಯಮವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೋತ್ಸಾಹಿಸಲು ಕೇಂದ್ರ ಸರ್ಕಾರವು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಅಖಿಲ ಭಾರತದ ಮಟ್ಟದಲ್ಲಿ ಸ್ಥಾಪಿಸಿತು. ಅಂತೆಯೇ ರಾಜ್ಯ

ಸರ್ಕಾರಗಳು ರಾಜ್ಯ ಮಟ್ಟದಲ್ಲಿ ಈ ಮಂಡಳಿಗಳನ್ನು ಸ್ಥಾಪಿಸಿದವು. ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗಳನ್ನು ಸ್ಥಾಪಿಸಿತು. ಕೋಲಾರ ಜಿಲ್ಲೆಯಲ್ಲೂ ಖಾದಿ ಗ್ರಾಮೋದ್ಯೋಗ ಮಂಡಳಿಯನ್ನು ಸ್ಥಾಪಿಸಲಾಗಿದೆ. ಈ ಮಂಡಳಿಯು ಗ್ರಾಮಗಳಲ್ಲಿರುವ ಕುಶಲ ಕರ್ಮಿಗಳಿಗೆ ನಿರುದ್ಯೋಗಿ ಯುವಕರಿಗೆ, ಮಹಿಳೆಯರಿಗೆ ಸ್ಥಳೀಯವಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹ ನೀಡುತ್ತಿದೆ. ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಗ್ರಾಮಾಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸತತ ಪ್ರಯತ್ನ ಮತ್ತು ಪ್ರೋತ್ಸಾಹಗಳಿಂದಾಗಿ ಅನೇಕ ಗ್ರಾಮ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ಗ್ರಾಮೀಣ ಜನರು ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗುವುದೂ ಕಡಿಮೆಯಾಗಿದೆ. ಗ್ರಾಮೋದ್ಯೋಗವು ಅವರನ್ನು ಸ್ವಾವಲಂಬನೆಯತ್ತ ಮುನ್ನೆಡೆಸುತ್ತಿದೆ. ಹತ್ತಿಯನ್ನು ನೂಲುವುದರಿಂದ ಬಟ್ಟೆಯನ್ನು ನೇಯುವವರೆಗೆ ಸಮಸ್ತ ಕಾರ್ಯವನ್ನು ಈ ಮಂಡಳಿಯು ನೋಡಿಕೊಳ್ಳುತ್ತದೆ. ಖಾದಿಯ ಜೊತೆಗೆ ಆಯಾ ಜಿಲ್ಲೆಯಲ್ಲಿ ದೊರಕುವ ಕಚ್ಚಾ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಉಪಭೋಗಕ್ಕೆ ಸಿದ್ಧವಾಗುವಂತೆ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವುದಕ್ಕೆ ನೆರವು ನೀಡುತ್ತದೆ.

ಕೋಲಾರ ಜಿಲ್ಲೆಯಲ್ಲಿ ರೇಷ್ಮೆ, ಕುರಿ ತುಪ್ಪಟ ಮತ್ತು ಚರ್ಮ ವಿಶೇಷವಾಗಿ ದೊರೆಯುವ ಕಚ್ಚಾ ಸಾಮಗ್ರಿಗಳು. ಖಾದಿ, ರೇಷ್ಮೆ ಕೈಗಾರಿಕೆ, ಕಂಬಳಿ ನೇಯ್ಗೆಗೆ ಈ ಮಂಡಳಿಯು ಬಹಳ ಉತ್ತೇಜನ ಕೊಟ್ಟಿದೆ. ಜಿಲ್ಲೆಯಲ್ಲಿ ಕುರಿ ತುಪ್ಪಟದಿಂದ ನೂಲು ತೆಗೆದು, ಕಂಬಳಿ ತಯಾರಿಸುವುದಕ್ಕೆ ಈ ಮಂಡಳಿಯು ಧನ ಸಹಾಯ ಮತ್ತು ತಾಂತ್ರಿಕ ನೆರವನ್ನು ನೀಡಿದೆ. ಆದರೆ ಆಧುನಿಕ ಯಂತ್ರಗಳಿಂದ ತಯಾರಾದ ರೇಷ್ಮೆ ಹಾಗೂ ಉಣ್ಣೆಯ ವಸ್ತುಗಳೊಂದಿಗೆ ಗ್ರಾಮಗಳಲ್ಲಿ ತಯಾರಿಸಿದ ವಸ್ತುಗಳು ಪೈಪೋಟಿ ಮಾಡಲಾರದೆ ನಶಿಸಿ ಹೋಗುತ್ತಿವೆ. ಆದಾಗ್ಯೂ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸತತ ಪ್ರಯತ್ನದಿಂದಾಗಿ ಮತ್ತು ಹಣಕಾಸಿನ ನೆರವಿನಿಂದಾಗಿ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ, ಖಾದಿ ರೇಷ್ಮೆ ಕೈಗಾರಿಕೆಯು ಮುಂದುವರಿಯುತ್ತಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ ಮೂರು, ಕೋಲಾರ ತಾಲ್ಲೂಕಿನಲ್ಲಿ ಮೂರು, ಬಂಗಾರಪೇಟೆ ತಾಲ್ಲೂಕಿನಲ್ಲಿ ಒಂದು, ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಎರಡು, ಹೀಗೆ ಒಟ್ಟು ಒಂಭತ್ತು ಘಟಕಗಳು ರೇಷ್ಮೆ ಖಾದಿ ಉತ್ಪಾದನೆಯಲ್ಲಿ ತೊಡಗಿವೆ. ರೇಷ್ಮೆ ಗೂಡಿನಿಂದ ನೂಲನ್ನು ತೆಗೆದು, ಹುರಿಮಾಡಿ, ಬಟ್ಟೆಯನ್ನು ನೇಯುವುದೇ ಮುಂತಾದ ಕಾರ್ಯಗಳೆಲ್ಲ ಕೈಯಿಂದಲೇ ನಡೆಯುತ್ತದೆ. ವಿದ್ಯುತ್ ಚಾಲಿತ ಯಂತ್ರಗಳ ಬಳಕೆಯನ್ನು ಖಾದಿತತ್ವವು ನಿಷೇಧಿಸುತ್ತದೆ.

ರೇಷ್ಮೆ ಖಾದಿಯನ್ನು ಉತ್ಪಾದಿಸುತ್ತಿರುವ ಘಟಕಗಳು ಕರ್ನಾಟಕದ ಖಾದಿ ಕೇಂದ್ರ ಮಾರಾಟ ಸಂಘಕ್ಕೆ ಅವನ್ನು ಮಾರಾಟ ಮಾಡುವುದಲ್ಲದೆ, ತಮ್ಮದೇ ಆದ ಮಾರಾಟದ ಮಳಿಗೆಗಳ ಮೂಲಕ ಅವನ್ನು ಮಾರಾಟ ಮಾಡುತ್ತವೆ.

ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ೧೯೯೫ ರವರೆಗೆ ಧನ ಸಹಾಯಕ್ಕಾಗಿ ನೋಂದಣಿ ಮಾಡಲ್ಪಟ್ಟ ಘಟಕಗಳ ಸಂಖ್ಯೆ ೧೨೯೭ ಆಗಿತ್ತು. ಇವುಗಳಲ್ಲಿ ಉತ್ಪಾದನಾ ನಿರತ ಘಟಕಗಳ ಸಂಖ್ಯೆ ೧೫೦ ಹಾಗೂ ಉದ್ಯೋಗಿಗಳ ಸಂಖ್ಯೆ ೫೦೦ ಆಗಿತ್ತು. ೨೦೦೧–೦೨ರ ಸಾಲಿನಲ್ಲಿ ಜಿಲ್ಲೆಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ನೋಂದಣಿ ಮಾಡಲ್ಪಟ್ಟು ಉತ್ಪಾದನೆಯಲ್ಲಿ ತೊಡಗಿರುವ ವಿವಿಧ ಸಂಸ್ಥೆಗಳಿಗೆ ಒದಗಿಸಿದ ಧನ ಸಹಾಯ ಕೆಳಗಿನಂತಿದೆ. ನೋಂದಾಯಿತ ಸಂಘಗಳು ೧೧೭ ಆಗಿದ್ದು, ೧೧೨೯ ಫಲಾನುಭವಿಗಳಿದ್ದರು. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಉತ್ಪಾದನೆಯಲ್ಲಿ ತೊಡಗಿದ ಸಂಘಗಳು ೨೦೦೦–೦೧ ರಲ್ಲಿ ೨೫೯ ಲಕ್ಷ ರೂ.ಗಳ ಖಾದಿ ರೇಷ್ಮೆ ಬಟ್ಟೆ ಸೀರೆ, ಇತ್ಯಾದಿ ವಸ್ತುಗಳನ್ನು ತಯಾರಿಸಿದ್ದವು. ಹಿಂದಿನ ವರ್ಷದ ಉತ್ಪನ್ನವು ಸೇರಿದಂತೆ ಆ ಸಾಲಿನಲ್ಲಿ ಮಾರಾಟ ಮಾಡಿದ ಒಟ್ಟು ಮೌಲ್ಯ ೪೪೨.೫೦ ಲಕ್ಷ ರೂ.ಗಳಾಗಿತ್ತು. ೨೦೦೧–೦೨ ರಲ್ಲಿ ಈ ಸಂಘಗಳು ೨೯೪.೦೫ ಲಕ್ಷ ರೂ.ಗಳ ರೇಷ್ಮೆ ಖಾದಿ ವಸ್ತುಗಳನ್ನು ಉತ್ಪಾದನೆ ಮಾಡಿ ಹಿಂದಿನ ವರ್ಷದ ಉಳಿದ ವಸ್ತುಗಳನ್ನು ಸೇರಿದಂತೆ ೨೪೪.೨೫ ಲಕ್ಷ ರೂ.ಗಳ ಚಿಲ್ಲರೆ ಮಾರಾಟವನ್ನು, ೧೭೩.೭೭ ಲಕ್ಷ ರೂ.ಗಳ ಸಗಟು ಮಾರಾಟವನ್ನು ಮಾಡಿದ್ದವು. ೨೦೦೨–೦೩ರಲ್ಲಿ ಉತ್ಪಾದನೆ ೩೦೦ ಲಕ್ಷ ರೂ.ಗಳಷ್ಟು ಆಗಿದ್ದರೆ, ಚಿಲ್ಲರೆ ಬಿಕರಿ ೨೦೪ ಲಕ್ಷ ರೂ.ಗಳು, ಸಗಟು ಬಿಕರಿ ೧೮೭.೫೫ ಲಕ್ಷ ರೂ.ಗಳಾಗಿತ್ತು. ಜಿಲ್ಲೆಯಲ್ಲಿ ೧೩ ಖಾದಿ ರೇಷ್ಮೆ ಘಟಕಗಳು ನೋಂದಣಿಗೊಂಡಿದ್ದವು. ಈ ಪೈಕಿ ಒಂಭತ್ತು ಘಟಕಗಳು ಕಾರ್ಯ ಮಾಡುತ್ತಿವೆ. ರೇಷ್ಮೆ ಖಾದಿ ಉದ್ಯಮದಲ್ಲಿ ತೊಡಗಿರುವ ಸಂಘಗಳ ವಿವರಗಳನ್ನು ಕೋಷ್ಟಕ ೫.೧೩ರಲ್ಲಿ ಹಾಗೂ ೫.೧೪ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ವಿವರಗಳನ್ನು ನೀಡಿದೆ.

**ಕೋಷ್ಟಕ: ೫.೧೩ ಕೋಲಾರ ಜಿಲ್ಲಾ ಖಾದಿ ರೇಷ್ಮೆ ಸಂಘಗಳ ವಿವರ.**

| ಸಂಘಗಳ ಹೆಸರು | ನೋಂದಣಿ ಗೊಂಡ ಸಂಖ್ಯೆ ಮತ್ತು ವರ್ಷ | ೨೦೦೦-೦೧ (ಲಕ್ಷ ರೂ.ಗಳಲ್ಲಿ) | | | ೨೦೦೧-೦೨ (ಲಕ್ಷ ರೂ.ಗಳಲ್ಲಿ) | | | ೨೦೦೨-೦೩ (ಲಕ್ಷ ರೂ.ಗಳಲ್ಲಿ) | | |
|---|---|---|---|---|---|---|---|---|---|---|
| | | ಉತ್ಪಾದನೆ | ಮಾರಾಟ | ಉದ್ಯೋಗ | ಉತ್ಪಾದನೆ | ಮಾರಾಟ | ಉದ್ಯೋಗ | ಉತ್ಪಾದನೆ | ಮಾರಾಟ | ಉದ್ಯೋಗ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| ೦೧. ಭಾರತಿ ಗ್ರಾಮೋದ್ಯೋಗ ಸಂಘ ಮುರುಗಮಲ್ಲ | ಸಂಖ್ಯೆ.೨೯/ ೧೯೯೦-೯೧ | ೩೨.೮೦ | ೪೧.೬೦ | ೨೦ | ೩೫.೨೦ | ೪೪.೯೦ | ೨೦ | ೩೮.೨೦ | ೪೯.೪೦ | ೨೦ |
| ೨. ಕೆ.ಜಿ.ಎನ್ ಖಾದಿ ಗ್ರಾಮೋದ್ಯೋಗ ಸಂಘ, ಕೊಂಡರಾಜನ ಹಳ್ಳಿ | ಸಂಖ್ಯೆ. ೧೮/ ೧೯೯೨-೯೩ | ೬.೯೦ | ೯.೬೦ | ೧೦ | ೭.೫೯ | ೧೧.೭೫ | ೧೦ | ೮.೩೦ | ೧೨.೨೫ | ೧೦ |
| ೩. ಟಿ.ಎನ್.ಆರ್. ಖಾದಿ ರೇಷ್ಮೆ ಕೈಗಾರಕೆ, ಕರಿಯಪಲ್ಲಿ | ಸಂಖ್ಯೆ. ೩೪೦/ ೧೯೯೨-೯೩ | ೨೦.೦೦ | ೩೨.೫೦ | ೧೬ | ೨೦.೨೦ | ೩೫.೪೫ | ೧೬ | ೨೨.೨೦ | ೩೫.೫೦ | ೧೬ |
| ೪. ಖಾದಿ ಮತ್ತು ಗ್ರಾಮಾಭಿವೃದ್ಧಿ ಸಂಘ, ಹುದುಕುಲ, ಬಂಗಾರಪೇಟೆ ತಾ. | ಸಂಖ್ಯೆ ೮೪/ ೧೯೮೦-೮೧ | ೨೦.೦೦ | ೨೯.೧೦ | ೩ | ೫೫.೦೦ | ೬೩.೮೭ | ೩ | ೬೦.೫೦ | ೭೦.೨೦ | ೩ |
| ೫. ಶ್ರೀ ನಂದಿ ಖಾದಿ ಗ್ರಾಮೋದ್ಯೋಗ ಸಂಘ, ಮಳಮಚನಹಳ್ಳಿ, ಶಿಡ್ಲಘಟ್ಟ ತಾ | ಸಂಖ್ಯೆ ೧೧೨/ ೧೯೯೨-೯೩ | ೧೯.೩೦ | ೩೩.೬೦ | ೨೦ | ೨೦.೯೩ | ೩೬.೭೦ | ೧೬ | ೨೨.೦೦ | ೪೦.೩೦ | ೧೬ |
| ೬. ಬಬಿತ ಖಾದಿ ಗ್ರಾಮೋದ್ಯೋಗ ಸಂಘ, ಕಂಬದಹಳ್ಳಿ, ಶಿಡ್ಲಘಟ್ಟ ತಾ | ಸಂಖ್ಯೆ. ೧೦/ ೧೯೯೧-೯೨ | ೨೫.೩೦ | ೫೩.೩೫ | ೧೫ | ೨೭.೮೩ | ೫೮.೭೮ | ೧೫ | ೩೦.೬೦ | ೬೪.೦೦ | ೧೫ |
| ೭. ನಜೀಂ ರೇಷ್ಮೆ ಖಾದಿ ಕೈಗಾರಿಕೆಗಳ ಸಂಘ, ಉಪ್ಪಾರಪೇಟೆ, ಚಿಂತಾಮಣಿ ತಾ | ಸಂಖ್ಯೆ. ೫/ ೧೯೯೦-೯೧ | ೫೮.೩೪ | ೫೫.೦೦ | ೨೫ | ೬೪.೨೦ | ೭೧.೫೦ | ೨೫ | ೭೦.೬೨ | ೭೮.೫೦ | ೨೫ |
| ೮. ಖಾದಿ ರೇಷ್ಮೆ ಕೈಗಾರಿಕಾ ಸಂಘ ಚನ್ನಸಂದ್ರ, ಕೋಲಾರ ತಾ. | ಸಂಖ್ಯೆ.೪/ ೧೯೮೩-೮೪ | ೨೪.೫೦ | ೫೦.೨೦ | ೨೦ | ೨೬.೪೫ | ೩೯.೮೫ | ೨೦ | ೨೯.೨೦ | ೪೩.೧೦ | ೨೦ |
| ೯. ತಜೀಂ ಖಾದಿ ಸಿಲ್ಕ ಇಂಡಸ್ಟ್ರೀಸ್ ಸಂಘ, ಕೋಲಾರ | ಸಂಖ್ಯೆ. ೬೬/ ೧೯೮೨-೮೩ | ೨೨.೫೦ | ೩೫.೦೦ | ೨೦ | ೨೪.೬೫ | ೩೯.೮೫ | ೨೦ | ೨೭.೨೦ | ೪೩.೦೦ | ೨೦ |

(ಆಧಾರ : ಕೋಲಾರ ಜಿಲ್ಲಾ ರೇಷ್ಮೆ ಮಂಡಳಿ)

## ಕೋಷ್ಟಕ ೫.೧೪
## ಜಿಲ್ಲೆಯ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ವಿವರ

| | | ೧೯೯೫–೯೬ | | | | | | ೨೦೦೩–೦೪ | | | | | |
|---|---|---|---|---|---|---|---|---|---|---|---|---|---|
| | | | | | ಉದ್ಯೋಗಿಗಳ ಸಂಖ್ಯೆ | | | | | | ಉದ್ಯೋಗಿಗಳ ಸಂಖ್ಯೆ | | |
| ಕ್ರ. ಸಂ. | ಉದ್ದಿಮೆಗಳು | ಘಟಕಗಳ ಸಂಖ್ಯೆ | ಉತ್ಪಾದಿತ ಸರಕಿನ ಮೌಲ್ಯ (ಲಕ್ಷ ರೂ. ಗಳಲ್ಲಿ) | ಮಾರಾಟವಾದ ಸರಕಿನ ಮೌಲ್ಯ (ಲಕ್ಷ ರೂ. ಗಳಲ್ಲಿ) | ಪೂರ್ಣಕಾಲಿಕ | ಅರೆ ಕಾಲಿಕ | ಒಟ್ಟು | ಘಟಕಗಳ ಸಂಖ್ಯೆ | ಉತ್ಪಾದಿತ ಸರಕಿನ ಮೌಲ್ಯ (ಲಕ್ಷ ರೂ. ಗಳಲ್ಲಿ) | ಮಾರಾಟವಾದ ಸರಕಿನ ಮೌಲ್ಯ (ಲಕ್ಷ ರೂ. ಗಳಲ್ಲಿ) | ಪೂರ್ಣಕಾಲಿಕ | ಅರೆ ಕಾಲಿಕ | ಒಟ್ಟು |
| ೧ | ರೇಷ್ಮೆ ಖಾದಿ | ೯ | – | – | – | – | – | ೯ | – | – | – | – | – |
| ೨. | ಸುಣ್ಣ / ಖನಿಜಾಧಾರಿತ | ೮ | ೫.೬೦ | ೬.೧೫ | ೩೫ | ೧೦ | ೪೫ | ೫ | ೬೮.೯೮ | ೮೮.೮೪ | ೯೨ | ೬೪ | ೧೫೬ |
| ೩. | ಕುಂಬಾರಿಕೆ | ೪೫ | ೧೫.೨೦ | ೨೦.೧೫ | ೧೦೦ | ೫೨ | ೧೫೨ | ೨೦ | ೨೧೬.೪೭ | ೨೬೬.೩೭ | ೨೨೮ | ೧೦೦ | ೩೨೮ |
| ೪. | ವಸ್ತ್ರೋದ್ಯಮ | ೩೨ | ೨.೫೦ | ೩.೦೦ | ೫೦ | ೧೬ | ೬೬ | ೫ | ೬.೬೩ | ೯.೫೨ | ೧೦ | ೫ | ೧೫ |
| ೫ | ಬೆಂಕಿಕಡ್ಡಿ / ಅಗರುಬತ್ತಿ | ೧೬ | ೮.೦೦ | ೧೦.೨೦ | ೮೫ | ೪೨ | ೧೨೭ | ೮ | ೧೭.೩೫ | ೨೩.೫೭ | ೮೫ | ೧೨೫ | ೨೧೦ |
| ೬ | ಅಖಾದ್ಯ ಎಣ್ಣೆ | – | – | – | – | – | – | ೧ | ೫.೦೨ | ೭.೭೨ | ೩ | ೨ | ೫ |
| ೭ | ಗ್ರಾಮೀಣ ತಾಂತ್ರಿಕತೆ | ೪೩ | ೧೧.೩೨ | ೧೩.೮೦ | ೭೮ | ೫೬ | ೧೩೪ | ೧೨ | ೨೬.೭೯ | ೪೩.೧೩ | ೪೯ | ೨೬ | ೭೫ |
| ೮. | ಬಿದಿರು / ಬೆತ್ತ | ೧೪ | ೭.೩೮ | ೯.೧೨ | ೬೦ | ೩೪ | ೯೪ | ೩ | ೪.೬೨ | ೬.೮೪ | ೨೦ | ೧೦ | ೩೦ |
| ೯. | ದ್ವಿದಳ ದಾನ್ಯ ಪರಿಷ್ಕರಣೆ | ೪೧ | ೪.೩೫ | ೫.೯೮ | ೭೦ | ೪೦ | ೧೧೦ | ೫ | ೫೭.೧೮ | ೮೪.೦೩ | ೪೦ | ೩೦ | ೭೦ |
| ೧೦. | ಚರ್ಮೋದ್ಯೋಗ | ೪೬ | ೪.೭೮ | ೫.೬೩ | ೬೦ | ೨೫ | ೮೫ | ೩೩ | ೨.೫೦ | ೩.೧೨ | ೩೩ | ೨೦ | ೫೩ |
| ೧೧. | ಕೈಕಾಗದ | – | – | – | – | – | – | ೧ | ೧೨.೯೯ | ೧೫.೮೦ | ೬ | ೪ | ೧೦ |
| ೧೨. | ಸೇವಾ | ೨೦ | – | ೪.೮೭ | ೩೦ | ೧೦ | ೪೦ | ೭ | – | ೨.೫೦ | ೧೫ | ೧೦ | ೨೫ |
| ೧೩. | ಪಾಲಿಮಾರ್ ಕೆಮಿಕಲ್ | ೨ | ೨.೯೯ | ೪.೨೬ | ೬ | ೪ | ೧೦ | ೨ | ೨.೯೯ | ೪.೨೬ | ೬ | ೪ | ೧೦ |
| ೧೪. | ಈಚಲು ಚಾಪೆ | ೫೦ | ೧.೦೦ | ೧.೫೦ | ೪೫ | ೨೦ | ೬೫ | ೫೦ | ೧.೫೦ | ೨.೦೦ | ೨೫ | ೪೫ | ೭೦ |

ಕೋಲಾರ ಜಿಲ್ಲೆಯಲ್ಲಿ ೧೯೯೫–೯೬ ಹಾಗೂ ೨೦೦೩–೦೪ರಲ್ಲಿದ್ದಂತೆ, ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ವಿವರವನ್ನು ಕೋಷ್ಟಕ ೫.೧೪ರಲ್ಲಿ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ತಾಲೂಕುವಾರು, ಜನಾಂಗವಾರು ವಿವರಗಳನ್ನು ಕೋಷ್ಟಕ ೫.೧೫ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೫: ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ತಾಲೂಕುವಾರು ಹಾಗೂ ಜನಾಂಗವಾರು ವಿವರ (೨೦೦೩–೦೪ರಲ್ಲಿದ್ದಂತೆ)**

| ಕ್ರ.ಸಂ | ತಾಲೂಕು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತರು | ಇತರರು | ಒಟ್ಟು |
|---|---|---|---|---|---|---|
| ೧ | **ಚಿಕ್ಕಬಳ್ಳಾಪುರ** | ೧೩ | ೧ | ೬ | ೧೯ | ೩೯ |
| ೨ | **ಚಿಂತಾಮಣಿ** | ೫೦ | ೫ | ೨೫ | ೨೭೧ | ೩೫೧ |
| ೩ | **ಬಾಗೇಪಲ್ಲಿ** | ೬ | ೩ | ೧೫ | ೫೯ | ೮೩ |
| ೪ | **ಗುಡಿಬಂಡೆ** | ೨ | – | ೩ | ೮ | ೧೩ |
| ೫ | **ಕೋಲಾರ** | ೫೫ | ೧೫ | ೪೦ | ೨೧೯ | ೩೨೯ |
| ೬ | **ಮಾಲೂರು** | ೫ | ೨ | ೧೨ | ೨೧ | ೪೦ |
| ೭ | **ಮುಳಬಾಗಿಲು** | ೭೦ | ೧೦ | ೨೫ | ೧೧೩ | ೨೧೮ |
| ೮ | **ಶ್ರೀನಿವಾಸಪುರ** | ೨೫ | ೫ | ೧೫ | ೮೪ | ೧೨೯ |
| ೯ | **ಬಂಗಾರಪೇಟೆ** | ೧೫ | ೪ | ೧೨ | ೬೬ | ೯೭ |
| ೧೦ | **ಗೌರಿಬಿದನೂರು** | ೨೦ | ೫ | ೧೫ | ೭೧ | ೧೧೧ |
| ೧೧ | **ಶಿಡ್ಲಘಟ್ಟ** | ೧೦ | ೨ | ೧೦ | ೪೧ | ೬೩ |
| | **ಒಟ್ಟು** | **೨೭೧** | **೫೨** | **೧೭೮** | **೯೭೨** | **೧೪೬೩** |

**ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಧನ ಸಹಾಯ**

ಕೋಲಾರ ಜಿಲ್ಲೆಯ ಖಾದಿ ಗ್ರಾಮೋದ್ಯೋಗ ಮಂಡಲಿಯ ಧನ ಸಹಾಯ ಯೋಜನೆಯ ವ್ಯಾಪ್ತಿಯಲ್ಲಿ ಬರುವ ೧,೨೯೭ ಘಟಕಗಳಿಗೆ, ೧೯೯೫ ರವರೆಗೆ ೪೩೩.೬೩ ಲಕ್ಷ ರೂ.ಗಳ ಸಾಲ ಮತ್ತು ೮.೧೨ ಲಕ್ಷ ರೂ.ಗಳ ಸಹಾಯಧನವನ್ನು (ಒಟ್ಟು ೪೪೧.೭೫ ಲಕ್ಷ ರೂ.) ನೀಡಲಾಗಿತ್ತು. ತಾಲ್ಲೂಕುವಾರು ಧನ ಸಹಾಯ ನೀಡಿದ ವಿವರವನ್ನು ಕೋಷ್ಟಕ ೮.೧೬ರಲ್ಲಿ ನೀಡಿದೆ.

**ಕೋಷ್ಟಕ ೫.೧೬: ಜಿಲ್ಲಾ ಖಾದಿ ಗ್ರಾಮೋದ್ಯೋಗ ಮಂಡಲಿಯು ೧೯೯೫ರವರೆಗೆ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನೀಡಿದ ಸಾಲ ಮತ್ತು ಧನ ಸಹಾಯದ ವಿವರ.**

(ಲಕ್ಷ ರೂಗಳಲ್ಲಿ)

| ಕ್ರ.ಸಂ | ತಾಲ್ಲೂಕು | ಘಟಕಗಳು | ಸಾಲ | ಸಹಾಯಧನ | ಒಟ್ಟು |
|---|---|---|---|---|---|
| ೧ | ೨ | ೩ | ೪ | ೫ | ೬ |
| ೧ | **ಕೋಲಾರ** | ೩೦ | ೭೦.೧೪ | ೩.೦೪ | ೭೩.೧೮ |
| ೨ | **ಚಿಂತಾಮಣಿ** | ೨೬ | ೮೪.೧೦ | ೧.೯೩ | ೮೬.೦೩ |
| ೩ | **ಬಂಗಾರಪೇಟೆ** | ೯೫ | ೪೫.೧೧ | ೦.೨೨ | ೪೫.೩೩ |
| ೪ | **ಮಾಲೂರು** | ೩೦ | ೬೭.೪೬ | ೦.೨೦ | ೬೭.೬೬ |
| ೫ | **ಶ್ರೀನಿವಾಸಪುರ** | ೧೨ | ೩೩.೨೩ | ೧.೪೫ | ೩೪.೬೮ |

ಮುಂದುವರಿದಿದೆ.............

| ೧ | ೨ | ೩ | ೪ | ೫ | ೬ |
|---|---|---|---|---|---|
| ೬ | ಬಾಗೇಪಲ್ಲಿ | ೩೭ | ೧೦.೯೨ | ೦.೧೫ | ೧೧.೦೭ |
| ೭ | ಗೌರಿಬಿದನೂರು | ೯೨ | ೨೧.೮೩ | ೦.೩೨ | ೨೨.೧೫ |
| ೮. | ಚಿಕ್ಕಬಳ್ಳಾಪುರ | ೩೭ | ೯.೦೭ | ೦.೩೩ | ೯.೧೦ |
| ೯. | ಶಿಡ್ಲಘಟ್ಟ | ೫೨ | ೪೮.೦೫ | ೦.೨೮ | ೪೮.೩೩ |
| ೧೦ | ಮುಳಬಾಗಲು | ೨೦೪ | ೩೦.೪೬ | ೦.೫೦ | ೩೦.೯೬ |
| ೧೧ | ಗುಡಿಬಂಡೆ | ೧೩ | ೩.೨೬ | – | ೩.೨೬ |
| | ಒಟ್ಟು | ೧೫೭ | ೪೫೩.೬೩ | ೮.೧೨ | ೪೪೧.೭೫ |

ಕೋಲಾರದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸಮೂಹ ಬ್ಯಾಂಕಿಂಗ್ ಸಾಲ ನಿಧಿ ಯೋಜನೆಯಡಿ ೧೯೯೯ರವರೆಗೆ ೧೬೬ ಘಟಕಗಳಿಗೆ ೭೩೨.೫೫ ಲಕ್ಷ ರೂ.ಗಳ ಸಾಲವನ್ನು, ೨೨೩.೭೪ ಲಕ್ಷ ರೂಗಳ ಸಹಾಯ ಧನವನ್ನೂ ಕೊಟ್ಟಿದೆ. ಇದರ ವಿವರವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೭: ಸಮೂಹ ಬ್ಯಾಂಕಿಂಗ್ ಸಾಲ ನಿಧಿಯ ಯೋಜನೆಯಡಿ ವಿತರಣೆ**

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ | ತಾಲ್ಲೂಕು | ಘಟಕಗಳು | ಸಾಲ | ಸಹಾಯಧನ | ಒಟ್ಟು |
|---|---|---|---|---|---|
| ೧ | ಕೋಲಾರ | ೯ | ೨೫.೪೭ | ೮.೭೯ | ೩೪.೨೬ |
| ೨ | ಚಿಂತಾಮಣಿ | ೫೫ | ೨೫೦.೭೫ | ೬೯.೬೩ | ೩೨೦.೩೮ |
| ೩ | ಬಂಗಾರಪೇಟೆ | ೨ | ೨೬.೩೯ | ೦.೫೩ | ೨೦.೯೨ |
| ೪ | ಮಾಲೂರು | ೧೦ | ೮೦.೫೬ | ೨೫.೩೭ | ೧೦೫.೯೩ |
| ೫ | ಶ್ರೀನಿವಾಸಪುರ | ೮ | ೧೭.೯೧ | ೬.೯೧ | ೨೪.೮೨ |
| ೬ | ಬಾಗೇಪಲ್ಲಿ | ೪೬ | ೧೭೪.೨೩ | ೬೫.೮೪ | ೨೪೦.೦೭ |
| ೭ | ಗೌರಿಬಿದನೂರು | ೯ | ೪೫.೩೯ | ೧೬.೬೯ | ೬೨.೦೮ |
| ೮. | ಚಿಕ್ಕಬಳ್ಳಾಪುರ | ೨ | ೨೬.೭೬ | ೬.೭೩ | ೩೩.೪೯ |
| ೯. | ಶಿಡ್ಲಘಟ್ಟ | ೧೧ | ೫೩.೨೯ | ೧೧.೨೧ | ೬೪.೫೦ |
| ೧೦ | ಮುಳಬಾಗಲು | ೧೪ | ೩೧.೮೦ | ೧೨.೪೪ | ೪೩.೮೦ |
| ೧೧ | ಗುಡಿಬಂಡೆ | ೧೩ | ೩.೨೬ | – | ೩.೨೬ |
| | ಒಟ್ಟು | ೧೬೬ | ೭೩೨.೫೫ | ೨೨೩.೭೪ | ೯೫೬.೨೯ |

ಕೋಲಾರ ಜಿಲ್ಲೆಯ ಖಾದಿ ಗ್ರಾಮೋದ್ಯೋಗ ಮಂಡಲಿಯು ಕೆಲವು ಕ್ಷೇತ್ರಗಳನ್ನು ಆಯ್ದುಕೊಂಡು ಅವುಗಳಿಗೆ ಸಾಲದ ವ್ಯವಸ್ಥೆ ಹಾಗೂ ಧನ ಸಹಾಯವನ್ನು ಮಾಡಿದೆ. ೨೦೦೩ರ ಸಾಲಿನಲ್ಲಿ ಈ ಮಂಡಲಿಯು ನೀಡಿದ ಸಹಾಯದಿಂದ ಕೆಲವು ಉದ್ಯಮಗಳು ಉತ್ಪಾದನೆಯಲ್ಲಿ ತೊಡಗಿ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿವೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಧನ ಸಹಾಯ ಸ್ವರೂಪ ಯೋಜನೆ ಮತ್ತು ಸಮೂಹ ಬ್ಯಾಂಕ್ ಸಾಲ ಯೋಜನೆಗಳ ವ್ಯಾಪ್ತಿಯಲ್ಲಿ ನೆರವನ್ನು ನೀಡಿದೆ. ಹೀಗೆ ಧನ ಸಹಾಯವನ್ನು ಪಡೆದ ಕ್ಷೇತ್ರಗಳ ನಿರ್ವಹಣೆಯ ವಿವರಗಳನ್ನು ಕೋಷ್ಟಕ ೫.೧೮ರಲ್ಲಿ ನೀಡಿದೆ.

**ಕೋಷ್ಟಕ ೫.೧೮** (ಲಕ್ಷ ರೂ.ಗಳಲ್ಲಿ)

| ಕ್ರಸಂ | ಉದ್ಯಮಗಳು | ಘಟಕಗಳು | ಉತ್ಪಾದಿತ ಸರಕಿನ ಮೌಲ್ಯ | ಮಾರಾಟವಾದ ಸರಕಿನ ಮೌಲ್ಯ | ಉದ್ಯೋಗ ರಚನೆ ಸಂಖ್ಯೆಗಳಲ್ಲಿ |
|---|---|---|---|---|---|
| ೧ | ಅಗರಬತ್ತಿ | ೪ | ೩.೦೦ | ೩.೯೫ | ೨೦ |
| ೨ | ಖನಿಜಾಧಾರಿತ ಉದ್ದಿಮೆ | ೩ | ೧.೨೫ | ೧.೭೫ | ೧೫ |
| ೩ | ಬಿದಿರು / ಬೆತ್ತ | ೧ | ೦.೫೦ | ೦.೭೫ | ೧೫ |
| ೪ | ಪಾಲಿಮರ್ ಮತ್ತು ಕೆಮಿಕಲ್ಸ್ | ೨ | ೦.೭೫ | ೧.೦೦ | ೫ |
| ೫ | ಪಿ.ಸಿ.ಸಿ.ಐ | ೨ | ೦.೫೦ | ೦.೭೫ | ೨ |
| ೬ | ಟ್ರೈಲರಿಂಗ್ | ೪ | ೦.೩೫ | ೦.೪೮ | ೬ |
| ೭ | ಬಡಗಿ | ೩ | ೩.೨೫ | ೪.೫೦ | ೧೭ |
| ೮ | ಸೇವೆಗಳು | ೨ | – | – | ೩ |
| | **ಒಟ್ಟು** | **೨೧** | **೯.೬೦** | **೧೩.೧೮** | **೮೩** |

**ಸಮೂಹ ಬ್ಯಾಂಕ್ ಸಾಲ ಯೋಜನೆ**

| | | | | | |
|---|---|---|---|---|---|
| ೧ | ಇಟ್ಟಿಗೆ ಮತ್ತು ಟೇಬಲ್ ಮೌಲ್ಡ್ | ೧೫ | ೨೦೦.೧೦ | ೨೬೫.೨೫ | ೨೫೦ |
| ೨ | ಅಗರಬತ್ತಿ | ೫ | ೮.೨೮ | ೧೦.೬೫ | ೭೫ |
| ೩ | ಖನಿಜಾಧಾರಿತ ಜಲ್ಲಿ ಕಲ್ಲು ತಯಾರಿಕೆ ಕಲ್ಲಿಗೆ ಪಾಲಿಷ್ ತಯಾರಿಕೆ | ೩ | ೫೦.೨೫ | ೭೮.೧೦ | ೭೬ |
| ೪. | ಬಿದಿರು / ಬೆತ್ತ | ೧ | ೨.೫೦ | ೩.೧೫ | ೬ |
| ೫ | ಪಿ.ಸಿ.ಸಿ.ಐ | ೪ | ೬೦.೦೦ | ೭೦.೨೫ | ೩೫ |
| ೬ | ಗ್ರಾಮೀಣ ಇಂಜಿನಿಯರಿಂಗ್ | ೨ | ೨.೦೦ | ೨.೫೮ | ೧೦ |
| ೭ | ಗ್ರಾಮೀಣ ಎಣ್ಣೆ | ೧ | ೧.೫೦ | ೨.೦೦ | ೩ |
| ೮ | ಸಿದ್ದಪಡಿಸಿದ ಉಡುಪು | ೧ | ೪.೦೦ | ೬.೦೦ | ೫ |
| ೯ | ಬಡಗಿ | ೩ | ೧೭.೦೦ | ೨೦.೮೫ | ೧೫ |
| ೧೦ | ಇತರ ಸೇವೆ | ೪ | – | – | ೮ |
| | **ಒಟ್ಟು** | **೩೯** | **೩೪೦.೬೩** | **೪೮೩.೮೩** | **೪೮೩** |

ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಇಟ್ಟಿಗೆ ಮತ್ತು ಟೇಬಲ್ ಮೌಲ್ಡ್ ಇಟ್ಟಿಗೆ ಮಾಡುವ ಘಟಕಗಳಿಗೆ ಎರಡು ಕೋಟಿ ರೂ.ಗಳು ಸಮೂಹ ಬ್ಯಾಂಕ್ ಸಾಲ ನಿಧಿಯಿಂದ ಸಾಲ ದೊರಕಿದೆ. ರಾಷ್ಟ್ರೀಯ ಬ್ಯಾಂಕುಗಳು ಸಂಯುಕ್ತವಾಗಿ ನೀಡಿರುವ ಸಾಲದಿಂದ ಜಲ್ಲಿಕಲ್ಲು ಮಾಡುವ ಘಟಕ ಹಾಗೂ ಪಿ.ಸಿ.ಪಿ.ಐ ವಸ್ತುಗಳನ್ನು ತಯಾರಿಸುವ ಘಟಕಗಳಿಗೆ ಕ್ರಮವಾಗಿ ೫೦ ಮತ್ತು ೬೦ ಲಕ್ಷ ರೂ. ಸಾಲದ ನೆರವು ಸಂದಾಯವಾಗಿದೆ. ಈ ಘಟಕಗಳಿಂದ ಹೆಚ್ಚು ಜನರಿಗೆ ಉದ್ಯೋಗವೂ ಲಭ್ಯವಾಗಿದೆ.

ಈ ಯೋಜನೆಯ ವ್ಯಾಪ್ತಿಯಲ್ಲಿ ೩೯ ಗ್ರಾಮ ಕೈಗಾರಿಕಾ ಘಟಕಗಳಿಗೆ ೩೪೦ ಲಕ್ಷ ರೂ. ಸಾಲ ನೆರವು ದೊರಕಿದೆ. ಈ ಘಟಕಗಳು ೪೫೩ ಲಕ್ಷ ರೂ.ಗಳ ವ್ಯಾಪಾರವನ್ನು ಮಾಡಿ ೪೮೩ ಜನರಿಗೆ ಉದ್ಯೋಗ ಲಭ್ಯವಾಗುವಂತೆ ಮಾಡಿವೆ.

ಜಿಲ್ಲೆಯ ಖಾದಿ ಗ್ರಾಮೋದ್ಯೋಗದ ಅಧಿಕಾರಿಗಳ ಪ್ರಕಾರ ಸಹಾಯ ಧನ ಪಡೆದ ನೂರಾರು ವ್ಯಕ್ತಿಗಳು, ಘಟಕಗಳು ಮತ್ತು ಸಂಘಗಳು ನಷ್ಟಕ್ಕೆ ತುತ್ತಾಗಿ ಮುಚ್ಚಿ ಹೋಗಿವೆ. ಅವುಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನವೂ ವಿಫಲವಾಗಿದೆ.

ಕೋಲಾರ ಜಿಲ್ಲೆಯು ರಾಜಧಾನಿ ಬೆಂಗಳೂರಿಗೆ ಸಮೀಪದಲ್ಲಿದ್ದರೂ, ಜಿಲ್ಲೆಯ ಕೈಗಾರಿಕಾಭಿವೃದ್ಧಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರಭಾವ ಬೀರಿಲ್ಲ. ಜಿಲ್ಲೆಯ ಪ್ರಮುಖ ಕೈಗಾರಿಕಾ ಚಟುವಟಿಕೆಗಳೆಂದರೆ, ರೇಷ್ಮೆ ನೂಲು ತೆಗೆಯುವುದು, ಹುರಿ ಮಾಡುವುದು, ರೇಷ್ಮೆ ವಸ್ತುಗಳನ್ನು ನೇಯುವುದು, ಟೇಬಲ್ ಮೌಲ್ಡ್ ಇಟ್ಟಿಗೆ ತಯಾರಿಕೆ, ಜಲ್ಲಿಕಲ್ಲು ತಯಾರಿಕೆ, ಗ್ರಾನೈಟು ಶಿಲೆಗಳನ್ನು ಕತ್ತರಿಸಿ ಪಾಲಿಷ್ ಮಾಡುವುದು, ಶೇಂಗಾ ಬೀಜದಿಂದ ಎಣ್ಣೆ ತೆಗೆಯುವದು, ಭತ್ತ ಮತ್ತು ಹಿಟ್ಟಿನ ಗಿರಣಿ, ಇತ್ಯಾದಿಗಳು.

## ಕರಕುಶಲ ಕೈಗಾರಿಕೆ

ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಕುಶಲ ಕರ್ಮಿಗಳು ನೆಲೆಸಿದ್ದು ವಂಶಪಾರಂಪರ್ಯವಾಗಿ ಬಂದ ಕುಶಲ ಕೈಗಾರಿಕೆಗಳನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಕಂಚಿನ ಮತ್ತು ಕಲ್ಲಿನ ವಿಗ್ರಹಗಳ ಕೆತ್ತನೆಗೆ ಮಾಲೂರು ತಾಲ್ಲೂಕಿನ ಶಿವಾರಪಟ್ಟಣ ಮತ್ತು ಅದರ ನೆರೆಯ ಹಳ್ಳಿಗಳು ಪ್ರಸಿದ್ಧವಾಗಿವೆ. ನೂರಾರು ಶಿಲ್ಪಿಗಳು ಶಿಲ್ಪಕಲಾ ವೃತ್ತಿಯನ್ನೇ ನಡೆಸಿಕೊಂಡು ಬರುತ್ತಿದ್ದಾರೆ. ಇವರು ತಯಾರಿಸಿದ ವಿಗ್ರಹಗಳಿಗೆ ಬೆಂಗಳೂರು, ತುಮಕೂರು, ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಬೇಡಿಕೆ ಇದೆ. ಈ ಜಿಲ್ಲೆಯಲ್ಲಿ ೧೯೯೪ ರಲ್ಲಿ ಕೈಕೊಂಡ ಗ್ರಾಮಾಂತರ ಕರಕುಶಲಗಾರರ ಸಮೀಕ್ಷೆಯ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಿದೆ.

**ಕೋಷ್ಟಕ ೫.೧೯: ಜಿಲ್ಲೆಯ ಕುಶಲ ಕರ್ಮಿಗಳ ವಿವರ**

| | ಕುಶಲಕರ್ಮಿಗಳ ವಿಭಾಗ | ಕುಶಲಕರ್ಮಿಗಳ ಕುಟುಂಬಗಳು | ಕುಶಲಕರ್ಮಿಗಳ ಸಂಖ್ಯೆ |
|---|---|---|---|
| ೧ | ಬಡಗಿಗಳು | ೫೭೫ | ೮೭೮ |
| ೨ | ತೆಂಗಿನನಾರು ನೇಯ್ಗೆ | ೧೭೪ | ೫೪೮ |
| ೩ | ಚಿನ್ನ, ಬೆಳ್ಳಿ, ಅಕ್ಕಸಾಲಿಗರು | ೬೫ | ೧೫೩ |
| ೪ | ಕುಂಬಾರರು | ೫೬೧ | ೧೩೭೮ |
| ೫ | ದರ್ಜಿಗಳು | ೩೫೯೭ | ೭೯೧೩ |
| ೬ | ಬೆತ್ತದ ಕರ್ಮಿಗಳು | ೨೧೦ | ೪೯೩ |
| ೭ | ಬಣ್ಣ ಹಾಕುವ ಕರ್ಮಿಗಳು | ೧೧ | ೨೪ |
| ೮ | ಕುರಿ ಉಣ್ಣೆಯನ್ನು ತೆಗೆಯುವವರು | ೩೯ | ೭೭ |
| ೯ | ಲೋಹ ಕೆಲಸ | ೧೭ | ೬೦ |
| ೧೦ | ಕಮ್ಮಾರರು | ೧೪೧ | ೪೬೪ |
| ೧೧ | ಹತ್ತಿ ನೇಯ್ಗೆ | ೧೨೧ | ೪೨೪ |
| ೧೨ | ಉಣ್ಣೆ ಬಟ್ಟೆ ನೇಯ್ಗೆಯವರು | ೧೦ | ೩೩ |
| ೧೩ | ತೆಂಗಿನನಾರು ಸಾಮಾನು ತಯಾರಕರು | ೧೧೧ | ೩೩೫ |
| ೧೪ | ಬೊಂಬು ಮತ್ತು ಬೆತ್ತದ ಕೆಲಸಗಾರರು | ೧೭೮ | ೩೬ |

ಮುಂದುವರಿದಿದೆ.............

| | ಕುಶಲಕರ್ಮಿಗಳ ವಿಭಾಗ | ಕುಶಲಕರ್ಮಿಗಳ ಕುಟುಂಬಗಳು | ಕುಶಲಕರ್ಮಿಗಳ ಸಂಖ್ಯೆ |
|---|---|---|---|
| ೧೫ | ಜೇನು ಸಾಗಣೆ | ೯ | ೧೫ |
| ೧೬ | ರೇಷ್ಮೆದಾರ ನೂಲುವವರು ಮತ್ತು ಹುರಿಮಾಡುವವರು | ೨೯೬೩ | ೩೧೯೨ |
| ೧೭ | ಕಲ್ಲು ಕೆತ್ತನೆ ಮತ್ತು ವಿಗ್ರಹ ಶಿಲ್ಪಿಗಳು | ೧೩೬೪ | ೩೪೯೫ |
| ೧೮ | ಧೂಪದ ಕಡ್ಡಿ | ೬೩೦೦ | ೧೪೪೦ |
| ೧೯ | ಅಗಸರು | ೧೯೭ | ೨೪೪ |
| ೨೦ | ಹೊಸೈರಿ | ೬೦ | ೮೫ |
| | ಒಟ್ಟು | ೧೭೬೨೩ | ೬೪,೮೯೦ |

ಕರಕುಶಲಗಾರರ ಉದ್ಯಮಗಳೆಲ್ಲಾ ಗೃಹ ಕೈಗಾರಿಕೆಗಳೇ ಆಗಿವೆ. ಕೆಲವು ಕುಶಲಕರ್ಮಿಗಳು ತಮ್ಮದೇ ಆದ ಸಹಕಾರ ಸಂಘವನ್ನು ಸ್ಥಾಪಿಸಿ ಆ ಮೂಲಕ ತಮಗೆ ಸಂಬಂಧಪಟ್ಟ ಕೈಗಾರಿಕೆಗಳಿಗೆ ಸಾಲದ ನೆರವು, ವಸ್ತುಗಳ ಮಾರಾಟದಲ್ಲಿ ಸಹಕಾರ ಮುಂತಾದ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ. ಶಿವಾರ ಪಟ್ಟಣದ ಶಿಲ್ಪಕಲಾ ಸಹಕಾರ ಸಂಘ, ಕುಶಲಕರ್ಮಿಗಳಿಂದಲೇ ಸ್ಥಾಪಿತವಾಗಿದ್ದು, ಕುಶಲಕರ್ಮಿಗಳ ಅಭಿವೃದ್ಧಿಗೆ ಸಹಾಯಕವಾಗಿದೆ. ಹಾಗೆಯೇ ಕಂಬಳಿ ನೇಕಾರರ ಸಹಕಾರ ಸಂಘ, ಕೈಮಗ್ಗ ನೇಕಾರರ ಸಹಕಾರ ಸಂಘಗಳು ಕಸುಬುದಾರರು ತಮ್ಮ ವೃತ್ತಿಯನ್ನು ಲಾಭದಾಯಕವಾಗಿ ಮಾಡಲು ಸಹಾಯಕವಾಗಿದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ವೃತ್ತಿಪರವಾದ ಸಹಕಾರ ಸಂಘಗಳು ರಚನೆಯಾಗಿವೆ. ಆದರೆ ಶೇ.೬೦ರಷ್ಟು ಸಹಕಾರ ಸಂಘಗಳು ಮುಚ್ಚಲ್ಪಟ್ಟಿವೆ. ಕುಶಲ ಕರ್ಮಿಗಳಿಗೆ ಮತ್ತು ಅವರಿಗೆ ಸಂಬಂಧಿಸಿದ ವೃತ್ತಿಗಳನ್ನು ದಕ್ಷತೆಯಿಂದ ಮಾಡುವುದಕ್ಕೆ ಜಿಲ್ಲಾ ಕೈಗಾರಿಕಾ ಸಂಘವು ತರಬೇತಿ ಕಾರ್ಯಕ್ರಮವನ್ನು ಪ್ರತಿ ವರ್ಷವೂ ನಡೆಸುತ್ತಿದೆ. ಬಡಗಿಗಳಿಗೆ, ದರ್ಜಿಗಳಿಗೆ, ರೇಷ್ಮೆ ನೇಕಾರರಿಗೆ, ವಿದ್ಯುತ್ ಮೋಟಾರು ಕೆಲಸಗಾರರಿಗೆ, ಜನರಲ್ ಇಂಜಿನಿಯರಿಂಗ್ ಕೆಲಸಗಾರರಿಗೆ ಹಾಗೂ ಕಂಪ್ಯೂಟರ್ ಕಲಿಯುವವರಿಗೆ ಮೂರು ರಿಂದ ಆರು ತಿಂಗಳ ತರಬೇತಿಯನ್ನು ನೀಡುತ್ತದೆ. ವರ್ಷಕ್ಕೆ ೨೦೦ ಕಸುಬುದಾರರಿಗೆ ಮಾಹೆಯಾನ ೨೦೦ ರೂಗಳ ನೆರವನ್ನು ಕೊಟ್ಟು ವೃತ್ತಿಪರ ಕೈಗಾರಿಕೆಗಳ ಅಭಿವೃದ್ಧಿಗೆ ಈ ಇಲಾಖೆಯು ಮಾರ್ಗದರ್ಶನ ನೀಡುತ್ತಿದೆ. ಸಾಂಪ್ರದಾಯಿಕ ವೃತ್ತಿಯನ್ನು ಉತ್ತಮವಾಗಿ ಮುಂದುವರಿಸಿಕೊಂಡು ಬರುತ್ತಿರುವ ಕುಶಲ ಕರ್ಮಿಗಳಿಗೆ ಒಂದು ಸಾವಿರ ರೂ. ಮೌಲ್ಯದ ಉಪಕರಣಗಳ ಪೆಟ್ಟಿಗೆಯನ್ನು ಕೊಡುತ್ತಿದೆ.

### ಕೈಮಗ್ಗ ಕೈಗಾರಿಕೆ

ದೇಶದ ಬಟ್ಟೆ ಉತ್ಪಾದನೆಯಲ್ಲಿ ಕೈಮಗ್ಗ ಕ್ಷೇತ್ರದ ಪಾತ್ರ ಅಮೂಲ್ಯವಾದುದು. ಲಕ್ಷಾಂತರ ನೇಕಾರರಿಗೆ ಪೂರ್ಣಕಾಲದ ಉದ್ಯೋಗವನ್ನು ಕೊಡುತ್ತಿರುವುದೇ ಕೈಮಗ್ಗದ ಕೈಗಾರಿಕೆ. ಭಾರತೀಯ ನೇಕಾರ ಪರಂಪರಾನುಗತವಾಗಿ ನೇಯ್ಗೆಯನ್ನು ಮಾಡುತ್ತಿರುವುದರಿಂದ ನೇಯುವ ಕುಶಲತೆಯಲ್ಲಿ ಪ್ರಾವೀಣ್ಯತೆ ಪಡೆದಿದ್ದಾನೆ. ಇದರಿಂದಾಗಿ ಭಾರತದ ಕೈಮಗ್ಗದ ವಸ್ತುಗಳಿಗೆ ವಿದೇಶಗಳಲ್ಲಿ ಅಸಾಧಾರಣ ಬೇಡಿಕೆ ಇದೆ. ಗ್ರಾಮಾಂತರ ಪ್ರದೇಶದಲ್ಲಿ ನೆಲಸಿರುವ ನೇಕಾರರಿಗೆ ಬಟ್ಟೆ ನೇಯ್ಗೆಯೇ ಮುಖ್ಯ ಕಸುಬಾಗಿದೆ, ವ್ಯವಸಾಯ ಉಪ ಕಸುಬಾಗಿದೆ. ಕೈಮಗ್ಗ ಕೈಗಾರಿಕೆಯ ಅಭಿವೃದ್ಧಿಯಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆಸಿರುವ ಶೇ.೩೦ ರಷ್ಟು ನೇಕಾರರ ಜೀವನಮಟ್ಟವೂ ಸುಧಾರಿಸಿದ್ದು, ದೇಶದ ಆರ್ಥಿಕ ಪ್ರಗತಿಗೂ ಸಹಕಾರಿಯಾಗಿದೆ. ಕೋಲಾರ ಜಿಲ್ಲೆಯಲ್ಲಿ ೧೯೬೭ರ ವೇಳೆಗೆ ೯,೮೬೫ ನೇಕಾರರು ಕೈಮಗ್ಗಗಳಿಂದ ಬಟ್ಟೆ ನೇಯುವ ಉದ್ಯೋಗದಲ್ಲಿ ತೊಡಗಿದ್ದರು. ಹತ್ತಿ ನೂಲನ್ನು ತಮಿಳುನಾಡು ಮತ್ತು ದಾವಣಗೆರೆಯ ನೂಲಿನ ಗಿರಣಿಗಳಿಂದ ಖರೀದಿಸಿ ಬಣ್ಣ ಹಾಕಿ, ಬಟ್ಟೆಯನ್ನು ನೇಯ್ದು, ಮಾರಾಟ ಮಾಡುತ್ತಿದ್ದರು. ಈ ಕೈಗಾರಿಕೆಯ ಉತ್ತೇಜನಕ್ಕಾಗಿ ಕೈಮಗ್ಗದ ಸಹಕಾರ ಸಂಘಗಳೂ ಹೆಚ್ಚು ಹೆಚ್ಚಾಗಿ ಸ್ಥಾಪನೆಯಾದವು. ಆದರೆ ಹತ್ತಾರು ವರ್ಷಗಳಿಂದೀಚೆಗೆ ಹತ್ತಿ ನೂಲಿನಿಂದ ಬಟ್ಟೆಯನ್ನು ತಯಾರಿಸುವುದು ಬಹಳವಾಗಿ ಕಡಿಮೆಯಾಗಿದೆ.

ಮುಳಬಾಗಿಲಿನ ತಾಯಲೂರಿನಲ್ಲಿ ೨೦ ಕುಟುಂಬಗಳು ಕೈಮಗ್ಗಗಳಿಂದ ಲುಂಗಿಗಳನ್ನು ನೇಯುತ್ತಿವೆ. ಚಿಂತಾಮಣಿ ತಾಲ್ಲೂಕಿನ ಕತ್ತರಿಗುಪ್ಪ ಗ್ರಾಮದಲ್ಲಿ ೩೦ ಕೈಮಗ್ಗದ ಕುಟುಂಬಗಳು ಸಾಧಾರಣವಾಗಿ ಬಿಳಿ ಬಟ್ಟೆಯನ್ನು ನೇಯುತ್ತಿವೆ. ಕರ್ನಾಟಕ ರಾಜ್ಯದ ಕೈಮಗ್ಗ ಸಹಕಾರ ಸಂಘಗಳ ಕೇಂದ್ರ ಕಛೇರಿಯು ಈ ನೇಕಾರರಿಗೆ ನೂಲನ್ನು ಸರಬರಾಜು ಮಾಡುತ್ತಿದೆ. ಉಳಿದ ಕಡೆಗಳಲ್ಲಿ ರೇಷ್ಮೆ ಬಟ್ಟೆಯ ಉತ್ಪಾದನೆ ನಡೆಯುತ್ತಿದೆ. ರೇಷ್ಮೆ ನೇಕಾರರು ತಮ್ಮ ತಮ್ಮ ಹಳ್ಳಿಗಳಲ್ಲಿ ನೇಕಾರರ ಸಹಕಾರ ಸಂಘಗಳನ್ನು ಸ್ಥಾಪಿಸಿ, ಅವುಗಳ ಸಹಾಯದಿಂದ ರೇಷ್ಮೆ ಸೀರೆಗಳನ್ನು ನೇಯುತ್ತಿದ್ದಾರೆ. ಶ್ರೀನಿವಾಸಪುರ ತಾಲ್ಲೂಕಿನ ಗೌನಿಪಲ್ಲಿಯಲ್ಲಿ ಚೌಡೇಶ್ವರಿ ರೇಷ್ಮೆ ಕೈಮಗ್ಗ ಸಹಕಾರ ಸಂಘವನ್ನು ಸರ್ಕಾರದ ನೆರವಿನಿಂದ ನೇಕಾರರು ಸ್ಥಾಪಿಸಿದ್ದಾರೆ. ಈ ಸಂಘದ ಆಶ್ರಯದಲ್ಲಿ ೨೫ ಕುಟುಂಬಗಳು ರೇಷ್ಮೆ ಸೀರೆಯನ್ನು ನೇಯಿಸುತ್ತಿವೆ. ನಂಬಿವಾರಳ್ಳಿ ಗ್ರಾಮದಲ್ಲಿ ವಿದ್ಯುತ್ ಮಗ್ಗಗಳಿಂದ ಸಾದಾ ರೇಷ್ಮೆ ಬಟ್ಟೆಯ ಉತ್ಪಾದನೆಯನ್ನು ಸುಮಾರು ೩೦ ಕುಟುಂಬಗಳು ಮಾಡುತ್ತಿವೆ. ಶಿಡ್ಲಘಟ್ಟ ತಾಲೂಕಿನ ನಾಗಮಂಗಲ ಗ್ರಾಮದಲ್ಲಿ ೨೦ ಕುಟುಂಬಗಳು ವಿದ್ಯುತ್ ಚಾಲಿತ ಮಗ್ಗಗಳಿಂದ ಸಾದಾ ರೇಷ್ಮೆ ಬಟ್ಟೆಯನ್ನೂ, ಮಳ್ಳೂರು ಗ್ರಾಮದಲ್ಲಿ ೨೦ ಕುಟುಂಬಗಳು ಕೈಮಗ್ಗದಿಂದ ರೇಷ್ಮೆ ಸೀರೆಯನ್ನು ನೇಯುತ್ತಿವೆ. ಬೈಯಪನಹಳ್ಳಿಯಲ್ಲಿ ೫೦ ಕುಟುಂಬಗಳು ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳಿಂದ ರೇಷ್ಮೆ ಸೀರೆ, ಸಾದಾ ಬಟ್ಟೆಗಳನ್ನು ನೇಯುತ್ತಿವೆ.

ಬಾಗೇಪಲ್ಲಿ ತಾಲ್ಲೂಕಿನ ಕನ್ನಂಪಲ್ಲಿ, ಗುಂಡ್ಲಪಲ್ಲಿ, ಗ್ರಾಮಗಳಲ್ಲಿ ಸುಮಾರು ೬೦ ಕುಟುಂಬಗಳು ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳಲ್ಲಿ ರೇಷ್ಮೆ ಬಟ್ಟೆಯನ್ನು ನೇಯುತ್ತಿವೆ. ಚಿಂತಾಮಣಿ ತಾಲ್ಲೂಕಿನ ವೆಂಕಟಗಿರಿ ಪೇಟೆ, ಚೊಕ್ಕಹಳ್ಳಿ, ನಾಯನಹಳ್ಳಿಗಳಲ್ಲಿ ಕ್ರಮವಾಗಿ ನಾಲ್ಕು ಕುಟುಂಬಗಳು ವಿದ್ಯುತ್‌ಚಾಲಿತ ಮಗ್ಗಗಳಿಂದ, ಐದು ಕುಟುಂಬಗಳು ಕೈಮಗ್ಗಗಳಿಂದ ಹಾಗೂ ಎಂಟು ಕುಟುಂಬಗಳು ಕೈಮಗ್ಗಗಳಿಂದ ಸಾದಾ ರೇಷ್ಮೆ ಬಟ್ಟೆ ಮತ್ತು ಸೀರೆಗಳನ್ನು ಉತ್ಪಾದಿಸುತ್ತಿವೆ. ಈ ಊರುಗಳಲ್ಲಿ ನೇಕಾರರು ಸಹಕಾರ ಸಂಘಗಳನ್ನು ಸ್ಥಾಪಿಸಿ, ಅವುಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ನೇಕಾರರು ರೇಷ್ಮೆಯನ್ನು ಸಹಕಾರ ಸಂಘಗಳ ಮೂಲಕ ಕೊಂಡು ಉತ್ಪಾದಿತ ವಸ್ತ್ರಗಳನ್ನು ಸಹಕಾರ ಸಂಘಗಳ ಮೂಲಕ ಮಾರುತ್ತಾರೆ. ಬಣ್ಣ ಹಾಕುವ ಕೆಲಸವೂ ಕೂಡ ಗ್ರಾಮಗಳಲ್ಲೇ ನಡೆಯುತ್ತದೆ. ಕೋಲಾರ ತಾಲ್ಲೂಕಿನ ರಾಮನಗರದಲ್ಲಿ ನೇಕಾರರು ಸ್ವಂತವಾಗಿಯೇ ವಿದ್ಯುತ್ ಚಾಲಿತ ಮಗ್ಗಗಳನ್ನು ಸ್ಥಾಪಿಸಿ ಬಿಳಿಯ ಬಟ್ಟೆಯನ್ನು ಉತ್ಪಾದಿಸಿ ಮಾರಾಟ ಮಾಡುತ್ತಾರೆ. ಕುಂಬಾರಹಳ್ಳಿಯಲ್ಲಿ ರೇಷ್ಮೆ ಸೀರೆ, ಬ್ಯಾಲಹಳ್ಳಿಯಲ್ಲಿ ಸಾದಾ ಬಟ್ಟೆ ಮತ್ತು ಬೆಳ್ಳಂಬಳ್ಳಿಯಲ್ಲಿ ರೇಷ್ಮೆ ಸೀರೆಯನ್ನು ಉತ್ಪಾದಿಸಲಾಗುತ್ತಿದೆ. ಶ್ರೀನಿವಾಸಪುರ ತಾಲೂಕಿನ ದೇವಲಪಳ್ಳಿ, ನಾಗದೇವನಹಳ್ಳಿ ಮತ್ತು ಆವಲಕುಪ್ಪಂಗಳಲ್ಲಿ ರೇಷ್ಮೆ ಸೀರೆಗಳನ್ನು ನೇಯಲಾಗುತ್ತಿದೆ.

## ಗೃಹ ಕೈಗಾರಿಕೆ

ಕಲ್ಲೂಡಿ ಹಪ್ಪಳಕ್ಕೆ ಪ್ರಸಿದ್ಧವಾದ ಕಲ್ಲೂಡಿ ಗ್ರಾಮ (ಗೌರಿಬಿದನೂರು ತಾ॥)ದಲ್ಲಿ ೬೫೦ ಕುಟುಂಬಗಳಿದ್ದು, ಇವರಲ್ಲಿ ಸುಮಾರು ೪೦೦ಕ್ಕೂ ಹೆಚ್ಚು ಕುಟುಂಬಗಳು ಹಪ್ಪಳ, ಸಂಡಿಗೆ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅಕ್ಕಿ ಹಪ್ಪಳ, ರಾಗಿ ಹಪ್ಪಳ, ಕಲರ್ ಹಪ್ಪಳ, ಕಲರ್ ಸಂಡಿಗೆ ಹಾಗೂ ಪೇಣಿಗಳನ್ನು ತಯಾರಿಸುತ್ತಿದ್ದಾರೆ. ಇದಕ್ಕಾಗಿ ತಮ್ಮ ಕುಟುಂಬದ ಸದಸ್ಯರ ಜೊತೆಗೆ ಕೂಲಿಯವರನ್ನು ನೇಮಕಮಾಡಿಕೊಂಡು, ಒಂದು ಸೀರೆಯ ಮೇಲೆ ಹಪ್ಪಳ ಹಾಕಲು ಐದು ರೂಪಾಯಿಗಳನ್ನು ಕೂಲಿಯಾಗಿ ನೀಡುತ್ತಾರೆ. ಒಂದು ಸೀರೆಯ ಮೇಲೆ ೧೦೦೦ ದಿಂದ ೧೫೦೦ ಹಪ್ಪಳ ಹಾಕಬಹುದು. ಈ ಗ್ರಾಮದಲ್ಲಿ ದಿನಕ್ಕೆ ಸು. ೬೦,೦೦೦ ಹಪ್ಪಳ ತಯಾರಿಸುತ್ತಿದ್ದು, ಮಾರುಕಟ್ಟೆಗಾಗಿ ಬೆಂಗಳೂರು, ಮೈಸೂರಿನ ನಂತಹ ಪಟ್ಟಣಗಳನ್ನು ಅವಲಂಬಿಸಿದ್ದಾರೆ. ಬೆಳಗಿನ ಜಾವವೇ ಬೆಂಗಳೂರು ನಗರಕ್ಕೆ ಬಂದು ಸಂಜೆಯವರೆಗೂ ೧೦೦ ಹಪ್ಪಳಕ್ಕೆ ೨೦ ರೂ.ರಂತೆ ಹಪ್ಪಳ ಮಾರಾಟ ಮಾಡುತ್ತಾರೆ. ಈ ಗ್ರಾಮದಲ್ಲಿ ೨೦ 'ಸ್ತ್ರೀ ಶಕ್ತಿ' ಗುಂಪುಗಳಿದ್ದು, ಇವುಗಳು ಈ ಕಸುಬಿನಲ್ಲಿ ತೊಡಗಿವೆ. ಅಲ್ಲದೆ ಇದೇ ತಾಲೂಕಿನ ಹಿರೇಬಿದನೂರು ಹಾಗೂ ಗಂಗಸಂದ್ರ ಗ್ರಾಮಗಳೂ ಹಪ್ಪಳ, ಸಂಡಿಗೆ ತಯಾರಿಕೆಯಲ್ಲಿ ತೊಡಗಿವೆ.

ಅಲಿಪುರ (ಗೌರಿಬಿದನೂರು ತಾ॥) ಗ್ರಾಮದಲ್ಲಿ ಸುಮಾರು ೧೨,೦೦೦ ಜನಸಂಖ್ಯೆಯಿದ್ದು, ಇವರಲ್ಲಿ ೧೦ ಸಾವಿರ ಮುಸಲ್ಮಾನರು ಹಾಗೂ ೨,೦೦೦ ಇತರೆ ಜನರು ವಾಸಿಸುತ್ತಿದ್ದಾರೆ. ಈ ಗ್ರಾಮದ ೧೫೦–೨೦೦ ಮುಸ್ಲಿಂ ಕುಟುಂಬಗಳು ಬೆಲೆ ಬಾಳುವ ಜೆಮ್ಸ್ ಹಾಗೂ ಜ್ಯುಯೇಲರೀಸ್ ಕಲ್ಲುಗಳನ್ನು ತಂದು ಪಾಲಿಸ್ ಮಾಡಿ ದೊಡ್ಡ ದೊಡ್ಡ ನಗರಗಳು ಹಾಗೂ

ಹೊರದೇಶಗಳಲ್ಲಿ ಮಾರಾಟ ಮಾಡುತ್ತಾರೆ. ಕಳೆದ ೨೫ ರಿಂದ ೩೦ ವರ್ಷಗಳಿಂದ ಈ ವೃತ್ತಿಯಲ್ಲಿ ತೊಡಗಿದ್ದಾರೆ. ಚಿಂತಾಮಣಿ ತಾಲೂಕಿನಲ್ಲಿರುವ ಕೊಡದವಾಡಿ ಗ್ರಾಮ 'ಕೊಡಗಳ' ತಯಾರಿಕೆಗೆ ಸುಪ್ರಸಿದ್ಧವಾಗಿದೆ. ಈ ಗ್ರಾಮದಲ್ಲಿ ೧೯೮೨ರಲ್ಲಿ ೧೫೦ ಕುಟುಂಬಗಳಿದ್ದು, ೭೦೦ ಜನಸಂಖ್ಯೆ ಇದ್ದಿತು. ಈ ಗ್ರಾಮದ ೧೦೦ ಮುಸ್ಲಿಂ ಕುಟುಂಬಗಳು ಕೊಡಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದರೂ, ಇಲ್ಲಿಯ ಎಲ್ಲಾ ಜಾತಿಯ, ಎಲ್ಲಾ ವರ್ಗದ ಜನರು ಈ ಕಸುಬಿನಲ್ಲಿ ತೊಡಗಿದ್ದಾರೆ. ಆದರೆ ಸ್ಟೀಲ್ ಪಾತ್ರೆಗಳ ಬಳಕೆಯಿಂದಾಗಿ ತಾಮ್ರ, ಹಿತ್ತಾಳೆ ಪಾತ್ರೆಗಳ ಬೇಡಿಕೆ ಕಡಿಮೆಯಾಗಿದ್ದು, ಪ್ರಸ್ತುತ ಈ ವೃತ್ತಿಯನ್ನು ಬಿಟ್ಟು ಪಟ್ಟಣಗಳಿಗೆ ವಲಸೆ ಹೋಗಿದ್ದಾರೆ. ಪ್ರಸ್ತುತ ೧೫ ರಿಂದ ೨೦ ಕುಟುಂಬಗಳು ಮಾತ್ರ ಈ ಕಸುಬಿನಲ್ಲಿ ನಿರತವಾಗಿವೆ. ಹಲವು ದಶಕಗಳಿಂದ ತಾಮ್ರದ ಹಾಗೂ ಹಿತ್ತಾಳೆಯ ಬಿಂದಿಗೆ, ಕೊಡ, ಹಂಡೆ, ರಾಜಖಾನೆ, ಕಡಾಯಿ ಇತ್ಯಾದಿ ಪಾತ್ರೆ ಸಾಮಾನುಗಳನ್ನು ಈ ಗ್ರಾಮದ ಕರಕುಶಲಿಗಳು ತಯಾರಿಸುತ್ತಿದ್ದಾರೆ. ತಯಾರಿಸಿದ ಕೊಡಗಳನ್ನು ಜಾತ್ರೆ, ಸಂತೆ ಹಾಗೂ ಪಟ್ಟಣಗಳಲ್ಲಿರುವ ಪಾತ್ರೆ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದಾರೆ.

ಮಾಲೂರು ತಾಲೂಕಿನ ಶಿವಾರಪಟ್ಟಣವು ಸುಮಾರು ೮೦೦ ವರ್ಷಗಳಿಂದಲೂ ಶಿಲ್ಪಕಲಾ ಕೆತ್ತನೆಗೆ ಪ್ರಸಿದ್ಧವಾಗಿದೆ. ಈ ಗ್ರಾಮದ ಸುಮಾರು ೫೫ ವಿಶ್ವಕರ್ಮಾ ಜನಾಂಗದ ಕುಟುಂಬಗಳು ವಂಶಪಾರಂಪರ್ಯವಾಗಿ ಈ ವೃತ್ತಿಯಲ್ಲಿ ತೊಡಗಿದ್ದಾರೆ. ದೇವತಾ ವಿಗ್ರಹ ಹಾಗೂ ಮಾನವ ಶಿಲ್ಪಗಳನ್ನು ಕೆತ್ತಲು ತಾಮ್ರ, ಹಿತ್ತಾಳೆ, ಬೆಳ್ಳಿ, ಅಮೃತಶಿಲೆ ಹಾಗೂ ಕಪ್ಪುಶಿಲೆಗಳನ್ನು ಕಚ್ಚಾವಸ್ತುವಾಗಿ ಬಳಸುತ್ತಾರೆ. ಸ್ಥಳೀಯವಾಗಿ ಹಾಗೂ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಗ್ರಾಮಗಳಿಂದ ಬಳಪದ ಕಲ್ಲುಗಳನ್ನು ತರಿಸಿಕೊಂಡು ವಿಗ್ರಹ ಬಿಡಿಸುತ್ತಾರೆ. ೨ ೧/೨ x ೩ ೩/೪ ಅಡಿ ಸುತ್ತಳತೆಯ ವಿಗ್ರಹ ಕೆತ್ತನೆ ಮಾಡಲು ಸುಮಾರು ಒಂದು ತಿಂಗಳು ತೆಗೆದುಕೊಳ್ಳುತ್ತಾರೆ. ಇತ್ತೀಚೆಗೆ ವಿಶ್ವಕರ್ಮ ಜನಾಂಗದಲ್ಲದವರೂ ಸಹ ಈ ವೃತ್ತಿಯಲ್ಲಿ ತೊಡಗಿದ್ದಾರೆ. ಈ ಗ್ರಾಮದ ಶಿಲ್ಪಿಗಳಿಗೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕಾರಗಳೂ ದೊರೆತಿರುವುದು ಉಲ್ಲೇಖಾರ್ಹವಾಗಿದೆ.

### ಕಂಬಳಿ ಕೈಗಾರಿಕೆ

ಕೋಲಾರವು ಬಹಳ ಹಿಂದಿನಿಂದಲೂ ಕಂಬಳಿ ತಯಾರಿಕೆಗೆ ಹೆಸರುವಾಸಿಯಾಗಿತ್ತು. ಕಂಬಳಿ ತಯಾರಿಕೆಯೂ ಒಂದು ಗೃಹ ಕೈಗಾರಿಕೆಯಾಗಿ ಪ್ರಸಿದ್ಧಿಗೆ ಬಂದಿತ್ತು. ನೆರೆಯ ಮದ್ರಾಸ್ ರಾಜ್ಯದಲ್ಲಿ ಕೋಲಾರದ ಕಂಬಳಿಗೆ ವಿಶೇಷ ಬೇಡಿಕೆ ಇತ್ತೆಂದು ಎಂದು ಎಡ್ವರ್ಡ್ ಬಾಲ್ಫರ್ ಸಂಪಾದಿಸಿದ 'ಸೈಕ್ಲೊಪಿಡಿಯಾ ಆಫ್ ಇಂಡಿಯಾ' ಗ್ರಂಥದಿಂದ ವೇದ್ಯವಾಗುತ್ತದೆ. ಕೋಲಾರದಲ್ಲಿ ಉತ್ತಮ ದರ್ಜೆಯ ಉಣ್ಣೆಯನ್ನು ನೀಡುವ ಕುರಿಗಳ ಸಾಕಾಣಿಕೆಗೆ ವಾಯುಗುಣವು ನೆರವಾಗುತ್ತಿತ್ತೆಂದು, ಇದು ಉತ್ತಮ ದರ್ಜೆಯ ಕಂಬಳಿ ತಯಾರಿಕೆಗೆ ಕಾರಣವಾಗಿತ್ತೆಂದು ತಜ್ಞರು ಹೇಳುತ್ತಾರೆ. ೧೯೩೧ರ ಜನಗಣತಿಯ ಪ್ರಕಾರ, ಕೋಲಾರ ಜಿಲ್ಲೆಯಲ್ಲಿದ್ದ ೭೬ ಮಗ್ಗಗಳಲ್ಲಿ ೨,೦೦೦ ಜನರು ಕೆಲಸ ಮಾಡುತ್ತಿದ್ದರು. ಜಿಲ್ಲೆಯಲ್ಲಿ ೧,೭೩೨ ಮಗ್ಗಗಳಿದ್ದವೆಂದು ಮೈಸೂರು ಗೆಜೆಟಿಯರ್ (೧೮೯೭) ದಾಖಲಿಸಿದ್ದರೆ, ೧೯೬೭ರಲ್ಲಿ ಪ್ರಕಟವಾದ ಕೋಲಾರ ಜಿಲ್ಲಾ ಗೆಜೆಟಿಯರ್‌ನಿಂದ ೮೬೦ ಮಗ್ಗಗಳಿದ್ದ ಅಂಶ ವೇದ್ಯವಾಗುತ್ತದೆ. ೨೦೦೦ನೇ ವರ್ಷದ ಮಾರ್ಚ್ ಅಂತ್ಯಕ್ಕೆ ಉತ್ಪಾದನೆಗೆ ನೆರವಾಗಿದ್ದ ಮಗ್ಗಗಳ ಸಂಖ್ಯೆ ಬಹಳ ಶೋಚನೀಯ ಮಟ್ಟಕ್ಕೆ ಇಳಿದಿತ್ತು.

ಇಂದು ಕೋಲಾರ ತಾಲ್ಲೂಕಿನ ಕಟಾರಿಪಾಳ್ಯ, ಕುರುಬರಪೇಟೆ, ಎಡಹಳ್ಳಿಗಳಲ್ಲಿ ತಲಾ ನಾಲ್ಕು ಮಗ್ಗಗಳಿವೆ. ಶಿಡ್ಲಘಟ್ಟದ ಮೇಲೂರು, ಮಳ್ಳೂರುಗಳಲ್ಲಿ ತಲಾ ಎರಡು ಮಗ್ಗಗಳಿವೆ. ಶ್ರೀನಿವಾಸಪುರದ ನಳನಹಳ್ಳಿಯಲ್ಲಿ ಎರಡು ಮಗ್ಗಗಳೂ, ಎಲ್ಲೂರಿನಲ್ಲಿ ಎರಡು ಮಗ್ಗಗಳೂ, ಮುಳಬಾಗಿಲಿನ ಕುಲದೇವನಹಳ್ಳಿ ಹಾಗೂ ಪನ್ನಪಲ್ಲಿಗಳಲ್ಲಿ ತಲಾ ನಾಲ್ಕು ಮಗ್ಗಗಳಿವೆ. ಬಂಗಾರಪೇಟೆ ತಾಲ್ಲೂಕಿನ ಕ್ಯಾಟೂರು ಮತ್ತು ಬಡಮಾರನಹಳ್ಳಿಗಳಲ್ಲಿ ಎರಡು ಮಗ್ಗಗಳಿವೆ. ನೇಕಾರಿಕೆಯು ಈ ಹೀನ ಸ್ಥಿತಿ ತಲುಪಲು, ಉಣ್ಣೆಯ ಗುಣಮಟ್ಟ ಕ್ಷೀಣಿಸಿರುವುದೇ ಅಲ್ಲದೆ ಕಂಬಳಿಯ ಕೈಗಾರಿಕೆ ಲಾಭದಾಯಕವಾಗಿಲ್ಲದಿರುವುದೂ ಮತ್ತು ಮಾರುಕಟ್ಟೆಯಲ್ಲಿ ಕಂಬಳಿಗೆ ಬೇಡಿಕೆ ಕಡಿಮೆಯಾಗುತ್ತಿರುವುದೂ ಕಾರಣಗಳಾಗಿವೆ.

ಒಂದು ಕಾಲದಲ್ಲಿ ಪ್ರಖ್ಯಾತವಾಗಿದ್ದು, ಈಗ ಅವನತಿಗೊಂಡಿರುವ ಕಂಬಳಿ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಲು ರಾಜ್ಯ ಸರ್ಕಾರವು ಕೋಲಾರ ನಗರದಲ್ಲಿ ಕಂಬಳಿ ನೇಯುವ ಉಪವಿಭಾಗವನ್ನು ೧೯೩೮ ರಲ್ಲಿ ತೆರೆದು, ಅದರ ಮೇಲ್ವಿಚಾರಣೆಯನ್ನು

ಮೈಸೂರು ಜಿಲ್ಲೆಯ ಬದನವಾಳು ನೂಲು ಕೇಂದ್ರಕ್ಕೆ ವಹಿಸಿತು. ಈ ಉಪವಿಭಾಗವು ಉಣ್ಣೆಯನ್ನು ಕೊಂಡು ಕಂಬಳಿಯನ್ನು ತಯಾರಿಸಿ ಮಾರಾಟ ಮಾಡುತ್ತಿತ್ತು. ೧೯೭೪–೭೫ರಲ್ಲಿ ರೂ. ೬೩,೧೫೫ ಮೌಲ್ಯದ ಉಣ್ಣೆ ಕಂಬಳಿಯನ್ನು ತಯಾರಿಸಿ, ರೂ. ೭೮,೧೪೯ ಮೌಲ್ಯದ ಕಂಬಳಿಯನ್ನು ಮಾರಾಟ ಮಾಡಿತು. ೧೯೮೫–೮೬ ರವರೆಗೆ ಈ ಕೇಂದ್ರದ ಪ್ರಗತಿಯು ಲಾಭದಾಯಕವಾಗಿ ಮುಂದುವರಿಯಿತು. ಆದರೆ ೧೯೯೪–೯೫ ರ ವೇಳೆಗೆ ವಾರ್ಷಿಕ ಉತ್ಪಾದನೆಯ ಮೌಲ್ಯ ಕೇವಲ ರೂ. ೩,೯೧೦ ಗಳಿಗೆ ಇಳಿದು ಮಾರಾಟವೂ ರೂ. ೨,೦೫೦ಕ್ಕೆ ಕುಸಿಯಿತು. ಆಗ ಸರ್ಕಾರವೂ ಈ ಕೇಂದ್ರವನ್ನು ಮುಚ್ಚುವಂತೆ ಆಜ್ಞೆ ಮಾಡಿತು. ಈಗ ಕಂಬಳಿ ಉತ್ಪಾದನೆ ಮಾರಾಟ ಸಂಪೂರ್ಣವಾಗಿ ನಿಂತು ಹೋಗಿದೆ.

### ಕೋಳಿ ಸಾಕಾಣಿಕೆ

ಕೋಳಿ ಸಾಕಾಣಿಕೆ ಜಿಲ್ಲೆಯ ಬಹು ಪ್ರಾಚೀನ ಕಸುಬುಗಳಲ್ಲಿ ಒಂದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೋಳಿ ಸಾಕಾಣಿಕೆ ಹೆಚ್ಚಾಗಿದ್ದರೂ, ಕೃಷಿಯ ನಂತರದ ಉಪಕಸುಬಾಗಿದೆ. ಇತ್ತೀಚಿಗೆ ಕೋಳಿ ಸಾಕುವುದು ಬಹು ಲಾಭದಾಯಕ ಉದ್ಯಮವಾಗಿರುವುದರಿಂದ, ಕೋಳಿ ಫಾರ್ಮ್‌ಗಳನ್ನು ಸ್ಥಾಪಿಸಿ ಪಟ್ಟಣ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇದನ್ನೇ ಸ್ವತಂತ್ರ್ಯ ಉದ್ಯಮವಾಗಿ ಕೈಗೊಳ್ಳುವುದೂ ಹೆಚ್ಚಾಗುತ್ತಿದೆ. ಗ್ರಾಮಗಳಲ್ಲಿ ಕೋಳಿ ಸಾಕಾಣಿಕೆ ಹಳೆಯ ಪದ್ಧತಿಯಲ್ಲಿ ನಡೆದರೆ, ಫಾರ್ಮ್‌ಗಳಲ್ಲಿ ಸುಧಾರಿತ ಪದ್ಧತಿಗಳು ರೂಢಿಯಲ್ಲಿವೆ.

ಕೋಳಿ ಮಾಂಸ ಮತ್ತು ಮೊಟ್ಟೆ ಪುಷ್ಠಿಕರ ಆಹಾರವಾಗಿರುವುದಲ್ಲದೆ, ಕೋಳಿ ಸಾಕಾಣಿಕೆಯಿಂದ ಒಳ್ಳೆಯ ಗೊಬ್ಬರ ಸಹ ದೊರಕುತ್ತದೆ. ಈ ದೃಷ್ಟಿಯಿಂದ ಅಧಿಕ ಆಹಾರ ಉತ್ಪಾದನೆ ಯೋಜನೆಯ ಅಂಗವಾಗಿ ಕೋಳಿ ಸಾಕಾಣಿಕೆಯನ್ನು ಸರ್ಕಾರ ಪ್ರೋತ್ಸಾಹಿಸುತ್ತಿದೆ. ಕೋಳಿ ಫಾರ್ಮ್‌ಗಳನ್ನು ಸ್ಥಾಪಿಸಲು ಸಾಲ ಕೊಡುವುದು, ಮೊದಲ ಐದು ವರ್ಷಗಳ ಆದಾಯದ ಮೇಲೆ ತೆರಿಗೆ ವಿಧಿಸದಿರುವುದು, ಹೆಚ್ಚು ಮೊಟ್ಟೆ ಮಾಂಸ ನೀಡುವ ಉತ್ತಮ ತಳಿಗಳನ್ನು ಒದಗಿಸುವುದು ಹಾಗೂ ವೈದ್ಯಕೀಯ ಸಹಾಯ ಮುಂತಾದ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

ಜಿಲ್ಲೆಯಲ್ಲಿ ೧೯೫೬ರ ಜಾನುವಾರು ಗಣತಿಯ ಪ್ರಕಾರ ಕೋಳಿಗಳ ಸಂಖ್ಯೆ ೭,೫೬,೬೫೫ ಇದ್ದು, ೧೯೭೭ರಲ್ಲಿ ೯,೭೦,೬೯೫ಕ್ಕೂ, ೧೯೯೭ರಲ್ಲಿ ೯,೯೬,೩೬೭ಕ್ಕೂ ಹಾಗೂ ೨೦೦೩ರಲ್ಲಿ ೧೬,೨೭,೪೨೬ಕ್ಕೂ ಹೆಚ್ಚಳಗೊಂಡಿದೆ. ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು ೩೩೭ ಕೋಳಿ ಸಾಕಾಣಿಕ ಕೇಂದ್ರಗಳಿದ್ದು, ಇವುಗಳಲ್ಲಿ ಎರಡು ಸರ್ಕಾರಿ ಫಾರಂಗಳಾಗಿವೆ, ಇವುಗಳಲ್ಲಿ ಗಿರಿರಾಜ ತಳಿಯ ಕೋಳಿ ಮರಿಗಳನ್ನು ಸಾಕಾಣಿಕೆ ಮಾಡಿ ರೈತರಿಗೆ ವಿತರಿಸಲಾಗುತ್ತಿದೆ. ಹಾಗೂ ರೈತರಿಗೆ ಉಚಿತ ತರಬೇತಿ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಎರಡು ಕೋಳಿ ಮರಿ ಮಾಡಿಸುವ ಕೇಂದ್ರಗಳು, ನಾಲ್ಕು ಕೋಳಿ ಆಹಾರ ತಯಾರಿಕಾ ಘಟಕಗಳೂ ಇವೆ.

### ರೇಷ್ಮೆ ಕೈಗಾರಿಕೆ

ರೇಷ್ಮೆ ಬಟ್ಟೆಗಳ ತಯಾರಿಕೆ ಬಹಳ ಹಿಂದಿನಿಂದಲೂ ಈ ಜಿಲ್ಲೆಯಲ್ಲಿ ನಡೆದು ಬಂದಿದೆಯೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಜಿಲ್ಲೆಯ ಹವಾಮಾನ ಪರಿಸ್ಥಿತಿಯು ಹಿಪ್ಪುನೇರಳೆ ಸೊಪ್ಪಿನ ವ್ಯವಸಾಯ ಹಾಗೂ ರೇಷ್ಮೆಗೂಡುಗಳ ಉತ್ಪಾದನೆಗೂ ಅನುಕೂಲಕರವಾಗಿದೆ. ಉತ್ಕೃಷ್ಟವಾದ ಹಿಪ್ಪುನೇರಳೆ ಬೆಳೆದರೆ, ರೇಷ್ಮೆಯ ಗೂಡುಗಳೂ ಉತ್ತಮ ಮಟ್ಟದ್ದಾಗಿರುತ್ತವೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ರಾಜ್ಯ ಸರ್ಕಾರದ ರೇಷ್ಮೆ ಇಲಾಖೆಯು ಜಿಲ್ಲೆಯ ರೇಷ್ಮೆ ಇಲಾಖೆಯ ಅಧಿಕಾರಿಗಳ ಮೂಲಕ ಉತ್ತಮ ಮಟ್ಟದ ಹಿಪ್ಪುನೇರಳೆ ಸೊಪ್ಪನ್ನು ಬೆಳೆಯುವುದಕ್ಕೆ ಮಾರ್ಗದರ್ಶನವನ್ನು ನೀಡುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶಾಶ್ವತವಾದ ಸ್ಥಾನಗಳಿಸಬೇಕಾದರೆ, ಹಿಪ್ಪುನೇರಳೆಯನ್ನು ಬೆಳೆಯುವುದಕ್ಕೆ ಆಧುನಿಕ ವ್ಯವಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗಿದೆ ಹಾಗೆಯೇ ರೇಷ್ಮೆ ಹುಳು ಸಾಕಾಣಿಕೆಯಲ್ಲೂ 'ಮಲ್ಟಿ ರೀಲಿಂಗ್' ಯಂತ್ರಗಳನ್ನು ಉಪಯೋಗಿಸುವುದರಿಂದ ರೇಷ್ಮೆ ನೂಲಿನ ಗುಣಮಟ್ಟ ಹೆಚ್ಚುತ್ತದೆ.

ಹಿಪ್ಪುನೇರಳೆಯನ್ನು ಶಿಡ್ಲಘಟ್ಟ, ಕೋಲಾರ, ಶ್ರೀನಿವಾಸಪುರ, ಮಾಲೂರು ಹಾಗೂ ಚಿಂತಾಮಣಿಗಳಲ್ಲಿ ವಿಶೇಷವಾಗಿ ಬೆಳೆಯಲಾಗುತ್ತಿದೆ. ರಾಜ್ಯವು ಉತ್ಪಾದಿಸುವ ಒಟ್ಟು ರೇಷ್ಮೆಯಲ್ಲಿ ಕೋಲಾರ ಜಿಲ್ಲೆಯ ಭಾಗ ಶೇ. ೩೫ ರಷ್ಟಿದ್ದು, ಕೋಲಾರವನ್ನು

ಭಾರತದ ಜಪಾನ್ ಎಂದು ಕರೆಯಲಾಗಿದೆ. ಸುಮಾರು ೫೩,೦೦೦ ಕುಟುಂಬಗಳು ರೇಷ್ಮೆ ಹುಳುಗಳನ್ನು ಸಾಕುವುದರಲ್ಲೂ, ೧,೨೬೦ ಕುಟುಂಬಗಳು ರೇಷ್ಮೆನೂಲು ತೆಗೆದು, ಹುರಿಮಾಡುವುದರಲ್ಲೂ ನಿರತವಾಗಿವೆ.

ಜಿಲ್ಲೆಯಲ್ಲಿ ೨೦೦೧ ರಲ್ಲಿ ೩೨,೪೯೨ ಹೆಕ್ಟೇರು ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯನ್ನು ಬೆಳೆದಿದ್ದು, ಅದು ೨೦೦೩ರಲ್ಲಿ ೨೫,೦೫೧.೩೧ ಹೆಕ್ಟೇರಿಗೆ ಕುಸಿಯಿತು. ಹಿಪ್ಪುನೇರಳೆ ಬೆಳೆಯು ನೀರಾವರಿಯನ್ನು ಅವಲಂಬಿಸಿರುವುದರಿಂದ, ಮಳೆಯು ಚೆನ್ನಾಗಿ ಬಿದ್ದ ವರ್ಷದಲ್ಲಿ ಇಳುವರಿ ಹೆಚ್ಚಾಗಿರುತ್ತದೆ. ಅಂತರ್ಜಲವನ್ನು ಅವಲಂಬಿಸಿದರೆ ಭೂಮಿಯಲ್ಲಿರುವ ಲವಣಾಂಶದ ಪ್ರಭಾವ ಇಳುವರಿಯ ಮೇಲೂ ಆಗುತ್ತದೆ. ಕೋಷ್ಟಕ ೫.೨೦ರಲ್ಲಿ ರೇಷ್ಮೆ ಬೇಸಾಯ ಮತ್ತು ರೇಷ್ಮೆಗೂಡಿನ ಉತ್ಪಾದನೆ ಬಗ್ಗೆ ಮಾಹಿತಿ ನೀಡಲಾಗಿದೆ.

ಜಿಲ್ಲೆಯಲ್ಲಿ ವಿವಿಧ ತಳಿಯ ರೇಷ್ಮೆ ಬೆಳೆಯಲು ರೇಷ್ಮೆ ಇಲಾಖೆ ರೈತರನ್ನು ಪ್ರೋತ್ಸಾಹಿಸುತ್ತಿದೆ. ವಿವರಗಳಿಗೆ ಕೋಷ್ಟಕ ೫.೨೧ ನೋಡಿ.

**ಕೋಷ್ಟಕ ೫.೨೧: ಜಿಲ್ಲೆಯಲ್ಲಿ ೨೦೦೩ರ ಮಾರ್ಚ್ ಅಂತ್ಯಕ್ಕೆ ಇದ್ದ ಹಿಪ್ಪುನೇರಳೆ ಬೆಳೆಯ ವಿವಿಧ ತಳಿಗಳ ವಿವರ**

**(ಹೆಕ್ಟೇರುಗಳಲ್ಲಿ)**

| ತಾಲೂಕು | ಸ್ಥಳೀಯ | ಎಂ.೫ | ಎಸ್.೩೬ | ಎ.ವಿ.೧ | ಇತರೆ | ಒಟ್ಟು |
|---|---|---|---|---|---|---|
| ಕೋಲಾರ | ೧೯ | ೪೪೭೩ | ೭೭ | ೩೩೬ | ೧೪ | ೫೦೩೮ |
| ಬಂಗಾರಪೇಟೆ | ೨೧ | ೧೬೪೭ | ೧೩೧ | ೧೮೮ | ೫ | ೨೧೮೧ |
| ಮಾಲೂರು | ೧೪ | ೮೦೮ | ೭೬ | ೭೫ | ೨೦ | ೧೨೦೦ |
| ಮುಳಬಾಗಿಲು | ೩೧ | ೧೮೭ | ೭೭ | ೧೮೦ | ೨೬ | ೨೪೪೧ |
| ಶ್ರೀನಿವಾಸಪುರ | ೨೫೧ | ೧೮೮ | ೪೯ | ೨೪೯ | ೭ | ೨೩೬೩ |
| ಚಿಂತಾಮಣಿ | ೭೨ | ೩೦೦೫ | ೨೩ | ೨೦೧ | ೨ | ೩೩೨೩ |
| ಶಿಡ್ಲಘಟ್ಟ | ೮೬ | ೩೭೯ | ೬೬ | ೧೨೩ | ೬ | ೩೬೦೦ |
| ಚಿಕ್ಕಬಳ್ಳಾಪುರ | ೫೬ | ೧೩೩೫ | ೫೦ | ೧೩೫ | ೩ | ೧೪೮೦ |
| ಗೌರಿಬಿದನೂರು | ೪೧೦ | ೧೨೫ | ೫೭ | ೧೦೧ | ೦ | ೧೭೮೩ |
| ಬಾಗೇಪಲ್ಲಿ | ೨೬೧ | ೪೯೧ | ೧೦ | ೭೦ | ೨ | ೮೩ |
| ಗುಡಿಬಂಡೆ | – | ೫೨ | ೧೩ | ೭೦ | – | ೪೪೦ |
| ಒಟ್ಟು | ೧೯೮೦ | ೨೦೧೯೮ | ೬೬೧ | ೧೭೬೦ | ೮೫ | ೨೪೬೮೪ |

ಈ ಮೇಲಿನ ಕೋಷ್ಟಕದಂತೆ ೨೦೦೩ ರಲ್ಲಿ ಸ್ಥಳೀಯ ತಳಿಯ ಬೆಳೆಯನ್ನು ೧೯೮೦ ಹೆಕ್ಟೇರು ಭೂಮಿಯಲ್ಲಿ ಮಾತ್ರ ಬೆಳೆದಿದ್ದರೆ, ಎಂ.೫. ತಳಿಯ ಬೆಳೆಯನ್ನು ೨೦,೧೯೮ ಹೆಕ್ಟೇರು ಭೂಮಿಯಲ್ಲಿ ಬೆಳೆಯಲಾಗುತ್ತಿತ್ತು. ಅಲ್ಲದೆ ಎಸ್ ೩೬, ಎ.ವಿ. ೧, ಸಿ.ಎಲ್.ಆರ್, ಎನ್.ಪಿ.೨ ಹಾಗೂ ಎಸ್.ಎಲ್.ಆರ್. ಇತರೆ ತಳಿಗಳಾಗಿವೆ. ಗಂಟುರೋಗ, ಸಪ್ಪೆರೋಗ, ಹಾಲುರೋಗ (ಹಾಲು ತೊಂಡೆ), ಸುಣ್ಣಕಟ್ಟು ರೋಗ ಮುಂತಾದ ರೋಗಗಳು ರೇಷ್ಮೆ ಹುಳುಗಳಿಗೆ ತಗಲುತ್ತವೆ. ಅಲ್ಲದೆ ಊಜಿ ನೊಣದ ಹಾವಳಿ, ಎಲೆಸುರಳಿ ಹುಳುವಿನ ಹಾವಳಿ ಕೂಡ ಇದೆ. ಹಿಟ್ಟು ತಿಗಣೆ (ಮಿಲಿಬಾಗ್), ಹೇನುಗಳು, ಮಿಡತೆ, ಕಂಬಳಿಹುಳು ಮುಂತಾದ ಕೀಟಗಳು ರೇಷ್ಮೆಗೆ ತಗಲುತ್ತವೆ.

## ಕೋಷ್ಟಕ ೫.೨೦ ಜಿಲ್ಲೆಯಲ್ಲಿ ರೇಷ್ಮೆ ಬೇಸಾಯ ಮತ್ತು ರೇಷ್ಮೆಗೂಡು ಉತ್ಪಾದನಾ ವಿವರ

| ಕ್ರ. ಸಂ | ತಾಲ್ಲೂಕು | ಹಿಪ್ಪು ನೇರಳೆ ಕ್ಷೇತ್ರ (ಹೆಕ್ಟೇರು ಗಳಲ್ಲಿ) | ಚೌಕಿ ಕಟ್ಟಿದ ಮೊಟ್ಟೆಗಳು (ಲಕ್ಷ ಗಳಲ್ಲಿ) | ಗೂಡಿನ ಉತ್ಪಾದನೆ (ಮೆ. ಟನ್ ಗಳಲ್ಲಿ) | ರೇಷ್ಮೆ ಕೃಷಿ ಇರುವ ಗ್ರಾಮ ಗಳು | ರೇಷ್ಮೆ ಕೃಷಿಯಲ್ಲಿ ತೊಡಗಿರುವ ಕುಟುಂಬಗಳು: ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪ ಸಂಖ್ಯಾತರು | ಇತರೆ | ಒಟ್ಟು |
|---|---|---|---|---|---|---|---|---|---|---|
| ೧. | ಕೋಲಾರ | ೫೦೫೯.೪೮ | ೬೦.೦೪ | ೩೩೭೪.೦೦ | ೩೩೫ | ೧೦೦೦ | ೪೮೨ | ೧೭೯ | ೯೨೨೩ | ೧೦೮೯೪ |
| ೨. | ಬಂಗಾರುಪೇಟೆ | ೨೨೫೬.೫೬ | ೨೪.೯೧ | ೧೩೬೫.೦೦ | ೩೯೭ | ೬೮೨ | ೧೮೦ | ೯೦ | ೪೩೧೯ | ೫೨೭೧ |
| ೩. | ಮಾಲೂರು | ೧೨೨೩.೮೧ | ೧೫.೧೮ | ೮೦೮.೦೦ | ೨೯೬ | ೩೪೧ | ೩೦೫ | ೫೪ | ೨೬೩೪ | ೩೩೩೪ |
| ೪. | ಮುಳಬಾಗಿಲು | ೨೪೯೦.೯೮ | ೨೬.೮೦ | ೧೪೪೨.೦೦ | ೩೬೩ | ೭೬೬ | ೧೬೨ | ೧೫೫ | ೪೧೯೬ | ೫೨೭೯ |
| ೫. | ಶ್ರೀನಿವಾಸಪುರ | ೨೪೦೬.೦೮ | ೨೬.೧೩ | ೧೨೮೬.೦೦ | ೨೯೮ | ೬೦೧ | ೨೭೯ | ೧೭೯ | ೩೩೯೦ | ೪೩೯೯ |
| ೬ | ಚಿಂತಾಮಣಿ | ೩೪೧೧.೦೧ | ೩೮.೫೮ | ೨೦೭೫.೦೦ | ೩೩೫ | ೬೪೧ | ೫೬೩ | ೨೮೮ | ೫೧೦೫ | ೬೫೯೭ |
| ೭ | ಶಿಡ್ಲಘಟ್ಟ | ೩೭೦೭.೮೯ | ೫೨.೮೧ | ೨೯೧.೦೦ | ೨೯೧ | ೩೪೫ | ೩೮೬ | ೪೮ | ೪೭೮೫ | ೫೫೬೪ |
| ೮. | ಚಿಕ್ಕಬಳ್ಳಾಪುರ | ೧೪೮೩.೫೨ | ೧೯.೩೮ | ೧೧೫೩.೦೦ | ೨೯೦ | ೩೦೬ | ೧೭೬ | ೨೨ | ೨೭೪೪ | ೩೨೪೮ |
| ೯. | ಗೌರಿಬಿದನೂರು | ೧೮೩೮.೯೧ | ೨೨.೧೪ | ೧೨೧೬.೦೦ | ೨೨೫ | ೩೦೪ | ೪೮೫ | ೬೭ | ೩೫೭೬ | ೪೪೩೨ |
| ೧೦. | ಬಾಗೇಪಲ್ಲಿ | ೮೫೧.೦೮ | ೯.೫೨ | ೪೭೬.೦೦ | ೩೧೯ | ೨೧೨ | ೪೫೦ | ೨೮ | ೨೪೭೦ | ೩೧೬೦ |
| ೧೧. | ಗುಡಿಬಂಡೆ | ೩೦೧.೭೬ | ೪.೦೪ | ೧೯೫.೦೦ | ೮೦ | ೩೫ | ೪೨ | – | ೫೨೭ | ೬೦೪ |
| | ಜಿಲ್ಲೆಯ ಒಟ್ಟು | ೨೫,೦೩೧.೩೧ | ೨೯೯.೫೮ | ೧೬,೦೮೧.೦೦ | ೩೧೯೯ | ೫೨೩೩ | ೩೫೧೦ | ೧೦೫೦ | ೪೨೯೬೯ | ೫೨೭೬೨ |

ವರದಿ: (ರೇಷ್ಮೆ ಇಲಾಖೆ, ಕೋಲಾರ)

### ಚೌಕಿ ಸಾಕಾಣಿಕಾ ಕೇಂದ್ರಗಳು

ಮೊಟ್ಟೆಗಳನ್ನು ಎರಡನೇ ಜ್ವರದ ತನಕ ಚೌಕಿ ಮಾಡಿ ವಿತರಿಸುವುದರಿಂದ ಉತ್ತಮ ಇಳುವರಿ ಬರುತ್ತದೆ. ಈ ರೀತಿಯ ಚೌಕಿ ಕೇಂದ್ರಗಳು ಜಿಲ್ಲೆಯ ಚಿಂತಾಮಣಿ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಜಿಲ್ಲೆಯಲ್ಲಿ ೨೦೦೨–೦೩ರಲ್ಲಿ ೧೫ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳು, ೧೮೪ ಖಾಸಗಿ ರೇಷ್ಮೆ ಬಿತ್ತನೆ ಕೋಠಿಗಳು, ೮ ಸರ್ಕಾರದ ರೇಷ್ಮೆ ಗೂಡಿನ ಮಾರುಕಟ್ಟೆಗಳು, ಮೂರು ರೇಷ್ಮೆ ವಿನಿಮಯ ಕೇಂದ್ರಗಳು, ಎರಡು ರೇಷ್ಮೆ ಕಾಯ್ದೆ ಜಾರಿ ವಿಭಾಗಗಳು, ಐದು ರೇಷ್ಮೆ ನೂಲು ಬಿಚ್ಚುವವರ ಕೈಗಾರಿಕಾ ಸಹಕಾರ ಸಂಘಗಳು, ೩೮ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘಗಳು, ೫೯,೭೬೫ ಮಂದಿ ರೇಷ್ಮೆ ನೂಲು ಬಿಚ್ಚುವವರು, ೩,೬೪೨ ಚರಕಾ ಘಟಕಗಳು, ೨,೦೮೨ 'ಫಿಲೇಚರ್ ಬೇಸಿನ್'ಗಳು ಹಾಗೂ ೪೪ 'ಮಲ್ಟಿ ಎಂಡ್'ಘಟಕಗಳು ಕಾರ್ಯನಿರ್ವಹಿಸುತ್ತಿದ್ದವು.

### ರೇಷ್ಮೆಗೂಡಿನ ಉತ್ಪಾದನೆ

ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಗೂಡಿನ ಉತ್ಪಾದನೆ ಒಂದೇ ರೀತಿಯಲ್ಲಿಲ್ಲದೆ ಏರುಪೇರಾಗಿದೆ. ಮುಂದಿನ ಕೋಷ್ಟಕದಲ್ಲಿ ಅಂತಹ ವ್ಯತ್ಯಾಸವನ್ನು ಗುರುತಿಸಲಾಗಿದೆ.

(ಮೆಟ್ರಿಕ್ ಟನ್ನುಗಳಲ್ಲಿ)

| | ೨೦೦೦–೨೦೦೧ | ೨೦೦೧–೨೦೦೨ |
|---|---|---|
| ಮಿಶ್ರ ತಳಿ | ೨೨,೮೯ | ೨೨,೦೩೧ |
| ದ್ವಿತಳಿ | ೫೦ | ೪೧೬ |
| ಒಟ್ಟು | ೨೩,೦೯ | ೨೨,೪೪೭ |

### ಕಚ್ಚಾ ರೇಷ್ಮೆ ಉತ್ಪಾದನೆ

| | ೨೦೦೦–೨೦೦೧ | ೨೦೦೧–೨೦೦೨ |
|---|---|---|
| ಮಿಶ್ರ ತಳಿ | ೨,೮೧೨ | ೨,೬೦೬ |
| ದ್ವಿತಳಿ | ೪೧ | ೫೭ |
| ಒಟ್ಟು | ೨,೮೫೩ | ೨,೬೬೩ |

### ರೇಷ್ಮೆ ನೂಲು ತೆಗೆಯುವ ಉದ್ಯಮಗಳು

ರೇಷ್ಮೆ ನೂಲು ತೆಗೆಯುವ ಕೈಗಾರಿಕೆಯು ಜಿಲ್ಲೆಯಲ್ಲಿ ಒಂದು ಪ್ರಮುಖ ಗೃಹ ಕೈಗಾರಿಕೆಯಾಗಿದೆ. ೧೯೯೮–೯೯ ರಲ್ಲಿ ಜಿಲ್ಲೆಯಲ್ಲಿ ೮೦೦ ಸಾಂಪ್ರದಾಯಿಕ ರೇಷ್ಮೆ ನೂಲು ತಯಾರಿಕ ಘಟಕಗಳು, ೧೫ ಮಲ್ಟಿಎಂಡ್ ಘಟಕಗಳೂ ಇದ್ದವು. ಜಿಲ್ಲೆಯ ಶಿಡ್ಲಘಟ್ಟ, ಶ್ರೀನಿವಾಸಪುರ ಮತ್ತು ಕೋಲಾರ ತಾಲ್ಲೂಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೂಲು ತೆಗೆಯುವ ಘಟಕಗಳಿವೆ. ಮುಂದಿನ ಕೋಷ್ಟಕ ೫.೨೨ರಲ್ಲಿ ೨೦೦೩ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ಚಾಲ್ತಿಯಲ್ಲಿದ್ದ ನೂಲು ತೆಗೆಯುವ ಕಾರ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ.

**ಕೋಷ್ಟಕ ೫.೨೨**

| ತಾಲ್ಲೂಕು | ಕಾಟೇಜು ಬೇಸಿನ್ | ಮಲ್ಟಿಎಂಡ್ ಬೇಸಿನ್ | ಫಿಲೇಚರ್ ಬೇಸಿನ್ | ಚರಕ | ಒಟ್ಟು |
|---|---|---|---|---|---|
| **ಕೋಲಾರ** | – | ೧೭ | ೧೫೩ | ೧೭೪೧ | ೧೯೧೧ |
| **ಮಾಲೂರು** | – | – | – | ೧೧ | ೧೧ |
| **ಮುಳಬಾಗಲು** | – | – | – | ೩೮ | ೩೮ |
| **ಚಿಂತಾಮಣಿ** | ೮ | ೩ | ೨ | ೪೦೨ | ೪೧೫ |
| **ಶ್ರೀನಿವಾಸಪುರ** | ೬ | ೬ | ೧೩೧ | ೭ | ೧೫೦ |
| **ಶಿಡ್ಲಘಟ್ಟ** | – | ೧೮ | ೧೭೮೪ | ೧೦೩೧ | ೨೦೩೧ |
| **ಚಿಕ್ಕಬಳ್ಳಾಪುರ** | – | ೬ | ೭ | ೪೬೨ | ೪೭೫ |
| **ಗೌರಿಬಿದನೂರು** | ೨ | ೨ | ೨ | ೧೨ | ೧೮ |
| **ಬಾಗೇಪಲ್ಲಿ** | – | ೨ | ೬ | ೩ | ೧೧ |
| **ಗುಡಿಬಂಡೆ** | – | – | – | – | – |
| **ಒಟ್ಟು** | **೧೬** | **೪೪** | **೨೦೮೨** | **೩೬೪೨** | **೫೭೭೨** |

(ಆಧಾರ: ರೇಷ್ಮೆ ಇಲಾಖೆ)

ಶಿಡ್ಲಘಟ್ಟ ತಾಲೂಕು ಫಿಲೇಚರ್ ರೇಷ್ಮೆ ನೂಲು ತಯಾರಿಸುವುದಕ್ಕೆ, ರೇಷ್ಮೆ ನೂಲನ್ನು ಹುರಿ ಮಾಡುವದಕ್ಕೆ ಪ್ರಸಿದ್ಧವಾಗಿದೆ. ಇಲ್ಲಿನ ಶೇ.೮೫ ರಷ್ಟು ಮನೆಗಳಲ್ಲಿ ರೇಷ್ಮೆ ನೂಲನ್ನು ತೆಗೆಯುವ ಘಟಕಗಳಿವೆ. ಆದರೆ ಅನೇಕ ಘಟಕಗಳು ಕೈಗಾರಿಕಾ ಇಲಾಖೆಯ ಕಛೇರಿಯಲ್ಲಿ ದಾಖಲಾಗಿಲ್ಲ. ಕೋಲಾರ ಜಿಲ್ಲೆಯ ಪ್ರಮುಖ ರೇಷ್ಮೆ ಕೈಗಾರಿಕಾ ಕೇಂದ್ರವೆಂದರೆ ಶಿಡ್ಲಘಟ್ಟ. ಇಲ್ಲಿಯ ಹಲವು ಘಟಕಗಳಲ್ಲಿ ನೂಲು ತೆಗೆಯುವ ಮತ್ತು ಹುರಿಮಾಡುವ ಯಂತ್ರಗಳನ್ನು ಅಳವಡಿಸಲಾಗಿದೆ. ಹುರಿಮಾಡುವ ಪ್ರತ್ಯೇಕ ಘಟಕಗಳೂ ಈ ಊರಿನಲ್ಲಿದ್ದು, ಸುಮಾರು ೧೨೦ ಘಟಕಗಳು ಹುರಿಮಾಡುವ ಕಾರ್ಯದಲ್ಲಿ ನಿರತವಾಗಿವೆ. ಬಹುತೇಕ ಹುರಿ ಮಾಡುವ ಘಟಕಗಳು ಶಿಡ್ಲಘಟ್ಟದಲ್ಲಿ ಕೇಂದ್ರೀಕೃತವಾಗಿದ್ದರೂ ಚಿಂತಾಮಣಿ, ಚಿಕ್ಕಬಳ್ಳಾಪುರ ಮತ್ತು ಕೋಲಾರಗಳಲ್ಲೂ ಕೆಲವು ಘಟಕಗಳು ಸ್ಥಾಪಿತವಾಗಿವೆ.

**ರೇಷ್ಮೆ ವಸ್ತ್ರ ತಯಾರಿಕೆ:** ರೇಷ್ಮೆ ಸೀರೆಯನ್ನು ತಯಾರಿಸುವ ಗೃಹ ಉದ್ಯಮಗಳು ಚಿಂತಾಮಣಿ ತಾಲೂಕಿನ ಕೋನಪಲ್ಲಿ, ತಿಮ್ಮಸಂದ್ರ, ನೆರ್ನಕಲ್ಲು ಗ್ರಾಮಗಳಲ್ಲೂ, ಶ್ರೀನಿವಾಸಪುರ ತಾಲ್ಲೂಕಿನ ಯಲ್ದೂರು, ಗೌರಿಬಿದನೂರು ತಾಲೂಕಿನ ನಗರಗೆರೆ, ಮುಳಬಾಗಲು ತಾಲ್ಲೂಕಿನ ತಾಯಲೂರು, ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ, ಮೆಂಕಟಾಪುರ, ಬೈಪಲ್ಲಿಗಳಲ್ಲೂ ಸ್ಥಾಪಿತವಾಗಿವೆ. ಈ ಉದ್ಯಮಗಳು ತಯಾರಿಸಿದ ರೇಷ್ಮೆ ಸೀರೆಗಳನ್ನು ಬೆಂಗಳೂರು, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ನಗರಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ವಿವರಗಳಿಗೆ ಮುಂದಿನ ಕೋಷ್ಟಕ ೫.೨೩ಅನ್ನು ನೋಡಿ. (ಹೆಚ್ಚಿನ ವಿವರಗಳಿಗೆ ಅಧ್ಯಾಯ–೮ ಅನ್ನು ನೋಡಿ)

**ಕೋಷ್ಟಕ ೫.೨೩ ರೇಷ್ಮೆ ಕೈಗಾರಿಕೆಗೆ ಸಂಬಂಧಿಸಿದ ವಿವರ**

| ಘಟಕಗಳು | ಸಂಖ್ಯೆ | ಬಂಡವಾಳ ಹೂಡಿಕೆ (ಲಕ್ಷ ರೂಗಳಲ್ಲಿ) | ಉದ್ಯೋಗ ರಚನೆ |
|---|---|---|---|
| ೧ | ೨ | ೩ | ೪ |
| **೧. ರೇಷ್ಮೆನೂಲು ತೆಗೆಯುವ ಘಟಕಗಳು** | ೧,೬೭೫ | ೧,೮೩೦.೪೦ | ೧೯೦೫ |
| **೨. ರೇಷ್ಮೆ ಹುರಿ ಮಾಡುವ ಘಟಕಗಳು** | ೧೭ | ೪೬೫೦ | ೫೭೦ |

ಮುಂದುವರಿದಿದೆ.............

| | | | |
|---|---|---|---|
| ೩. ಕೈಮಗ್ಗದ ಬಟ್ಟೆಯ ಘಟಕಗಳ ತಯಾರಿಕೆ | ೮೫ | ೬೬೫.೮೦ | ೨,೪೪೦ |
| ೫. ವಿದ್ಯುತ್ ಮಗ್ಗಗಳ ಘಟಕಗಳು | ೬೫ | ೧೪೦೫೦ | ೭೦ |
| ಒಟ್ಟು | ೨,೬೦೧ | ೩,೧೪೩.೨೦ | ೧೬,೧೭೫ |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ

## ೨೦೦೨–೦೩ರಲ್ಲಿ ರೇಷ್ಮೆ ಇಲಾಖೆಯಲ್ಲಿ ಆದ ಆರ್ಥಿಕ ಮತ್ತು ಭೌತಿಕ ಸಾಧನೆಗಳ ವಿವರ

ಆರ್ಥಿಕ ಗುರಿ – ಲಕ್ಷ ರೂ.ಗಳಲ್ಲಿ,
ಭೌತಿಕ ಗುರಿ – ಸಂಖ್ಯೆಗಳಲ್ಲಿ

| ಕ್ರ. ಸಂ. | ವಿವರಗಳು | ಆರ್ಥಿಕ | | ಭೌತಿಕ | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| ೧ | ೨ | ೩ | ೪ | ೫ | ೬ |
| ೧ | ಹೊಸದಾಗಿ ಹಿಪ್ಪುನೇರಳೆ ನಾಟಿ (ಹೆಕ್ಟೇರುಗಳಲ್ಲಿ) | – | – | ೮೦೦ | ೭೦೦ |
| ೨. | ರೇಷ್ಮೆ ಮೊಟ್ಟೆ ವಿತರಣೆ (ಲಕ್ಷಗಳಲ್ಲಿ) | – | – | ೫೮೩ | ೪೦೦ |
| ೩. | ರೇಷ್ಮೆಗೂಡಿನ ಉತ್ಪಾದನೆ (ಟನ್ನುಗಳಲ್ಲಿ) | – | – | ೨೫,೬೪೫ | ೧೮,೨೪೫ |
| ೪. | ಸಣ್ಣ ಉಳಿತಾಯ ಯೋಜನೆ (ಲಕ್ಷಗಳಲ್ಲಿ) | ೧೦೦ | ೧೩.೬೧ | ೧,೦೦೦ | ೪೧೦ |
| ೫ | ಬ್ಯಾಂಕ್ ಸಾಲ ಯೋಜನೆ: | | | | |
| ಅ) | ಹಿಪ್ಪುನೇರಳೆ ನಾಟಿಗಾಗಿ | ೬೦೫ | ೩.೨೬ | ೬೫ | ೩೪ |
| ಆ) | ಸಲಕರಣೆಗಳಿಗಾಗಿ | ೧,೨೦೦ | ೫೧೬ | ೬೫೦ | ೨೯ |
| ಇ) | ರೆಂಬೆ ಮಾದರಿ ಸಲಕರಣೆಗಳಿಗಾಗಿ | ೩೯೬ | ೬೬೪ | ೧೨೦೦ | ೨೨ |
| ಈ) | ರೇಷ್ಮೆ ಹುಳು ಸಾಕುವ ಮನೆಗಾಗಿ | ೪೯೬–೩೫ | ೧೦೨–೫೯ | ೯೫೫ | ೧೬೩ |
| ಉ) | ರೆಂಬೆ ಮಾದರಿ ರೇಷ್ಮೆ ಹುಳು ಸಾಕಣೆ ಮನೆಗಾಗಿ | ೯೮೫–೬೬ | ೨೮೮–೨೪ | ೪೦೬ | ೧೦೯ |
| ೬ | ಎಂ. ಎಂ. ಆರ್. ಯೋಜನೆಗಳು | | | | |
| ಅ) | ಕೃಷಿ ಕ್ಷೇತ್ರಗಳು | ೦.೩೮ | ೦.೨೩ | ೧.೦೦ | ೦.೫೧ |
| ಆ) | ಸಲಹಾ ಸೇವೆಗಳು, ಪ್ರಾತ್ಯಕ್ಷತೆ ಶ್ರವಣ ದೃಶ್ಯ | ೧.೫೬ | ೦.೯೬ | ೯೬ | ೮೮ |
| ಇ) | ತರಬೇತಿ | ೨.೧೦ | ೧.೩೯ | ೧೪೬೦ | ೧೪೬೦ |
| ಈ) | ದ್ವಿತಳಿ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ | ೧.೫೬ | ೧.೦೪೦ | ೧೫,೬೦೦ | ೧೦,೪೪೪ |
| ಉ) | ರೇಷ್ಮೆ ಹುಳು ಸಾಕುವ ಮನೆಗೆ ಶೇ. ೨೫ ಸಹಾಯಧನ | ೦.೪೧ | ೦.೪೦೫ | ೩ | ೪ |
| ಊ) | ರೋಗ ನಿಯಂತ್ರಣಾ ಕಾರ್ಯಕ್ರಮ | ೨೫.೦೨ | ೧೫.೪೬೦ | ೨೩,೫೦೦ | ೧೩,೯೪೦ |
| ಋ) | ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ | ೦.೧೨ | ೦.೦೬೫ | ೮೦ | ೮೦ |
| ೠ) | ವಿಶೇಷ ಘಟಕ ಯೋಜನೆ (ರಾಜ್ಯ ನೆರವು) | ೧೧.೮೩ | ೯.೫೪ | ೧೯೬ | ೧೫೯ |
| ಎ) | ಗಿರಿಜನ ಉಪಯೋಜನೆ (ರಾಜ್ಯ ನೆರವು) | ೬೪೦ | ೬೩೮೦ | ೧೮೩ | ೧೮೩ |
| ಏ) | ವಿಶೇಷ ಘಟಕ ಯೋಜನೆ (ಕೇಂದ್ರ ನೆರವು) | ೧೪.೩೩ | ೧೪.೩೩ | ೧೮೬ | ೧೮೬ |
| ಐ) | ಗಿರಿಜನ ಉಪಯೋಜನೆ (ಕೇಂದ್ರ ನೆರವು) | ೪.೮೦ | ೪.೮೦೦ | ೮೦ | ೮೦ |

ಮುಂದುವರಿದಿದೆ.............

| ೧ | ೨ | ೩ | ೪ | ೫ | ೬ |
|---|---|---|---|---|---|
| ೭ | **ಕೆಟಲಿಟಿಕ್ ಅಭಿವೃದ್ಧಿ ಯೋಜನೆ (ರಾಜ್ಯ ವಲಯ)** | | | | |
| ಅ) | ರೇಷ್ಮೆ ಹುಳು ಸಾಕುವ ಮನೆಗೆ ಸಹಾಯಧನ | | | | |
| ೧. | ರೂ. ೨೫,೦೦೦.೦೦ | ೫೬೨೫ | ೫೭೫ | ೨೫ | ೨೫ |
| ೨. | ರೂ. ೫೦,೦೦೦.೦೦ | ೮೭೦೦ | ೨೨೦೦ | ೧೭೪ | ೧೭೪ |
| ಆ) | ಹನಿ ನೀರಾವರಿ ಉಪಕರಣ ಅಳವಡಿಕೆಗೆ ಸಹಾಯಧನ (ಹೆಕ್ಟೇರುಗಳಲ್ಲಿ) | ೩೩೨೫ | ೧೮೨೮ | ೧೬೬ | ೧೬೭ |

**ಪುಷ್ಪಕೃಷಿ (ಫ್ಲೋರಿಕಲ್ಚರ್)**

ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ, ಮುಖ್ಯವಾಗಿ ಚಿಂತಾಮಣಿ, ಶಿಡ್ಲಘಟ್ಟ ಮತ್ತು ಕೋಲಾರ ತಾಲ್ಲೂಕುಗಳಲ್ಲಿ ಪುಷ್ಪ ಕೃಷಿ ಕೈಗಾರಿಕೆ ಅಭಿವೃದ್ಧಿಗೆ ಬಂದಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ ದೊಡ್ಡ ಪ್ರಮಾಣದ ನಾಲ್ಕು ಪುಷ್ಪ ಕೃಷಿ ಉದ್ಯಮಗಳಿವೆ. ಅವುಗಳೆಂದರೆ:

೧ ಗ್ರಾಂಡ್ಲೀಸ್ ಫ್ಲೋರ (ಲಿ)
೨ ಏಷ್ಯನ್ ಫ್ಲೋರ (ಲಿ)
೩ ಗ್ರೀನ್ ಫೀಲ್ಡ್ ಫ್ಲೋರ (ಲಿ)
೪. ಹೆವನ್ಸ್ ಅಗ್ರೋಟೆಕ್ ಪ್ರೈ.(ಲಿ)

ಗ್ರಾಂಡ್ಲೀಸ್ ಫ್ಲೋರ ಉದ್ಯಮವು ೫೮೬.೪೫ ಲಕ್ಷ ರೂಗಳ ಬಂಡವಾಳದಿಂದ ಸ್ಥಾಪಿತವಾಗಿದೆ.

ಈ ಉದ್ಯಮದಲ್ಲಿ ೭೦ ಉದ್ಯೋಗಿಗಳಿದ್ದಾರೆ. ಏಷ್ಯನ್ ಫ್ಲೋರಾ (ಲಿ) ಉದ್ಯಮವು ೯೯.೬೬ ಲಕ್ಷ ರೂ.ಗಳ ಬಂಡವಾಳದಿಂದ ಸ್ಥಾಪನೆಯಾಗಿದೆ. ಈ ಉದ್ಯಮದಲ್ಲಿ ೬೦ ಉದ್ಯೋಗಿಗಳಿದ್ದಾರೆ. ಗ್ರೀನ್ ಫೀಲ್ಡ್ ಫ್ಲೋರಾ (ಲಿ) ಉದ್ಯಮವು ೯೯.೬೬ ಲಕ್ಷ ರೂಗಳಿಂದ ಸ್ಥಾಪನೆಯಾಗಿದೆ. ಇದರಲ್ಲಿ ೯೦ ಉದ್ಯೋಗಿಗಳಿದ್ದಾರೆ. ಹೆವನ್ಸ್ ಆಗ್ರೋಟೆಕ್ (ಲಿ) ಉದ್ಯಮವು ೬೧೭ ಲಕ್ಷ ರೂ.ಗಳ ಬಂಡವಾಳ ಹೂಡಿಕೆಯಿಂದ ಸ್ಥಾಪಿತವಾಗಿದೆ. ಈ ಉದ್ಯಮದಲ್ಲಿ ೭೫ ಜನ ಉದ್ಯೋಗಿಗಳಿದ್ದಾರೆ.

ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಪುಷ್ಪ ಕೃಷಿಯ ೩ ಉದ್ಯಮಗಳಿವೆ.

೧ ಯೂನಿವರ್ಸಲ್ ಫ್ಲೋರಾ (ಲಿ)
೨. ಈಸ್ಟರ್ ಫ್ಲೋರಿಟೆಕ್ (ಲಿ)
೩. ಟ್ರಾಪಿಕಲ್ ಫ್ಲೋರೀಟೆಕ್ (ಲಿ)

ಯೂನಿವರ್ಸಲ್ ಪುಷ್ಪ ಕೃಷಿಯು ೨೫೭.೨೪ ಲಕ್ಷ ರೂ.ಗಳ ಬಂಡವಾಳದಿಂದ ಸ್ಥಾಪಿತವಾಗಿದೆ. ಈ ಉದ್ಯಮದಲ್ಲಿ ೭೫ ಮಂದಿ ಕೆಲಸಗಾರರಿದ್ದಾರೆ. ಈಸ್ಟನ್ ಫ್ಲೋರಿಟೆಕ್ (ಲಿ) ೯೨೮.೩೯ ಲಕ್ಷ ರೂ.ಗಳಿಂದ ಸ್ಥಾಪನೆಯಾಗಿದೆ. ಈ ಉದ್ಯಮದಲ್ಲಿ ೧೪೮ ಉದ್ಯೋಗಿಗಳಿದ್ದಾರೆ. ಟ್ರಾಪಿಕಲ್ ಫ್ಲೋರಿಟೆಕ್ (ಲಿ) ೩೭೯.೧೩ ಲಕ್ಷ ರೂ.ಗಳಿಂದ ಈ ಉದ್ಯಮ ಸ್ಥಾಪನೆಯಾಗಿದೆ. ಈ ಉದ್ಯಮದಲ್ಲಿ ೩೫ ಕೆಲಸಗಾರರಿದ್ದಾರೆ.

ಕೋಲಾರ ತಾಲ್ಲೂಕಿನಲ್ಲಿ ಮೆಕ್ಸಿಜೆನ್ ಫ್ಲೋರೀಟೆಕ್ (ಲಿ) ಎಂಬ ಉದ್ಯಮವನ್ನು ೬೪೦ ಲಕ್ಷ ರೂ.ಗಳ ಬಂಡವಾಳದಿಂದ ಸ್ಥಾಪಿಸಲಾಗಿದ್ದು, ೮೦ ಮಂದಿ ಕೆಲಸಗಾರರಿದ್ದಾರೆ. ಮೆಜೆಸ್ಟಿಕ್ ಫ್ಲೋರಿಟೆಕ್, ಬೆತ್ತನಿ, ಕೋಲಾರ ತಾಲೂಕು ಹಾಗೂ ನೆಕ್ಸಿಜೆನ್ ಫ್ಲೋರಿಟೆಕ್ (ಲಿ) ಬೆಳ್ಳಹಳ್ಳಿ, ಕೋಲಾರ ತಾಲೂಕು ಇವುಗಳು ಹೈಟೆಕ್ ಪುಷ್ಪಾಭಿವೃದ್ಧಿ ಘಟಕಗಳಾಗಿವೆ. ಇವೆರಡು ಗುಲಾಬಿ ಹೂ ಕೃಷಿಯಲ್ಲಿ ತೊಡಗಿವೆ. ಈ ಲಾಭದಾಯಕ ಉದ್ಯಮಗಳು ಅತ್ಯಾಧುನಿಕ ಕೃಷಿ ವಿಧಾನವನ್ನು ಬಳಸಿ ಪಾಶ್ಚಾತ್ಯರ ಅಭಿರುಚಿಗೆ

ತಕ್ಕಂತೆ ಉದ್ದನೆ ಕಾಂಡವುಳ್ಳ ಗುಲಾಬಿ ಹೂವು, ಸುವಾಸನೆಯಿಂದ ಕೂಡಿದ ಇತರ ಜಾತಿಯ ಹೂವುಗಳನ್ನು ಬೆಳೆದು, ಅವು ಕೆಡದಂತೆ ಪ್ಯಾಕ್ ಮಾಡಿ ರಫ್ತುಮಾಡುತ್ತಿವೆ.

**ಕೋಲಾರ ಜಿಲ್ಲೆಯಲ್ಲಿರುವ ಹೈಟೆಕ್ ಪುಷ್ಪಾಭಿವೃದ್ಧಿ ಘಟಕ**

೧ ಮೆಜೆಸ್ಟಿಕ್ ಫ್ಲೋರಿಟೆಕ್ ಬೆತ್ತನಿ ಕೋಲಾರ ತಾಲ್ಲೂಕು– ಗುಲಾಬಿ

೨. ನೆಕ್ಸಿಜೆನ್ ಫ್ಲೋರಿಟೆಕ್ ಲಿ. ಬೆಳ್ಳಹಳ್ಳಿ ವೇಮಗಲ್ ಹೋಬಳಿ ಕೋಲಾರ ತಾಲ್ಲೂಕು– ಗುಲಾಬಿ

**ಕೋಲಾರ ಜಿಲ್ಲೆಯಲ್ಲಿರುವ ಶೀಥಲಗೃಹಗಳ ಹೆಸರು ಮತ್ತು ಅವುಗಳ ಸಾಮರ್ಥ್ಯ**

| ಕ್ರಸಂ. | ಶೀಥಲಗೃಹಗಳ ಹೆಸರು | | | ಸಾಮರ್ಥ್ಯ |
|---|---|---|---|---|
| ೧ | ವಿಶ್ವಾಸ್ ಶೀಥಲಗೃಹ ಬಂಗಾರಪೇಟೆ ತಾಲ್ಲೂಕು | ಖಾಸಗಿ | ಮುಚ್ಚಲ್ಪಟ್ಟಿದೆ | ೮೦೦ ಟನ್ |
| ೨. | ಭವಾನಿ ಶೀಥಲಗೃಹ, ಕೋಲಾರ | ಖಾಸಗಿ | ಕಾರ್ಯನಿರ್ವಹಿಸುತ್ತಿದೆ | ೨೫೦೦ ಟನ್ |
| ೩. | ವೆಂಕಟೇಶ್ವರ ಕೋಲ್ಡ್ ಸ್ಟೋರೇಜ್ | ಖಾಸಗಿ | ಕಾರ್ಯನಿರ್ವಹಿಸುತ್ತಿದೆ | ೩೦೦೦ ಟನ್ |
| ೪. | ಹಾಪ್‌ಕಾಂಸ್ ಕೋಲ್ಡ್ ಸ್ಟೋರೇಜ್ | ಸಹಕಾರಿ | ಮುಚ್ಚಲ್ಪಟ್ಟಿದೆ | ೫೫೦ ಟನ್ |
| ೫ | ಮಾರ್ಕೆಟಿಂಗ್ ಫೆಡರೇಷನ್ ಕೋಲ್ಡ್ ಸ್ಟೋರೇಜ್ ಕೋಲಾರ | ಸಹಕಾರಿ | ಕಾರ್ಯನಿರ್ವಹಿಸುತ್ತಿದೆ. | ೨೫೦೦ ಟನ್ |
| ೬ | ಸಪ್ತಗಿರಿ ಶೀಥಲಗೃಹ ಚಿಕ್ಕಬಳ್ಳಾಪುರ | ಖಾಸಗಿ | ಕಾರ್ಯನಿರ್ವಹಿಸುತ್ತಿದೆ. | ೨೫೦೦ ಟನ್ |
| ೭ | ನಂದಿ ಶೀಥಲಗೃಹ ಚಿಕ್ಕಬಳ್ಳಾಪುರ | ಖಾಸಗಿ | ಮುಚ್ಚಲ್ಪಟ್ಟಿದೆ | ೨೪೦೦ ಟನ್ |
| ೮ | ಹಾಪ್‌ಕಾಂಸ್ ಶೀಥಲಗೃಹ, ಚಿಕ್ಕಬಳ್ಳಾಪುರ | ಸರ್ಕಾರಿ | ಮುಚ್ಚಲ್ಪಟ್ಟಿದೆ | ೮೦೦ ಟನ್ |
| ೯. | ಎಪಿಎಂಸಿ ಯಾರ್ಡ್ ಶೀಥಲಗೃಹ, ಚಿಕ್ಕಬಳ್ಳಾಪುರ | ಸರ್ಕಾರಿ | ಮುಚ್ಚಲ್ಪಟ್ಟಿದೆ | ३८೦ ಟನ್ |

**ಆಂತರಿಕ ಸಾಧನ ಸೌಲಭ್ಯಗಳು**

ಯಾವುದೇ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಯಾಗಬೇಕಾದರೆ ಪೂರಕ ವಸ್ತುಗಳು ವಿಪುಲವಾಗಿರ ಬೇಕು. ಇದರಲ್ಲಿ ಸಾರಿಗೆ ಸೌಲಭ್ಯ ಒಂದು ಮುಖ್ಯವಾದ ಪೂರಕ ವ್ಯವಸ್ಥೆ. ಜಿಲ್ಲೆಯಲ್ಲಿ ೧೨೯ ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ, ೪೩೩ ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ, ೧,೫೯೮ ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು, ೬೦ ಕಿ.ಮೀ. ಉದ್ದದ ಇತರೆ ಜಿಲ್ಲಾ ರಸ್ತೆಗಳು, ೪,೩೬೭ ಕಿ.ಮೀ. ಉದ್ದದ ಹಳ್ಳಿ ರಸ್ತೆಗಳು, ೨,೨೧೨ ಕಿ.ಮೀ. ಉದ್ದದ ತಾಲೂಕು ಬೋರ್ಡ್ ರಸ್ತೆಗಳು, ೩೫೬ ಕಿ.ಮೀ ಉದ್ದದ ಮುನಿಸಿಪಾಲಿಟಿ ರಸ್ತೆಗಳು ಹೀಗೆ ಒಟ್ಟು ೬,೫೬೮ ಕಿ.ಮೀ ಉದ್ದದ ರಸ್ತೆ ಸಂಪರ್ಕವಿದೆ. ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳು ಉತ್ತಮವಾಗಿರುವುದರಿಂದ ವಸ್ತುಗಳ ಸಾಗಣೆಯನ್ನು ಕ್ಷಿಪ್ರವಾಗಿ ಮಾಡಲು ಸಾಧ್ಯವಾಗಿದೆ.

ಕೋಲಾರ ಜಿಲ್ಲೆಯ ಮೂಲಕ ಬೆಂಗಳೂರು ಮತ್ತು ಚೆನ್ನೈಗೆ ಸಂಪರ್ಕ ಕಲ್ಪಿಸುವ ರೈಲು ಮಾರ್ಗವು ಮಾಲೂರು ಮತ್ತು ಬಂಗಾರಪೇಟೆಗಳ ಮುಖಾಂತರ ಹಾದುಹೋಗುತ್ತದೆ. ಬಂಗಾರಪೇಟೆಯಿಂದ ಕೋಲಾರ ನಗರಕ್ಕೂ ಸಂಪರ್ಕ ಕಲ್ಪಿಸುವ ರೈಲು ಮಾರ್ಗವಿದೆ. ಬೆಂಗಳೂರು–ಗುಂತಕಲ್‌ಗಳನ್ನು ಸಂಪರ್ಕಿಸುವ ಬ್ರಾಡ್‌ಗೇಜ್ ರೈಲು ಮಾರ್ಗವು ಗೌರಿಬಿದನೂರು ಮೂಲಕ ಹಾದುಹೋಗುವುದರಿಂದ ವಸ್ತುಗಳ ಸಾಗಾಣಿಕೆಗೆ ಬಹಳ ಅನುಕೂಲವಾಗಿದೆ.

ಜಿಲ್ಲೆಯಲ್ಲಿ ೧೦ ಪಾಲಿಟೆಕ್ನಿಕ್ ಶಾಲೆಗಳೂ, ಎರಡು ಇಂಜನಿಯರಿಂಗ್ ಕಾಲೇಜುಗಳು, ೧೦ ಕೈಗಾರಿಕಾ ತರಬೇತಿ ಶಾಲೆಗಳೂ ಇವೆ. ಕೋಲಾರ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ೫,೪೪೩ ಪದವೀಧರರು ೧,೫೪೯ ಡಿಪ್ಲೋಮೋ

ಪದವೀಧರರೂ. ೬,೦೨೪ ಕೈಗಾರಿಕಾ ತರಬೇತಿ ಪಡೆದವರು ದಾಖಲಾಗಿದ್ದಾರೆ. ಜಿಲ್ಲೆಯಲ್ಲಿ ತಾಂತ್ರಿಕ ಹುದ್ದೆಗಳಿಗೆ ಜಿಲ್ಲೆಯ ಅಭ್ಯರ್ಥಿಗಳಿಗೇ ಹೆಚ್ಚಿನ ಅವಕಾಶವಿರುತ್ತದೆ.

ಜಿಲ್ಲೆಯಲ್ಲಿ ಬ್ಯಾಂಕ್ ಸೌಲಭ್ಯ ಉತ್ತಮವಾಗಿದೆ. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ನೀಡುವುದಕ್ಕೆ ಸಮರ್ಥವಾಗಿರುವ ಸ್ಟೇಟ್ ಬ್ಯಾಂಕಿನ ೩೮ ಶಾಖೆಗಳೂ, ಕೆನರಾ ಬ್ಯಾಂಕಿನ ೩೮ ಶಾಖೆಗಳೂ, ವೈಶ್ಯಾ ಬ್ಯಾಂಕು ೧೮ ಶಾಖೆಗಳೂ, ಇತರ ಬ್ಯಾಂಕುಗಳ ೩೦ ಶಾಖೆಗಳು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಸ್ಥಾಪಿತವಾಗಿವೆ. ದೀರ್ಘಾವಧಿ ಸಾಲವನ್ನು ನೀಡುವುದಕ್ಕೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಕೊಲಾರ ನಗರದಲ್ಲಿ ಒಂದು ಶಾಖೆಯನ್ನು ತೆರೆದಿದೆ. ಇವಲ್ಲದೆ ೬೫ ಗ್ರಾಮೀಣ ಬ್ಯಾಂಕುಗಳೂ, ೧೬ ಜಿಲ್ಲಾ ಕೈಗಾರಿಕಾ ಬ್ಯಾಂಕುಗಳೂ ಇವೆ. ಆದ್ದರಿಂದ ಕೈಗಾರಿಕಾಭಿವೃದ್ಧಿಗೆ ಅಗತ್ಯವಾದ ಎಲ್ಲ ರೀತಿಯ ಸಾಲ ದೊರೆಯುವುದಕ್ಕೆ ಅವಕಾಶವಿದೆ.

ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಯನ್ನು ಚುರುಕುಗೊಳಿಸುವುದಕ್ಕಾಗಿ ರಾಜ್ಯದ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮವು ಜಿಲ್ಲೆಯ ಆಯಕಟ್ಟಿನ ಸ್ಥಳಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಿದೆ. ಇದರಿಂದ ಕೈಗಾರಿಕಾಭಿವೃದ್ಧಿಯಾಗುವುದಲ್ಲದೇ, ಕೈಗಾರಿಕಾ ವಿಕೇಂದ್ರೀಕರಣವೂ ಆಗುವುದೆಂದು ಹೇಳಲಾಗಿದೆ. ಕೈಗಾರಿಕಾ ಎಸ್ಟೇಟುಗಳಲ್ಲಿ ಶೆಡ್ಡುಗಳು, ವಿದ್ಯುತ್ ಪೂರೈಕೆ, ಹಣಕಾಸಿನ ಸಹಾಯ, ಉಪಕರಣಗಳ ಲಭ್ಯತೆ ಮುಂತಾದ ಅನುಕೂಲಗಳಿರುತ್ತವೆ. ಕೋಲಾರ ಜಿಲ್ಲೆಯಲ್ಲಿ ಈ ಕೆಳಗೆ ನಮೂದಿಸಿರುವ ಕಡೆಗಳಲ್ಲಿ ಕೈಗಾರಿಕಾ ನಿವೇಶನಗಳನ್ನು ನಿರ್ಮಿಸಲಾಗಿದೆ.

### ೧. ಟಮಕ ಕೈಗಾರಿಕಾ ಎಸ್ಟೇಟ್, ಕೋಲಾರ

ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕಾಭಿವೃದ್ಧಿ ಮಂಡಲಿಯು ಮೇಲ್ಕಂಡ ಪ್ರದೇಶದಲ್ಲಿ ೨೫.೮೨ ಎಕರೆ ವಿಸ್ತೀರ್ಣದ ಸ್ಥಳದಲ್ಲಿ ೩೨ ಶೆಡ್ಡುಗಳನ್ನು ಕಟ್ಟಿಸಿದೆ. ಇದರಲ್ಲಿ ೨೬ ಶೆಡ್ಡುಗಳು 'ಸಿ' ಮಾದರಿಗೂ, ಆರು ಶೆಡ್ಡುಗಳು 'ಡಿ' ಮಾದರಿಗೂ ಸೇರಿವೆ. ಈ ಕೈಗಾರಿಕಾ ಎಸ್ಟೇಟಿನ ಸಮೀಪದಲ್ಲೇ ಮೈಸೂರು ಲ್ಯಾಂಪ್ ಕಾರ್ಖಾನೆಗೆ ಬೇಕಾದ ಸಣ್ಣಪುಟ್ಟ ವಸ್ತುಗಳನ್ನು ತಯಾರಿಸುವ ಅಧೀನ ಕೈಗಾರಿಕೆಗಳಿಗೆ ೨೯ ಪ್ಲಾಟುಗಳನ್ನು ನಿಗಮವು ಕೊಟ್ಟಿವೆ. ಈಗ ಮೈಸೂರು ಲ್ಯಾಂಪ್ ಕಾರ್ಖಾನೆಯು ಮುಚ್ಚಲ್ಪಟ್ಟಿರುವುದರಿಂದ ಬಹುತೇಕ ಪ್ಲಾಟುಗಳು ಖಾಲಿಯಾಗಿವೆ. ಯಾವುದೇ ಕೈಗಾರಿಕಾ ಘಟಕಕ್ಕೂ ಹಂಚದೇ ಇರುವ ಏಳು ಪ್ಲಾಟುಗಳು ಕೋಲಾರ ಜಿಲ್ಲಾ ಕೈಗಾರಿಕಾ ಕೇಂದ್ರದ ವಶದಲ್ಲೇ ಇವೆ.

### ೨. ರಘುಪತಿ ಅಗ್ರಹಾರದ ಎಸ್ಟೇಟು, ಕ್ಯಾಲನೂರು, ಕೋಲಾರ ತಾಲ್ಲೂಕು

ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ೩.೦೭ ಎಕರೆ ಭೂಮಿಯಲ್ಲಿ ೧೦ 'ಸಿ' ಮಾದರಿಯ ಶೆಡ್ಡುಗಳುನ್ನು ನಿರ್ಮಿಸಿದೆ. ಕ್ಯಾಲನೂರಿನಲ್ಲಿ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಿ, ರೇಷ್ಮೆ ಕೈಗಾರಿಕಾ ಎಸ್ಟೇಟನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ.

### ೩. ಮಾಲೂರು ಕೈಗಾರಿಕಾ ಎಸ್ಟೇಟು

ಮಾಲೂರಿನಲ್ಲಿ ೬.೫೬ ಎಕರೆ ಭೂಮಿಯನ್ನು ವಶಪಡಿಸಿಕೊಂಡು, 'ಸಿ' ಮಾದರಿಯ ಆರು ಶೆಡ್ಡುಗಳನ್ನು 'ಡಿ' ಮಾದರಿಯ ಎಂಟು ಶೆಡ್ಡುಗಳನ್ನು ಮತ್ತು ಅತಿ ಸಣ್ಣದಾದ ನಾಲ್ಕು ಶೆಡ್ಡುಗಳನ್ನು ಒಟ್ಟು ೧೮ ಶೆಡ್ಡುಗಳನ್ನು ನಿಗಮವು ಕಟ್ಟಿಸಿದೆ. ಈ ಕೈಗಾರಿಕಾ ಎಸ್ಟೇಟಿನಲ್ಲಿ ಎಲ್ಲಾ ಪೂರಕ ಸೌಲಭ್ಯಗಳನ್ನು ಕೈಗಾರಿಕಾ ಘಟಕಗಳಿಗೆ ಒದಗಿಸಲಾಗಿದೆ. ಹಾಗೂ ಹಲವು ಸಣ್ಣ ಶೆಡ್ಡುಗಳನ್ನು ನಿರ್ಮಿಸುವುದಕ್ಕೆ ಅವಕಾಶವಿದೆ. ಆದರೆ ಈ ಶೆಡ್ಡುಗಳಿಗೆ ಸೀಮಿತ ಬೇಡಿಕೆ ಇರುವುದರಿಂದ ನಿರ್ಮಾಣ ಕಾರ್ಯ ಪ್ರಾರಂಭವಾಗಿಲ್ಲ.

### ೪. ಕೆ.ಜಿ.ಎಫ್.ನ ಅಧೀನ ಕೈಗಾರಿಕೆಗಳ ಎಸ್ಟೇಟು

ಬಂಗಾರ ಪೇಟೆ ತಾಲ್ಲೂಕಿಗೆ ಸೇರಿದ ಕೆ.ಜಿ.ಎಫ್ ನಗರದ ಆ್ಯಂಡರಸನ್‌ಪೇಟೆಯಲ್ಲಿ ಕೋಲಾರದ ಚಿನ್ನದ ಗಣಿಗೆ ಬೇಕಾದ ಉಪಕರಣಗಳನ್ನು ತಯಾರಿಸಲು ಒಂದು ಅಧೀನ ಕೈಗಾರಿಕಾ ಎಸ್ಟೇಟನ್ನು ಕಟ್ಟಲಾಗಿದೆ. ಈ ಎಸ್ಟೇಟಿನಲ್ಲಿ ೧೪ 'ಎ' ಮಾದರಿಯ

ಶೆಡ್ಡುಗಳು, ೧೨ 'ಬಿ' ಮಾದರಿಯ ಶೆಡ್ಡುಗಳು, ಎಂಟು 'ಸಿ' ಮಾದರಿಯ ಶೆಡ್ಡುಗಳೂ ಮತ್ತು ಎಂಟು 'ಡಿ' ಮಾದರಿಯ ಶೆಡ್ಡುಗಳೂ, ಹೀಗೆ ಒಟ್ಟು ೪೨ ಶೆಡ್ಡುಗಳಿವೆ. ಈ ಎಲ್ಲಾ ಶೆಡ್ಡುಗಳನ್ನು ೧೬ ಎಕರೆ ಪ್ರದೇಶದಲ್ಲಿ ಕಟ್ಟಲಾಗಿದೆ. ಈಗ ಕೋಲಾರದ ಚಿನ್ನದ ಗಣಿಯು ಮುಚ್ಚಲ್ಪಟ್ಟಿರುವುದರಿಂದ, ಈ ಎಸ್ಟೇಟಿನಲ್ಲಿ ಕೆಲವು ಕೈಗಾರಿಕಾ ಘಟಕಗಳು ಮಾತ್ರ ಇಂಜನಿಯರಿಂಗ್ ವಸ್ತುಗಳನ್ನು ಬೇಡಿಕೆ ಬಂದಾಗ ತಯಾರಿಸುತ್ತಿವೆ.

### ೫. ಮುಳುಬಾಗಿಲು ಕೈಗಾರಿಕಾ ಎಸ್ಟೇಟು

ಕೈಗಾರಿಕಾಭಿವೃದ್ಧಿ ನಿಗಮವು ಐದು ಎಕರೆ ಭೂಮಿಯನ್ನು ವಶಪಡಿಸಿಕೊಂಡು ನಾಲ್ಕು 'ಸಿ' ಮಾದರಿಯ ಶೆಡ್ಡುಗಳನ್ನೂ, ಎರಡು 'ಡಿ' ಮಾದರಿಯ ಶೆಡ್ಡುಗಳನ್ನೂ ಮತ್ತು ನಾಲ್ಕು ಸಣ್ಣ ಶೆಡ್ಡುಗಳನ್ನೂ ಹೀಗೆ ಒಟ್ಟು ೧೦ ಶೆಡ್ಡುಗಳನ್ನು ನಿರ್ಮಿಸಿದೆ. ಇನ್ನು ಹಲವು ಸಣ್ಣ ಶೆಡ್ಡುಗಳನ್ನು ಕಟ್ಟುವುದಕ್ಕೆ ಅವಕಾಶವಿದೆ.

### ೬. ಚಿಂತಾಮಣಿಯ ಕೈಗಾರಿಕಾ ಎಸ್ಟೇಟು

ಚಿಂತಾಮಣಿ ನಗರಕ್ಕೆ ನಾಲ್ಕು ಕಿ.ಲೋ.ಮೀಟರ್ ದೂರದಲ್ಲಿ ಬೆಂಗಳೂರು ರಸ್ತೆಯಂಚಲ್ಲಿ ೨೧.೩೨ ಎಕರೆ ವಿಸ್ತಾರವಾದ ಭೂ ಪ್ರದೇಶದಲ್ಲಿ 'ಸಿ' ಮಾದರಿಯ ನಾಲ್ಕು ಶೆಡ್ಡುಗಳನ್ನು 'ಡಿ' ಮಾದರಿಯ ೧೦ ಶೆಡ್ಡುಗಳನ್ನೂ ಆರು ಅತಿ ಸಣ್ಣ ಶೆಡ್ದುಗಳನ್ನೂ ಹೀಗೆ ಒಟ್ಟು ೨೦ ಶೆಡ್ಡುಗಳನ್ನು ಕಟ್ಟಲಾಗಿದೆ.

### ೭. ಶಿಡ್ಲಘಟ್ಟದ ಕೈಗಾರಿಕಾ ಎಸ್ಟೇಟು

ಶಿಡ್ಲಘಟ್ಟ ಸಮೀಪದ ಹನುಮಂತಪುರದಲ್ಲಿ 'ಸಿ' ಮಾದರಿಯ ಆರು ಶೆಡ್ಡುಗಳನ್ನು ಕಟ್ಟಲಾಗಿದೆ.

### ೮. ಗೌರಿಬಿದನೂರಿನ ಕೈಗಾರಿಕಾ ಎಸ್ಟೇಟು

ಸಣ್ಣ ಕೈಗಾರಿಕಾಭಿವೃದ್ಧಿ ನಿಗಮವು ಗೌರಿಬಿದನೂರಿನಲ್ಲಿ ೫.೩೭ ಎಕರೆ ಭೂಮಿಯನ್ನು ವಶಪಡಿಸಿಕೊಂಡು 'ಸಿ' ಮಾದರಿಯ ಎಂಟು ಶೆಡ್ಡುಗಳನ್ನು ಮತ್ತು ಅತಿಸಣ್ಣ ಮಾದರಿಯ ನಾಲ್ಕು ಶೆಡ್ಡುಗಳನ್ನು ಕಟ್ಟಿಸಿದೆ. ಅಲ್ಲದೆ ಈ ನಿಗಮವು 'ಆರ್' ಮಾದರಿಯ ಪ್ಲಾಟುಗಳನ್ನೂ ವಿಶೇಷ ಮಾದರಿಯ ಎರಡು ಪ್ಲಾಟುಗಳನ್ನೂ ರಚಿಸಿದೆ. ಈ ಶೆಡ್ಡುಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಚಟುವಟಿಕೆಗಳು ನಡೆಯುತ್ತಿವೆ.

ಕೋಲಾರ ಜಿಲ್ಲೆಯಲ್ಲಿ ಬರಗಾಲವು ಮೇಲಿಂದಮೇಲೆ ಸಂಭವಿಸುತ್ತಿರುವುದರಿಂದ, ಇದರ ಶಾಶ್ವತ ಪರಿಹಾರಕ್ಕಾಗಿ ಕೈಗಾರಿಕಾಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ವ್ಯವಸ್ಥೆ ಮಾಡಲು ಡಿ.ಪಿ.ಎ.ಪಿ. ಕೈಗಾರಿಕಾ ಎಸ್ಟೇಟುಗಳು ಎಂಬ ಹೆಸರಿನಲ್ಲಿ ಕೋಲಾರದಲ್ಲಿ ಕುರಿ ತುಪ್ಪಟ ನೇಯುವ ಪ್ರದೇಶದಲ್ಲಿ 'ಸಿ' ಮಾದರಿಯ ೧೨ ಶೆಡ್ಡುಗಳನ್ನೂ, ಅತಿ ಸಣ್ಣದಾದ ೨೧ ಶೆಡ್ಡುಗಳನ್ನೂ ಕಟ್ಟಿಸಲಾಗಿದೆ.

ತಾಲ್ಲೂಕಿನ ನಗರ ಮತ್ತು ಹೋಬಳಿ ಕೇಂದ್ರಗಳಲ್ಲಿ ವಾಸಿಸುತ್ತಿರುವ ಕರಕುಶಲ ಕರ್ಮಿಗಳಿಗಾಗಿ ಅವರ ಕಸುಬು ವೃತ್ತಿಗಳನ್ನು ಪ್ರೋತ್ಸಾಹಿಸಲು, ಎಲ್ಲ ಕಸುಬುದಾರರೂ ಒಟ್ಟಿಗೆ ಸೇರಿ ಕೆಲಸ ಮಾಡುವಂಥ ೫೭ ಸಾಮಾನ್ಯ ಕಾರ್ಯ ಶೆಡ್ಡುಗಳನ್ನು 'ವಿಶ್ವ' ಯೋಜನೆ'ಯ ವ್ಯಾಪ್ತಿಯಲ್ಲಿ ಕಟ್ಟಿಸಲಾಗಿದೆ. ಇವುಗಳಲ್ಲಿ ೫೬ ಶೆಡ್ಡುಗಳನ್ನು ಅತ್ಯಂತ ಸಣ್ಣ ಘಟಕಗಳಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಹಂಚಲಾಗಿದೆ. ಗ್ರಾಮಾಂತರ ಪ್ರದೇಶಗಳ ಕುಶಲಕರ್ಮಿಗಳಿಗೆ ಮತ್ತು ಗೃಹ ಕೈಗಾರಿಕೋದ್ಯಮಿಗಳಿಗೆ ನೆರವಾಗಲು ೨೧ ಶೆಡ್ಡುಗಳನ್ನು ಕಟ್ಟಿಸಲಾಗಿದೆ. ಈ ಶೆಡ್ಡುಗಳಲ್ಲಿ ಎಲ್ಲ ಕುಶಲಕರ್ಮಿಗಳಿಗೆ ಸಾಮಾನ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಎಲ್ಲಾ ಶೆಡ್ಡುಗಳನ್ನು ಕೈಗಾರಿಕಾ ಸಹಕಾರ ಸಂಘಗಳಿಗೂ, ಸರ್ಕಾರೇತರ ಸಂಘಗಳಿಗೂ ಹಂಚಲಾಗಿದೆ. ಸಣ್ಣ ಕೈಗಾರಿಕಾಭಿವೃದ್ಧಿ ನಿಗಮವು ಕೋಲಾರ ಜಿಲ್ಲೆಯ ವಿವಿಧ ಕಡೆಗಳಲ್ಲಿ ನಿರ್ಮಿಸಿದ ಕೈಗಾರಿಕಾ ಎಸ್ಟೇಟುಗಳ ವಿವರಗಳನ್ನು ಕೋಷ್ಟಕ ೫.೨೪ ರಲ್ಲಿ ನೀಡಿದೆ.

**ಕೋಷ್ಟಕ ೫.೨೪**

| ಕ್ರ.ಸಂ. | ತಾಲೂಕು | ಎಸ್ಟೇಟನ್ನು ನಿರ್ಮಿಸಿದ ವರ್ಷ | ವಿಸ್ತೀರ್ಣ | ಶೆಡ್ಡುಗಳ ಸಂಖ್ಯೆ | ವಿಶ್ವ ಯೋಜನೆ | ಎನ್.ಆರ್.ಇ.ಪಿ. ಯೋಜನೆ |
|---|---|---|---|---|---|---|
| ೧ | ಕೋಲಾರ | ೧೯೮೩ | ೧೦.೪೫ | ೩೨ | ೬ | ೩ |
| ೨ | ಕೆ.ಜಿ.ಎಫ್. | ೧೯೮೨ | ೬೦೭ | ೪೨ | – | – |
| ೩ | ಚಿಂತಾಮಣಿ | ೧೯೮೪ | ೮.೬೭ | ೨೦ | ೫ | ೨ |
| ೪ | ಮಾಲೂರು | ೧೯೮೪ | ೨.೭೮ | ೧೮ | ೪ | ೧ |
| ೫ | ಚಿಕ್ಕಬಳ್ಳಾಪುರ ಮುದ್ದೇನಹಳ್ಳಿ | ೧೯೭೮ | ೩.೧೪ | ೧೨ | ೩ | ೩ |
| ೬ | ಮುಳಬಾಗಿಲು | ೧೯೮೬ | ೨.೦೨ | ೮ | ೬ | ೩ |
| ೭ | ಶಿಡ್ಲಘಟ್ಟ | ೧೯೮೫ | ೭.೦೮ | ೬ | ೫ | ೨ |
| ೮ | ಕೈಲನೂರು(ಕೋಲಾರ) | ೧೯೯೨ | ೨.೦೨ | ೧೦ | – | – |
| ೯ | ಗೌರಿಬಿದನೂರು | ೧೯೮೬ | ೨.೨೧ | ೮ | ೬ | ೧ |
| ೧೦ | ಮೈಸೂರು ಲ್ಯಾಂಪ್ಸ್‌ನ ಅಧೀನ ಕೈಗಾರಿಕಾ ಪ್ಲಾಟು | | | ೩೬ | – | – |
| ೧೧ | ಬಂಗಾರಪೇಟೆ | – | – | – | ೬ | ೧ |
| ೧೨ | ಶ್ರೀನಿವಾಸಪುರ | – | – | – | ೩ | ೨ |
| ೧೩ | ಬಾಗೇಪಲ್ಲಿ | – | – | – | ೪ | ೧ |
| ೧೪ | ಗುಡಿಬಂಡೆ | – | – | – | ೪ | ೨ |
| | ಒಟ್ಟು | – | – | ೧೪೨ | ೫೨ | ೨೧ |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ.

## ಹೋಟೆಲು ಉದ್ಯಮ

ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಚಿನ್ನದ ಗಣಿಯ ಉದ್ಯಮ ಅಭಿವೃದ್ಧಿಯಾಗಿ, ಕಾರ್ಮಿಕರ ಸಂಖ್ಯೆ ಹೆಚ್ಚಾಗ ತೊಡಗಿದಂತೆ. ಅವರ ಸೌಕರ್ಯಕ್ಕಾಗಿ ಹೋಟೆಲ್‌ಗಳ ಸ್ಥಾಪನೆಯು ಅನಿವಾರ್ಯವಾಯಿತು. ಇದನ್ನು ಮನಗಂಡ ಕೆಲವು ಉದ್ಯಮ ಸಾಹಸಿಗಳು ಹೋಟೆಲ್‌ಗಳನ್ನು ಬಾಡಿಗೆ ಮನೆಗಳಲ್ಲಿ ಸ್ಥಾಪಿಸಿದರು. ಹಾಗೆ ಸ್ಥಾಪಿಸಿದ ಒಬ್ಬ ಉದ್ಯಮ ಸಾಹಸಿಯೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದ ಅಣ್ಣಪ್ಪಭಟ್ಟರು. ಇವರು ೭೦ ವರ್ಷಗಳ ಹಿಂದೆ 'ಲಕ್ಷ್ಮಿ ಭವನ' ಎಂಬ ಹೆಸರಿನಲ್ಲಿ ಹೋಟೆಲ್ ಸ್ಥಾಪಿಸಿದರು. ಇವರ ಜೊತೆಯಲ್ಲಿ ಬಂದಿದ್ದ ಕೆಲವರು 'ಜನಾರ್ದನ ಹೋಟೆಲ್'ಅನ್ನು ಸ್ಥಾಪಿಸಿದರು. ಕೋಲಾರ ಜಿಲ್ಲೆಯ ಹೋಟೆಲ್ ಮಾಲೀಕರ ಅಧ್ಯಕ್ಷರ ಪ್ರಕಾರ ಕೋಲಾರದಲ್ಲಿ ೪೦–೫೦ ವರ್ಷಗಳ ಹಿಂದೆ ದೇವರಾಯನದುರ್ಗದ ರಾಮ ಅಯ್ಯರ್, ದೊರೆಸ್ವಾಮಿ ಅಯ್ಯರ್, ರಾಮಚಂದ್ರ ಅಯ್ಯರ್ ಮುಂತಾದವರು ಹೋಟೆಲುಗಳನ್ನು ಸ್ಥಾಪಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಕೆಲವರು ಕೋಲಾರ, ಬಂಗಾರಪೇಟೆ, ಚಿಂತಾಮಣಿಗಳಲ್ಲಿ ೪೦ ವರ್ಷಗಳ ಹಿಂದೆ ಸ್ಥಾಪಿಸಿದ ಹೋಟೆಲ್‌ಗಳು ಇಂದೂ ಕಾರ್ಯಪ್ರವೃತ್ತವಾಗಿವೆ.

ಕೋಲಾರ, ಮುಳಬಾಗಿಲು, ಅವನಿ, ಬೂದಿಕೋಟೆ, ಗೌರಿಬಿದನೂರು, ಕೈವಾರ, ಕುರುಡುಮಲೆ, ನಂದಿ, ನಂದಿದುರ್ಗ, ಸೀತಿಬೆಟ್ಟ, ಶಿವಾರಪಟ್ಟಣ, ವಕ್ಕಲೇರಿ, ಅಂಬಾಜಿದುರ್ಗ, ಚಿತ್ರಾವತಿ ಆಣೆಕಟ್ಟು, ಕೋಲಾರದ ಚಿನ್ನದ ಗಣಿಪ್ರದೇಶ, ಸಿರಗುಪ್ಪ ಸಕ್ಕರೆ

ಕಾರ್ಖಾನೆ, ಚಿಕ್ಕತಿರುಪತಿ, ಮುಂತಾದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು, ಇರುವುದರಿಂದಲೂ, ಹಲವಾರು ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು, ಇಂಜಿನೀಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳೂ, ಸರ್ಕಾರಿ ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳು ಸ್ಥಾಪನೆಯಾಗಿರುವುದರಿಂದಲೂ ಹೋಟೆಲ್‌ಗಳು ಅನಿವಾರ್ಯವಾಗಿವೆ. ಹೊರಗಿನಿಂದ ಬರುವ ರೋಗಿಗಳು, ಪ್ರವಾಸಿಗರು, ಭಕ್ತಾದಿಗಳು, ಉದ್ಯೋಗಾಕಾಂಕ್ಷಿಗಳು ಹಾಗೂ ವಿದ್ಯಾರ್ಥಿಗಳಿಗೆ ಉಪಹಾರ, ಊಟ, ವಸತಿ ಸೌಲಭ್ಯಗಳನ್ನು ಹೋಟೆಲ್ ಉದ್ಯಮ ಒದಗಿಸುತ್ತಿದೆ. ಜಿಲ್ಲೆಯಲ್ಲಿ ಯಾವುದೇ ಸ್ಟಾರ್ ಹೋಟೆಲ್‌ಗಳಿಲ್ಲದಿದ್ದರೂ, ***ಉಡ್ಡೀಸ್, ಶಾಂತಿಸಾಗರ*** ಮುಂತಾದ ಹೋಟೆಲ್‌ಗಳು ಊಟ ಮತ್ತು ವಸತಿ ಸೌಲಭ್ಯವನ್ನೊದಗಿಸುತ್ತಿವೆ. ಜಿಲ್ಲೆಯು ಬೆಂಗಳೂರಿಗೆ, ತಮಿಳುನಾಡಿನ ಹೊಸೂರು, ಆಂಧ್ರದ ಚಿತ್ತೂರುಗಳಿಗೆ ಸಮೀಪವಾಗಿರುವುದರಿಂದ, ಹೋಟೆಲ್ ಉದ್ಯಮಕ್ಕೆ ಪೂರ್ಣ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿಲ್ಲ.

ಕಾರ್ಮಿಕ ಕಾಯ್ದೆಗೊಳಪಟ್ಟಂತೆ ೨೦೦೪ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ಇದ್ದ ಹೋಟೆಲ್‌ಗಳ ಸಂಖ್ಯೆ ಹಾಗೂ ಅವುಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಸಂಖ್ಯೆಯ ತಾಲೂಕುವಾರು ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಿದೆ.

**ಕೋಷ್ಟಕ ೫.೨೫: ತಾಲೂಕುವಾರು ಹೋಟೆಲುಗಳ ಮತ್ತು ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆಯ ವಿವರ.**

| ಕ್ರ. ಸಂ. | ತಾಲ್ಲೂಕುಗಳು | ಹೋಟೆಲ್‌ಗಳ ಸಂಖ್ಯೆ | | ಕಾರ್ಮಿಕರ ಸಂಖ್ಯೆ | |
|---|---|---|---|---|---|
| | | ೨೦೦೦-೦೧ | ೨೦೦೩-೦೪ | ೨೦೦೦-೦೧ | ೨೦೦೩-೦೪ |
| ೧ | ಚಿಕ್ಕಬಳ್ಳಾಪುರ | ೪೪ | ೫೧ | ೬೭ | ೧೧೮ |
| ೨ | ಚಿಂತಾಮಣಿ | ೩೨ | ೫೯ | ೬೯ | ೮೨ |
| ೩ | ಬಾಗೇಪಲ್ಲಿ | ೩೧ | ೪೦ | ೪೭ | ೬೪ |
| ೪ | ಗುಡಿಬಂಡೆ | ೯ | ೧೨ | ೧೭ | ೨೨ |
| ೫ | ಕೋಲಾರ | ೨೮ | ೩೪ | ೧೨೦ | ೧೫೮ |
| ೬ | ಮಾಲೂರು | ೧೩ | ೧೮ | ೨೫ | ೩೭ |
| ೭ | ಮುಳಬಾಗಿಲು | ೧೦ | ೧೪ | ೩೬ | ೪೩ |
| ೮ | ಶ್ರೀನಿವಾಸಪುರ | ೧೭ | ೨೦ | ೨೫ | ೩೦ |
| ೯ | ಬಂಗಾರಪೇಟೆ | ೨೯ | ೩೪ | ೧೧೮ | ೧೩೨ |
| ೧೦ | ಗೌರಿಬಿದನೂರು | ೧೦ | ೧೩ | ೩೫ | ೪೩ |
| ೧೧ | ಶಿಡ್ಲಘಟ್ಟ | ೧೯ | ೨೩ | ೩೯ | ೪೭ |
| ೧೨ | ಕೆ.ಜಿ.ಎಫ್ ನಗರಸಭೆ | ೧೨ | ೧೫ | ೬೮ | ೨೯ |
| | ಒಟ್ಟು | ೨೫೩ | ೩೧೩ | ೬೨೫ | ೮೪೪ |

ಆಧಾರ: ಕಾರ್ಮಿಕ ಅಧಿಕಾರಿಯವರ ಕಛೇರಿ, ಕೋಲಾರ.

## ಕೋಲಾರ ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಇರುವ ಅವಕಾಶಗಳು

ಜಿಲ್ಲೆಯ ಕೈಗಾರಿಕಾಭಿವೃದ್ಧಿಯು ಸ್ಥಳೀಯವಾಗಿ ಜಿಲ್ಲೆಯಲ್ಲಿ ದೊರೆಯುವ ಸೌಲಭ್ಯಗಳನ್ನು ಅವಲಂಭಿಸಿದೆ. ಇಲ್ಲಿ ಮಾನವ ಸಂಪನ್ಮೂಲ ಅಪರಿಮಿತವಾಗಿದ್ದು, ಇದನ್ನು ಉಪಯೋಗಿಸಿ ಅನೇಕ ವಸ್ತುಗಳನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಹುದಾಗಿದೆ. ಕೋಲಾರ, ಮಾಲೂರು, ಬಂಗಾರಪೇಟೆ ಮತ್ತು ಚಿಕ್ಕಬಳ್ಳಾಪುರ ಪಟ್ಟಣಗಳ ಹೊರವಲಯದಲ್ಲಿ ಸ್ಥಾಪಿಸಲಾಗಿರುವ ಕೈಗಾರಿಕಾಭಿವೃದ್ಧಿ ಕ್ಷೇತ್ರಗಳ ಸಮರ್ಪಕ ಬಳಕೆ ಆಗಬೇಕಾಗಿದೆ. ಸ್ಥಳೀಯ ಸೌಲಭ್ಯಗಳನ್ನು ಬಳಸಿಕೊಂಡು ಉತ್ಪಾದನೆ ಮಾಡುವಂಥ ಉದ್ಯಮ ಸಾಹಸಿಗಳಿಗೆ ಅವಕಾಶ ಕೊಡಬೇಕಾಗಿದೆ. ರೋಗಪೀಡಿತವಾಗಿರುವ ಕೈಗಾರಿಕಾ ಘಟಕಗಳ ಸಮಸ್ಯೆಗಳ ಪರಿಹಾರಕ್ಕೆ ಗಮನ ಕೊಡಬೇಕಾಗಿದೆ. ಒಂದು ಕಾಲದಲ್ಲಿ ಕೋಲಾರದ ರೇಷ್ಮೆ ಜಗತ್ಪ್ರಸಿದ್ಧವಾಗಿತ್ತು. ಈಗ ಚೀನೀ ರೇಷ್ಮೆಯು ಕೋಲಾರದ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗೆ ಮಾರಕವಾಗಿದೆ. ಚೀನಾದ ರೇಷ್ಮೆಯು ಈ ಜಿಲ್ಲೆಯಿಂದ ನಿರ್ಗಮಿಸಬೇಕಾದರೆ ಸ್ಥಳೀಯ ರೇಷ್ಮೆಯ ಪೂರೈಕೆ ಮತ್ತು ಗುಣಮಟ್ಟ ಚೀನಾದ ರೇಷ್ಮೆಗಿಂತ ಉತ್ಕೃಷ್ಟವಾಗಬೇಕು. ಅಲ್ಲದೆ ಬೆಲೆಯೂ ಚೀನಾದ ರೇಷ್ಮೆಗೆ ಸವಾಲನ್ನು ಎದುರಿಸುವಂತಿರಬೇಕು. ರೇಷ್ಮೆ ವಲಯದಲ್ಲಿ ಆಧುನಿಕ ತಂತ್ರ ಜ್ಞಾನವನ್ನು ಜಾರಿಗೆ ತರುವುದರಿಂದ ಈ ಸವಾಲನ್ನು ಎದುರಿಸಬಹುದು.

ವ್ಯವಸಾಯಾಧಾರಿತ ಕೈಗಾರಿಕೆಗಳಾದ ಆಧುನಿಕ ಭತ್ತದ, ಅವಲಕ್ಕಿ, ಹಿಟ್ಟು ಬೀಸುವ, ಬೇಳೆ ಮಾಡುವ, ಕಡಲೆಕಾಯಿ ಸಿಪ್ಪೆ ಬೇರ್ಪಡಿಸುವ, ಎಣ್ಣೆ ಗಿರಣಿಗಳು, ಮಾವಿನ ಹಣ್ಣಿನರಸ, ತರಕಾರಿಗಳ ಸಂಸ್ಕರಣೆ ಹಾಲಿನ ಉತ್ಪನ್ನ ಹಾಗೂ ಸಂಸ್ಕರಣೆ, ರೇಷ್ಮೆ ನೂಲುವುದು, ನೇಯುವುದು, ಸಿದ್ಧ ಉಡುಪುಗಳ ತಯಾರಿಕೆಗೆ ವಿಪುಲ ಅವಕಾಶಗಳಿವೆ. ಖನಿಜಾಧಾರಿತ ಕೈಗಾರಿಕೆಗಳಾದ ಇಟ್ಟಿಗೆ, ಜೆಲ್ಲಿ ಮಾಡುವುದು, ಹೆಂಚು, ಮೊಸಾಯಿಕ್ ಟೈಲ್ಸ್, ಸಿಮೆಂಟ್, ಟೊಳ್ಳು ಇಟ್ಟಿಗೆ ಮುಂತಾದವು, ಫಿನಾಲ್, ಲಿಕ್ವಿಡ್ ಡಿಟರ್ಜೆಂಟ್, ಕರ್ಪೂರ, ಮೇಣದಬತ್ತಿ, ಬ್ಲೀಚಿಂಗ್ ಪೌಡರ್ ಮುಂತಾದ ರಾಸಾಯನಿಕ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದೆ. ಜಿಲ್ಲೆಯ ಕೋಲಾರ, ಮಾಲೂರು ಮತ್ತು ಬಂಗಾರಪೇಟೆ ಕೈಗಾರಿಕಾ ಅಭಿವೃದ್ಧಿ ಕೇಂದ್ರಗಳಲ್ಲಿ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನಕ್ಕೆ ಸೇರಿದ ಉದ್ಯಮಗಳನ್ನು ಸ್ಥಾಪಿಸುವುದಕ್ಕೆ ಮಹತ್ತರವಾದ ಅವಕಾಶವಿದೆ. ವಿದ್ಯುತ್ ಉಪಕರಣಗಳನ್ನು ತಯಾರಿಸುವ ಈ ಕಾರ್ಖಾನೆಗಳನ್ನು ಆ ಊರುಗಳಲ್ಲಿ ಸ್ಥಾಪಿಸಬಹುದು. ಸಣ್ಣ ಕೈಗಾರಿಕೆಗಳ ಕೇಂದ್ರವನ್ನಾಗಿ ಈ ಜಿಲ್ಲೆಯನ್ನು ಪರಿವರ್ತಿಸುವಂಥ ಸದವಕಾಶಗಳು ವಿಪುಲವಾಗಿವೆ. (ಹೆಚ್ಚಿನ ವಿವರಗಳಿಗೆ ಅಧ್ಯಾಯ–೮ ಅನ್ನು ನೋಡಿ)